ಶುಕ್ರವಾರ, ಜೂನ್ 2, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚಿತ್ರೀಕರಣ
ಪಂಜಾಬ್‌ನ ಪಟಿಯಾಲದಲ್ಲಿ ಟಿ.ವಿ ಕಾರ್ಯಕ್ರಮವೊಂದರ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದ ನಟ ಸೋನು ಸೂದ್

15 ಅಧಿಕಾರಿಗಳ ಆಸ್ತಿ ವಿವರ ಬಹಿರಂಗಪಡಿಸಿದ ಲೋಕಾಯುಕ್ತ ಪೊಲೀಸರು ● ದಾಖಲೆಗಳ ಪರಿಶೀಲನೆ

ಎರಡನೇ ದಿನವೂ ಮುಂದುವರಿದ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ್ದ ಆರೋಪದಡಿ 15 ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಬುಧವಾರ ದಾಳಿ ಮಾಡಿದ್ದ ಲೋಕಾಯುಕ್ತ ಪೊಲೀಸರು, ಎಲ್ಲರ ಆಸ್ತಿ ಪರಿಶೀಲನೆ ನಡೆಸುತ್ತಿದ್ದಾರೆ. ಕೆಲವೆಡೆ ಗುರುವಾರವೂ ಪೊಲೀಸರು ಶೋಧ ಮುಂದುವರಿಸಿದರು.

ಅಧಿಕಾರಿಗಳ ವಾಸಸ್ಥಳ ಹಾಗೂ ಇತರೆಡೆ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು, ಆಸ್ತಿ ವಿವರಗಳನ್ನು ಬಹಿರಂಗಪಡಿಸಿದ್ದಾರೆ. ಕೆಲ ಅಧಿಕಾರಿಗಳ ಆಸ್ತಿ ವಿವರ ಇಂತಿದೆ.

- ಎನ್.ಜಿ. ಪ್ರಮೋದ್‌ಕುಮಾರ್, ಬಿಬಿಎಂಪಿ ಬೊಮ್ಮನಹಳ್ಳಿ ವಲಯದ ಕಾರ್ಯನಿರ್ವಾಹಕ ಎಂಜಿನಿಯರ್ (ಒಟ್ಟು ಆಸ್ತಿ ₹8 ಕೋಟಿ): ಮಂಡ್ಯದ ಕೆ.ಎಂ. ದೊಡ್ಡಿಯ ದೇವರಹಳ್ಳಿಯಲ್ಲಿ 11 ಫ್ಲ್ಯಾಟ್‌ಗಳು ಇರುವ ಅಪಾರ್ಟ್‌ಮೆಂಟ್ ಸಮುಚ್ಚಯ, 1.20 ಎಕರೆ ಪರಿವರ್ತನೆ ಜಮೀನು, ಮೈಸೂರಿನ ಸತ್ಗಳ್ಳಿ ಬಳಿ 60x40 ಅಳತೆಯ ನಿವೇಶನ, ವಿಜಯನಗರದಲ್ಲಿ 60x88 ಹಾಗೂ 78x82 ಅಳತೆಯ ಎರಡು ನಿವೇಶನ, ಬೆಂಗಳೂರು ವಸಂತಪುರದಲ್ಲಿ 42x25 ಅಳತೆಯ ನಿವೇಶನ, ಜೆ.ಪಿ. ನಗರದಲ್ಲಿ 2 ಬಿಎಚ್‌ಕೆ ಫ್ಲ್ಯಾಟ್, ಎರಡು ಕಾರು, 857 ಗ್ರಾಂ ಚಿನ್ನ, 749 ಗ್ರಾಂ ಬೆಳ್ಳಿ ಹಾಗೂ ₹ 1.40 ಲಕ್ಷ ನಗದು.
- ಬಿ.ಆರ್. ಕುಮಾರ್, ಕಾರ್ಮಿಕ ಅಧಿಕಾರಿ, ಮಣಿಪಾಲ, ಉಡುಪಿ (ಒಟ್ಟು ಆಸ್ತಿ ₹ 1.40 ಕೋಟಿ): 275 ಗ್ರಾಂ ಚಿನ್ನ, 2 ಕೆ.ಜಿ 500 ಗ್ರಾಂ ಬೆಳ್ಳಿ, 2 ಕಾರು, ₹ 3 ಲಕ್ಷ ನಗದು, ಉಡುಪಿಯಲ್ಲಿ ನಿವೇಶನ ಹಾಗೂ ಮನೆ, ಮೈಸೂರು-ಹಾಸನದಲ್ಲಿ ಮೂರು ನಿವೇಶನ, ಅರಕಲಗೂಡಿನಲ್ಲಿ 2 ಎಕರೆ ಜಮೀನು.
- ಎ.ಎಂ.ನಿರಂಜನ್, ಹಿರಿಯ ಭೂಗರ್ಭ ವಿಜ್ಞಾನಿ, ವಿಕಾಸಸೌಧ (ಒಟ್ಟು ಆಸ್ತಿ ₹ 3.66 ಕೋಟಿ): 1444 ಗ್ರಾಂ ಚಿನ್ನ, 3 ಕೆ.ಜಿ 700 ಗ್ರಾಂ ಚಿನ್ನ, 2 ಕಾರು, ಮೆಡಿಕ್ಯೂಸ್ಟ್ ಹೆಲ್ತ್‌ಕೇರ್ ಮತ್ತು ಡಯಾಗ್ನೋಸ್ಟಿಕ್ಸ್ ಲ್ಯಾಬ್‌ನಲ್ಲಿ ₹ 1 ಕೋಟಿ ಹೂಡಿಕೆ, ಮಂಗಳೂರಿನಲ್ಲಿ 3 ಎಕರೆ ಜಮೀನು, ಕುಶಾಲನಗರದಲ್ಲಿ 50x80 ಅಳತೆಯ ನಿವೇಶನ.

ಝರಣಪ್ಪ ಚಿಂಚೋಳಿಕರ್ ಬಳಿ ₹ 4.5 ಕೋಟಿ ಆಸ್ತಿ ಪತ್ತೆ

ಕೊಪ್ಪಳ: ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ (ಕೆಆರ್‌ಐಡಿಎಲ್) ಕಾರ್ಯನಿರ್ವಾಹಕ ಎಂಜಿನಿಯರ್ ಝರಣಪ್ಪ ಎಂ. ಚಿಂಚೋಳಿಕರ್ ಕಾರ್ಯನಿರ್ವಹಿಸುತ್ತಿದ್ದ ಇಲ್ಲಿನ ಕಚೇರಿ ಮತ್ತು ಮನೆಯಲ್ಲಿ 26 ತಾಸು ಶೋಧ ನಡೆಸಿದ ಲೋಕಾಯುಕ್ತ ಅಧಿಕಾರಿಗಳು ಅಂದಾಜು ₹ 4.5 ಕೋಟಿ ಮೌಲ್ಯದ ಆಸ್ತಿ ಪತ್ತೆ ಹಚ್ಚಿದ್ದಾರೆ.

ಬುಧವಾರ ಬೆಳಿಗ್ಗೆ 6ಕ್ಕೆ ಆರಂಭವಾಗಿದ್ದ ಶೋಧ ಕಾರ್ಯ ಗುರುವಾರ ಬೆಳಿಗ್ಗೆ 8ಕ್ಕೆ ಪೂರ್ಣಗೊಂಡಿತು. ಸಂಜೆ ಅವುಗಳ ಮೌಲ್ಯವನ್ನು ಲೆಕ್ಕ ಮಾಡಲಾಯಿತು. ಅಧಿಕಾರಿಗಳು ಬುಧವಾರ ಬೆಳಿಗ್ಗೆಯಿಂದ ರಾತ್ರಿಯ ತನಕ ಕಚೇರಿಯಲ್ಲಿ ಮಾತ್ರ ಶೋಧ ಮಾಡಿದ್ದರು. ಕಲಬುರಗಿಗೆ ತೆರಳಿದ್ದ ಚಿಂಚೋಳಿಕರ್ ಮಧ್ಯರಾತ್ರಿ ಕೊಪ್ಪಳಕ್ಕೆ ಬಂದರು. ಬಳಿಕ ಅಧಿಕಾರಿಗಳು ಇಲ್ಲಿನ ಶಿವಶಾಂತವೀರ ನಗರದಲ್ಲಿರುವ ಅವರ ಮನೆಯಲ್ಲಿ ಶೋಧ ನಡೆಸಿದಾಗ ಅಪಾರ ಪ್ರಮಾಣದ ಹಣ, ಚಿನ್ನ ಮತ್ತು ದಾಖಲೆಗಳು ಲಭ್ಯವಾಗಿವೆ.

‘ಕಲಬುರಗಿ ನಗರದಲ್ಲಿ ನಾಲ್ಕು ಸಾವಿರ ಚದರ ಅಡಿಯಲ್ಲಿ ನಿರ್ಮಾಣ ಹಂತದಲ್ಲಿರುವ ಬೆಲೆ ಬಾಳುವ ಮನೆ, ಬೀದರ್‌ನಲ್ಲಿ ಮನೆ, ಚಿಟಗುಪ್ಪ ತಾಲ್ಲೂಕಿನ ಮುತ್ತಂಗಿ ಗ್ರಾಮದ ಫಾರ್ಮ್ ಹೌಸ್ ಮತ್ತು ಬ್ಯಾಂಕ್‌ನಲ್ಲಿಟ್ಟಿರುವ ₹ 1.5 ಕೋಟಿ ನಿಶ್ಚಿತ ಠೇವಣಿ (ಎಫ್‌ಡಿ) ಸೇರಿ ₹ 3.5 ಕೋಟಿ ಆಸ್ತಿ ಮೌಲ್ಯ ಎಂದು ಅಂದಾಜಿಸಲಾಗಿದೆ. ಕೊಪ್ಪಳದ ಮನೆಯಲ್ಲಿ ಸಿಕ್ಕ ಚಿನ್ನ, ನಗದು, ಲ್ಯಾಪ್‌ಟಾಪ್, ಸ್ಮಾರ್ಟ್ ಫೋನ್‌ಗಳು, ವಾಹನಗಳು, ಟ್ಯಾಬ್ ಸೇರಿ ಇವೆಲ್ಲವುಗಳ ಮೌಲ್ಯ ₹ 1 ಕೋಟಿ ಆಗಲಿದೆ’ ಎಂದು ಲೋಕಾಯುಕ್ತ ಅಧಿಕಾರಿಯೊಬ್ಬರು ತಿಳಿಸಿದರು. ಚಿಂಚೋಳಿಕರ್ ವಿರುದ್ಧ ಕೊಪ್ಪಳದಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಚಿಂಚೋಳಿಕರ್ ಕಲಬುರಗಿಗೆ ತೆರಳಿದ್ದರಿಂದ ಅವರು ಬರುವ ತನಕ ಮನೆ ಕೀಲಿ ತೆಗೆಯುವಂತಿರಲಿಲ್ಲ. ಹೀಗಾಗಿ ಶೋಧ ಕಾರ್ಯ ಪೂರ್ಣಗೊಳ್ಳಲು 26 ತಾಸು ಬೇಕಾಯಿತು’ ಎಂದು ಅಧಿಕಾರಿಯೊಬ್ಬರು ಹೇಳಿದ್ದರು.

ಕೊಪ್ಪಳದಲ್ಲಿರುವ ಝರಣಪ್ಪ ಎಂ. ಚಿಂಚೋಳಿಕರ್ ಮನೆ

8 ನಿವೇಶನಗಳ ಒಡೆಯ!

ತುಮಕೂರು: ಮೈಸೂರಿನ ಕೆಐಎಡಿಬಿ ಕಾರ್ಯನಿರ್ವಾಹಕ ಎಂಜಿನಿಯರ್ ಸಿ.ಎನ್.ಮೂರ್ತಿ ಅವರು ನಗರ ಹಾಗೂ ವಿವಿಧೆಡೆ ಎಂಟು ನಿವೇಶನ, ಎರಡು ಮನೆ ಹೊಂದಿರುವುದು ಪತ್ತೆಯಾಗಿದೆ.

ಬುಧವಾರ ತಡರಾತ್ರಿವರೆಗೂ ನಡೆದ ಪರಿಶೀಲನೆ ವೇಳೆ ₹7.76 ಲಕ್ಷ ನಗದು, ಒಂದು ಕೆ.ಜಿ ಬಂಗಾರ, ಮೂರು ಕೆ.ಜಿ ಬೆಳ್ಳಿ, ಎಂಟು ನಿವೇಶನ, ಎರಡು ಮನೆ, ಮೂರು ವಾಹನಗಳು ಪತ್ತೆಯಾಗಿವೆ. ಆಸ್ತಿಯ ಒಟ್ಟು ಮೌಲ್ಯ ₹3.16 ಕೋಟಿ ಎಂದು ಅಂದಾಜು ಮಾಡಲಾಗಿದೆ.

ದಾಖಲೆಗಳ ಪರಿಶೀಲನೆ ಕಾರ್ಯ ಮುಂದುವರೆದಿದ್ದು, ಇನ್ನೂ ಹೆಚ್ಚಿನ ಆದಾಯ ಹೊಂದಿರುವುದಕ್ಕೆ ದಾಖಲೆಗಳು ಲಭ್ಯವಾಗುವ ಸಾಧ್ಯತೆಗಳಿವೆ ಎಂದು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ವಲಿಬಾಷಾ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಶಿರಾಡಿ ಘಾಟ್: ಚತುಷ್ಪಥದಲ್ಲೇ ಸುರಂಗ ಮಾರ್ಗ– ಕಟೀಲ್

ಮಂಗಳೂರು: ಮಂಗಳೂರು–ಬೆಂಗಳೂರು ಮಾರ್ಗದ ನಡುವಿನ ಶಿರಾಡಿ ಘಾಟ್‌ನಲ್ಲಿ ನೇರ ಸುರಂಗ ಮಾರ್ಗ ನಿರ್ಮಾಣದ ಪ್ರಸ್ತಾವ ಕೈಬಿಡಲಾಗಿದ್ದು, ಉದ್ದೇಶಿತ ಚತುಷ್ಪಥದಲ್ಲೇ ಸುರಂಗ ಮಾರ್ಗವೂ ಇರುವ ಯೋಜನೆ ರೂಪಿಸಲಾಗಿದೆ ಎಂದು ಸಂಸದ ನಳಿನ್‌ಕುಮಾರ್ ಕಟೀಲ್ ಹೇಳಿದರು.

‘ನೇರ ಸುರಂಗ ಮಾರ್ಗ ನಿರ್ಮಾಣಕ್ಕೆ, ಅರಣ್ಯ ಇಲಾಖೆ ಅನುಮತಿ ಕ್ಲಿಷ್ಟವಾಗಿದ್ದು, ಜತೆಗೆ ₹ 12 ಸಾವಿರ ಕೋಟಿ ವೆಚ್ಚವಾಗುತ್ತದೆ. ಅದರ ಬದಲು ಈಗ ಇರುವ ಹೆದ್ದಾರಿಯನ್ನು ಚತುಷ್ಪಥವಾಗಿ ಪರಿವರ್ತಿಸುವಾಗ ಮೂರು ಸುರಂಗಗಳು ಒಳಗೊಂಡಿರುತ್ತವೆ. ಉಳಿದ ಕಡೆಗಳಲ್ಲಿ ಮೇಲ್ಸೇತುವೆ ನಿರ್ಮಾಣವಾಗಲಿದೆ. ಈ ಪರಿಷ್ಕೃತ ಯೋಜನೆಗೆ ₹2,500 ಕೋಟಿ ವೆಚ್ಚದ ಡಿಪಿಆರ್ ಸಿದ್ಧಪಡಿಸಲಾಗಿದೆ’ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೈಸೂರು-ಸುಬ್ರಹ್ಮಣ್ಯ ಮಾರ್ಗ ಹಾಗೂ ಪುತ್ತೂರು-ಮಂಗಳೂರು ನಡುವಿನ ರೈಲು ಹಳಿ ವಿದ್ಯುದೀಕರಣ ಪೂರ್ಣಗೊಂಡ ಮೇಲೆ ‘ವಂದೇ ಭಾರತ್’ ರೈಲು ಮಂಗಳೂರು-ಬೆಂಗಳೂರು ಮಧ್ಯೆ ಸಂಚರಿಸಲಿದೆ. ಪ್ರಸಕ್ತ ತಿರುವನಂತಪುರ-ಕಾಸರಗೋಡು ನಡುವಿನ ವಂದೇ ಭಾರತ್ ರೈಲನ್ನು ಮಂಗಳೂರಿಗೆ ವಿಸ್ತರಿಸುವ ಬಗ್ಗೆ ರೈಲ್ವೆ ಸಚಿವರಿಗೆ ಮನವಿ ಸಲ್ಲಿಸಲಾಗಿದ್ದು, ಶೀಘ್ರ ತೀರ್ಮಾನವಾಗಲಿದೆ. ಮಡಿಕೇರಿ-ಮಾಣಿ ಚತುಷ್ಪಥ ಹೆದ್ದಾರಿ ಯೋಜನೆ ಕಾರ್ಯಗತಗೊಳ್ಳುತ್ತಿದೆ. ಕಳೆದ ಒಂಬತ್ತು ವರ್ಷಗಳಲ್ಲಿ ಕೇಂದ್ರದಿಂದ ಜಿಲ್ಲೆಗೆ ₹38 ಸಾವಿರ ಕೋಟಿ ಅನುದಾನ ದೊರೆತಿದೆ. ₹16 ಸಾವಿರ ಕೋಟಿ ಮೊತ್ತದ ಯೋಜನೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ಇನ್ನು ಒಂದು ವರ್ಷದಲ್ಲಿ ಒಟ್ಟು ₹50 ಸಾವಿರ ಕೋಟಿಗೂ ಅಧಿಕ ಮೊತ್ತದ ಯೋಜನೆ ಕಾರ್ಯಗತಗೊಳ್ಳಲಿದೆ ಎಂದರು.

‘ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆ ಅನುಷ್ಠಾನ ವಿಳಂಬದಿಂದ ಕರೆಂಟ್ ಬಿಲ್ ಕೇಳಲು ಹೋಗುವ ಸರ್ಕಾರಿ ನೌಕರರು ಬೀದಿಯಲ್ಲಿ ಏಟು ತಿನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ’ ಎಂದು ಹೇಳಿದರು.

ಗೋವಿಂದರಾಜ್, ನಜೀರ್ ಅಹ್ಮದ್ ಸಿ.ಎಂ ರಾಜಕೀಯ ಕಾರ್ಯದರ್ಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಸದಸ್ಯರಾದ ಕೆ. ಗೋವಿಂದರಾಜ್ ಮತ್ತು ನಜೀರ್ ಅಹ್ಮದ್ ಅವರನ್ನು ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿಗಳನ್ನಾಗಿ ನೇಮಿಸಿ ರಾಜ್ಯ ಸರ್ಕಾರ ಗುರುವಾರ ಆದೇಶ ಹೊರಡಿಸಿದೆ.

ಅಲ್ಲದೆ, ಚುನಾವಣಾ ಕಾರ್ಯತಂತ್ರ ನಿಪುಣ ಸುನೀಲ್ ಕನುಗೋಲು ಅವರನ್ನು ಮುಖ್ಯಮಂತ್ರಿ ಮುಖ್ಯ ಸಲಹೆಗಾರರನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ. ಕಾಂಗ್ರೆಸ್ ಪಕ್ಷ ಅಭೂತಪೂರ್ವ ಗೆಲುವು ಸಾಧಿಸಿ ಅಧಿಕಾರದ ಚುಕ್ಕಾಣಿ ಹಿಡಿಯುವಲ್ಲಿ ಕನುಗೋಲು ತೆರೆಮರೆಯಲ್ಲಿ ಕೆಲಸ ಮಾಡಿದ್ದರು.

ಈ ಮೂವರಿಗೂ ಸಂಪುಟ ದರ್ಜೆ ಸಚಿವರ ಸ್ಥಾನಮಾನದೊಂದಿಗೆ, ಎಲ್ಲ ಸೌಲಭ್ಯಗಳನ್ನು ನೀಡುವಂತೆ ಆದೇಶದಲ್ಲಿ ತಿಳಿಸಲಾಗಿದೆ.

ಎ.ಎಸ್. ಪೊನ್ನಣ್ಣ ಕಾನೂನು ಸಲಹೆಗಾರ: ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್. ಪೊನ್ನಣ್ಣ ಅವರನ್ನು ತಮ್ಮ ಕಾನೂನು ಸಲಹೆಗಾರನನ್ನಾಗಿ ನೇಮಿಸಿ ಆದೇಶ ಹೊರಡಿಸುವಂತೆ ಮುಖ್ಯ ಕಾರ್ಯದರ್ಶಿಗೆ ಸಿ.ಎಂ ಸೂಚಿಸಿದ್ದಾರೆ. ಅವರಿಗೂ ಸಂಪುಟ ದರ್ಜೆ ಸಚಿವರ ಸ್ಥಾನಮಾನ ನೀಡುವಂತೆ ತಿಳಿಸಿದ್ದಾರೆ.

ಸಿಡಿಲು ಬಡಿದು ಮೂವರ ಸಾವು

3 ಮಂದಿಗೆ ಗಂಭೀರ ಗಾಯ ● ನೂರಾರು ಮರ, ವಿದ್ಯುತ್ ಕಂಬಗಳು ಧರೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಬಳ್ಳಾರಿ, ಹುಬ್ಬಳ್ಳಿ-ಧಾರವಾಡ, ಉತ್ತರ ಕನ್ನಡ, ಗದಗ, ವಿಜಯಪುರ, ಮಂಡ್ಯ ಜಿಲ್ಲೆಯಲ್ಲಿ ಗುರುವಾರ ಜೋರು ಮಳೆ ಸುರಿಯಿತು. ಸಿಡಿಲು ಬಡಿದು ಮೂವರು ಮೃತಪಟ್ಟಿದ್ದಾರೆ.

ಮದುವೆಗೆ ತೆರಳಿದ್ದ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕು ಉತ್ತನೂರು ಗ್ರಾಮದ ಶೇಖರಗೌಡ(32) ಮತ್ತು ಬಸವನಗೌಡ (38) ಎಂಬುವರು ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಹೊಸಪೇಟೆ ತಾಲ್ಲೂಕಿನ ಧರ್ಮಸಾಗರ, ಕುರುಗೋಡು ತಾಲ್ಲೂಕಿನ ಕೊಳೂರು ಮದಿರೆ ಮತ್ತು ಸಿರುಗುಪ್ಪ ತಾಲ್ಲೂಕಿನ ಬೊಮ್ಮಲಾಪುರದ ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರನ್ನು ಆಂಧ್ರ ಪ್ರದೇಶದ ಆಲೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಶೇಖರಗೌಡ ಸಹೋದರ ಅಯ್ಯನಗೌಡ ತಿಳಿಸಿದ್ದಾರೆ.

ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನ ಬೆಂಡೋಣಿ ಗ್ರಾಮದ ಹೊರವಲಯದ ಜಮೀನಿನಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದ ನೂರ್ ಅಹ್ಮದ್ ರಾಜಾಸಾಬ್ (23) ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲ್ಲೂಕಿನಲ್ಲಿ ಆಲಿಕಲ್ಲು ಮಳೆಗೆ 61.19 ಎಕರೆ ಬಾಳೆಗೆ ಹಾನಿಯಾಗಿದೆ. ತಾಲ್ಲೂಕಿನ ಚಿಕ್ಕಜಾಯಿಗನೂರು, ದೇವಸಮುದ್ರ, ಶಾಂತಿನಗರ, ನೆಲ್ಲೂಡಿ ಸೇರಿ ಕೆಲ ಗ್ರಾಮಗಳಲ್ಲಿ ಹಲವು ಶೆಡ್‌ಗಳಿಗೆ ಹಾಕಿದ ತಗಡುಗಳು ಹಾರಿ ಹೋಗಿವೆ. ಮರ, ವಿದ್ಯುತ್ ಪರಿವರ್ತಕ, ಕಂಬಗಳು ಬಿದ್ದಿವೆ. ಎಮ್ಮಿಗನೂರು ಗ್ರಾಮದ ತಿಮ್ಮನಕೇರಿ ಕ್ಯಾಂಪ್‌ನಲ್ಲಿ ಭತ್ತದ ಹುಲ್ಲಿನ ಬಣವಿ ಸಿಡಿಲಿಗೆ ಸಂಪೂರ್ಣ ಸುಟ್ಟು ಹೋಗಿದೆ.

ಕುರುಗೋಡಿನಲ್ಲಿ ಬಿರುಗಾಳಿಗೆ ತಾಲ್ಲೂಕಿನ ಗುತ್ತಿಗನೂರು ಗ್ರಾಮದಲ್ಲಿ 20ಕ್ಕೂ ಅಧಿಕ ವಿದ್ಯುತ್ ಕಂಬಗಳು ಧರೆಗುರುಳಿವೆ. ನಾಲ್ಕು ಬೇವಿನ ಮರಗಳು ನೆಲಕ್ಕುರುಳಿವೆ.

ಧಾರವಾಡ ಹಾಗೂ ಹುಬ್ಬಳ್ಳಿ ನಗರ ಸೇರಿದಂತೆ ವಿವಿಧೆಡೆ ಬುಧವಾರ ತಡರಾತ್ರಿ 2 ಗಂಟೆ ರಭಸದ ಮಳೆಯಾಯಿತು. ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ, ಜೊಯಿಡಾ, ಕಾರವಾರ, ಅಂಕೋಲಾದಲ್ಲಿ ಮಳೆಯಾಗಿದೆ.

ವಿಜಯಪುರ ಜಿಲ್ಲೆ ಬಬಲೇಶ್ವರದಲ್ಲಿ ಬಿರುಗಾಳಿಗೆ ತಾಲ್ಲೂಕಿನ ಕನಮುಚನಾಳ ಸರ್ಕಾರಿ ಪ್ರೌಢಶಾಲೆಯ ಕಾಂಪೌಂಡ್ ಮತ್ತು ಮರಗಳು ನೆಲಕ್ಕುರುಳಿವೆ. ಮೈಸೂರು ನಗರದಲ್ಲೂ ತಾಸಿಗೂ ಹೆಚ್ಚು ಜೋರು ಮಳೆಯಾಯಿತು.

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ವಿವಿಧೆಡೆ ಬುಧವಾರ ತಡರಾತ್ರಿ ಬಿರುಗಾಳಿ ಸಹಿತ ಮಳೆಯಾಗಿದೆ. ಇದರಿಂದ ವೈದ್ಯನಾಥಪುರ, ಆಲೂರು, ನೀಲಕಂಠನಹಳ್ಳಿ, ಕೆ.ಹೊನ್ನಲಗೆರೆ, ಕೆಸ್ತೂರು, ಮಲ್ಲನಕುಪ್ಪೆ ಸೇರಿದಂತೆ ಹಲವು ಕಡೆ 100ಕ್ಕೂ ಹೆಚ್ಚು ಮರಗಳು ಧರೆಗುರುಳಿದ್ದು, ಕೆಲ ಮನೆಗಳ ಸಿಮೆಂಟ್ ಶೀಟ್ ಹಾರಿ ಹೋಗಿವೆ.

ಮಳವಳ್ಳಿ ತಾಲ್ಲೂಕಿನ ಜವನಗಹಳ್ಳಿ ಗುಡ್ಡದ ಸಮೀಪ ಕೊಳ್ಳೇಗಾಲ ರಸ್ತೆಯಲ್ಲಿ ದೊಡ್ಡ ಮರ ಬುಡಸಮೇತ ಮುರಿದು ಬಿದ್ದು ಮಧ್ಯಾಹ್ನದವರೆಗೂ ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು. ವಾಹನಗಳು ಜವನಗಹಳ್ಳಿ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ– 209ರ ಬೈಪಾಸ್ ರಸ್ತೆಯ ಮೂಲಕ ಸಂಚರಿಸಬೇಕಾಯಿತು. ಬಾಣಸಮುದ್ರ ಗ್ರಾಮದ ಹೊರವಲಯದಲ್ಲಿ ರೇಷ್ಮೆ ಸಾಕಣೆ ಕೇಂದ್ರದ ಚಾವಣಿ ಹಾರಿ ಹೋಗಿ ನಷ್ಟ ಸಂಭವಿಸಿದೆ.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಬೆಳಕವಾಡಿ ಸಮೀಪದ ಕೊಳ್ಳೇಗಾಲ ರಸ್ತೆಯಲ್ಲಿ ಮರವೊಂದು ಉರುಳಿ ಬಿದ್ದಿದೆ

‘ಯೆಲ್ಲೊ ಅಲರ್ಟ್’ ಮುಂದುವರಿಕೆ

ಬೆಂಗಳೂರು: ರಾಜ್ಯದ ವಿವಿಧೆಡೆ ಶುಕ್ರವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಕೋಲಾರ ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಹಲವು ಕಡೆ, ಉತ್ತರ ಒಳನಾಡಿನ ಒಂದೆರಡು ಕಡೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ಕರಾವಳಿಯ ಒಂದೆರಡು ಕಡೆ ಬಿರುಗಾಳಿ ಸಹಿತ ಗುಡುಗು ಉಂಟಾಗುವ ಸಾಧ್ಯತೆಯಿದ್ದು, ಗಾಳಿಯ ವೇಗವು ಗಂಟೆಗೆ 40ರಿಂದ 50 ಕಿ.ಮೀ. ಇರಲಿದೆ. ಬೆಂಗಳೂರಿನಲ್ಲಿ ಸಂಜೆ ಅಥವಾ ರಾತ್ರಿಯ ವೇಳೆ ಒಂದೆರಡು ಸಲ ಬಿರುಗಾಳಿ, ಗುಡುಗು ಸಹಿತ ಮಳೆಯಾಗುವ ಸಂಭವವಿದೆ. ಕರಾವಳಿ ಹಾಗೂ ದಕ್ಷಿಣ ಒಳನಾಡಿನ ವಿವಿಧೆಡೆ ಮುಂದಿನ ಐದು ದಿನ ಮಳೆ ಮುಂದುವರಿಯಲಿದೆ ಎಂದು ತಿಳಿಸಿದೆ.

ಗುರುವಾರ ಬೆಳಿಗ್ಗೆ 8.30ಕ್ಕಿಂತ ಹಿಂದಿನ 24 ಗಂಟೆಯ ಅವಧಿಯಲ್ಲಿ ರಾಜ್ಯದ ಹಲವೆಡೆ ಮಳೆಯಾಗಿದೆ. ಹಾವೇರಿಯ ಶಿಗ್ಗಾಂವಿ ಹಾಗೂ ಚಿಕ್ಕಮಗಳೂರಿನ ತರೀಕೆರೆಯಲ್ಲಿ ಗರಿಷ್ಠ (ತಲಾ 5 ಸೆಂ.ಮೀ.) ಮಳೆಯಾಗಿದೆ ಎಂದು ಇಲಾಖೆ ಹೇಳಿದೆ.

ಬುದ್ಧಿಮಾಂದ್ಯ ಅವಳಿ ಮಕ್ಕಳ ಕೊಂದ ತಂದೆಯ ಬಂಧನ

ದಾವಣಗೆರೆ: ಜಿಲ್ಲೆಯ ರಾಣೇಬೆನ್ನೂರು ಸಮೀಪದ ಚಳಗೇರಿ ಬಳಿ ಬುಧವಾರ ರಾತ್ರಿ ಇಬ್ಬರು ಬುದ್ಧಿಮಾಂದ್ಯ ಮಕ್ಕಳನ್ನು ತಂದೆಯೇ ಕೊಲೆ ಮಾಡಿದ್ದಾರೆ.

ನಗರದ ಆಂಜನೇಯ ಬಡಾವಣೆಯ ನಿವಾಸಿ ಅಮರ್ ಕೊಲೆ ಮಾಡಿದ ವ್ಯಕ್ತಿ. ನಾಲ್ಕೂವರೆ ವರ್ಷದ ಅವಳಿ ಮಕ್ಕಳಾದ ಅದ್ವೈತ್ ಹಾಗೂ ಅನ್ವಿತ್ ಕೊಲೆಯಾದವರು.

ಗೋಕಾಕ್ ಮೂಲದ ಅಮರ್ ಹರಿಹರ ಸಮೀಪದ ಕಾರ್ಖಾನೆಯೊಂದರಲ್ಲಿ ಕೆಮಿಕಲ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರ ಪತ್ನಿ ಜಯಲಕ್ಷ್ಮಿ ತಮ್ಮ ತಂದೆಯ ಸಾವಿನ ಹಿನ್ನೆಲೆಯಲ್ಲಿ ತವರೂರು ವಿಜಯಪುರಕ್ಕೆ ತೆರಳಿದ್ದರು. ದಾವಣಗೆರೆಯ ವಿದ್ಯಾನಗರ ಠಾಣೆಯ ಪೊಲೀಸರು ಆರೋಪಿ ತಂದೆಯನ್ನು ಗುರುವಾರ ಬಂಧಿಸಿದ್ದಾರೆ.

ಅಜ್ಜಿ ಸಾವಿತ್ರಮ್ಮ ಅವರ ಜೊತೆಯಲ್ಲಿ ಮಲಗಿದ್ದ ಇಬ್ಬರೂ ಮಕ್ಕಳನ್ನು ರಾತ್ರಿ ಕಾರ್‌ನಲ್ಲಿ ಹಾವೇರಿ ಜಿಲ್ಲೆಯ ಚಳಗೇರಿ ಸಮೀಪದ ಟೋಲ್ ಹತ್ತಿರ ಕರೆದುಕೊಂಡು ಹೋದ ಅಮರ್, ಅಲ್ಲಿನ ಸರ್ವೀಸ್ ರಸ್ತೆಯಲ್ಲಿ ವಾಹನ ನಿಲ್ಲಿಸಿ ಮಕ್ಕಳ ಬಾಯಿಗೆ ಟೇಪ್ ಸುತ್ತಿ ಉಸಿರುಗಟ್ಟಿಸಿ ಕೊಲೆ ಮಾಡಿದ್ದಾನೆ.

‘ಬುದ್ಧಿಮಾಂದ್ಯರಾದ ಮಕ್ಕಳಿಗೆ ಸರಿಯಾಗಿ ಮಾತನಾಡಲು ಬರುತ್ತಿರಲಿಲ್ಲ. ಎಲ್ಲದಕ್ಕೂ ಹಠ ಮಾಡುತ್ತಿದ್ದರು. ಇದರಿಂದ ಬೇಸತ್ತು ಕೊಲೆ ಮಾಡಿದ್ದೇನೆ’ ಎಂದು ಆರೋಪಿ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಉನ್ನತ ಶಿಕ್ಷಣ ವೈಜ್ಞಾನಿಕ ತಳಹದಿಯಲ್ಲಿ ಇರಲಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉನ್ನತ ಶಿಕ್ಷಣವನ್ನು ವೈಜ್ಞಾನಿಕ ತಳಹದಿಯಲ್ಲಿ ಬಲಪಡಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ಅದಕ್ಕೆ ಹೊರತಾದದ್ದನ್ನು ಒಪ್ಪಿಕೊಳ್ಳುವುದಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಗುರುವಾರ ತಮ್ಮನ್ನು ಭೇಟಿಯಾದ ಕುಲಪತಿಗಳ ನಿಯೋಗದ ಜೊತೆ ಗೃಹ ಕಚೇರಿ ಕೃಷ್ಣದಲ್ಲಿ ಸುಮಾರು 45 ನಿಮಿಷ ಚರ್ಚೆ ನಡೆಸಿದ ಮುಖ್ಯಮಂತ್ರಿ, ‘ವಿಶ್ವವಿದ್ಯಾಲಯಗಳು ಸಾಮಾಜಿಕ ಚಿಂತನೆ ಅಳವಡಿಸಿಕೊಳ್ಳದೆ, ಸಮಾಜವನ್ನು ವಿಭಜಿಸುವ ರೀತಿಯಲ್ಲಿ ವರ್ತಿಸಬಾರದು’ ಎಂದರು.

ವಿಶ್ವವಿದ್ಯಾಲಯಗಳ ಕಾರ್ಯವೈಖರಿ ನಿಜವಾದ ಉದ್ದೇಶಗಳಿಂದ ವಿಮುಖ ಆಗುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ ಮುಖ್ಯಮಂತ್ರಿ, ‘ಸಾಮಾಜಿಕ ಮೌಲ್ಯ, ಸಾಮಾಜಿಕ ನ್ಯಾಯಕ್ಕಾಗಿ ವಿಶ್ವವಿದ್ಯಾಲಯಗಳು ತುಡಿಯಬೇಕು. ದೇಶದ ಭವಿಷ್ಯವನ್ನು ಹೆಚ್ಚು ವೈಜ್ಞಾನಿಕವಾಗಿ ರೂಪಿಸುವ ಶಕ್ತಿ ವಿಶ್ವವಿದ್ಯಾಲಯಗಳಿಗಿದೆ. ಆದರೆ, ನಿಜವಾದ ಉದ್ದೇಶಗಳಿಂದ ವಿಮುಖವಾಗಿ ಪ್ರತಿಗಾಮಿಯಾದರೆ, ವಿದ್ಯಾರ್ಥಿಗಳ ಮತ್ತು ದೇಶದ ಭವಿಷ್ಯ ಕರಾಳ ಆಗುತ್ತದೆ’ ಎಂದರು.

ಮಡಿಕೇರಿ ವಿಶ್ವವಿದ್ಯಾಲಯದ ಪ್ರೊ. ಅಶೋಕ್ ಆಲೂರು, ಕೊಪ್ಪಳ ವಿಶ್ವವಿದ್ಯಾಲಯದ ಡಾ.ಬಿ.ಕೆ. ರವಿ, ಬಾಗಲಕೋಟೆ ವಿಶ್ವವಿದ್ಯಾಲಯದ ಪ್ರೊ. ದೇಶಪಾಂಡೆ, ಹಾವೇರಿ ವಿಶ್ವವಿದ್ಯಾಲಯದ ಡಾ. ಜಂಗಮಶೆಟ್ಟಿ, ಬೀದರ್ ವಿಶ್ವವಿದ್ಯಾಲಯದ ಪ್ರೊ. ಬಿರಾದಾರ್, ಹಾಸನ ವಿಶ್ವವಿದ್ಯಾಲಯದ ಪ್ರೊ. ತಾರಾನಾಥ್, ಚಾಮರಾಜನಗರ ವಿಶ್ವವಿದ್ಯಾಲಯದ ಪ್ರೊ.ಗಂಗಾಧರ್ ನಿಯೋಗದಲ್ಲಿದ್ದರು.

ಸಂಕ್ಷಿಪ್ತ ಸುದ್ದಿ

ನಾಲ್ವರು ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ನಾಲ್ವರು ಐಎಎಸ್ ಅಧಿಕಾ2ರಿಗಳನ್ನು ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಗುರುವಾರ ಆದೇಶ ಹೊರಡಿಸಿದೆ.

ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕಟಾರಿಯಾ ಅವರನ್ನು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಕಾರ್ಯದರ್ಶಿ ಪಂಕಜ್ ಪಾಂಡೆ ಅವರನ್ನು ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಿಸಲಾಗಿದೆ.

ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕಿ ಎನ್. ಮಂಜುಳಾ ಅವರನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಕೃಷಿ ಇಲಾಖೆಯ ಆಯುಕ್ತ ಶರತ್ ಬಿ. ಅವರನ್ನು ಕರ್ನಾಟಕ ಗ್ರಾಮೀಣ ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರಾಗಿ ವರ್ಗಾವಣೆ ಮಾಡಲಾಗಿದೆ.

ಬಿಲ್ ಕೇಳಿದ ಸೆಸ್ಕ್ ಸಿಬ್ಬಂದಿ ಮೇಲೆ ಹಲ್ಲೆ

ಅರಕಲಗೂಡು (ಹಾಸನ ಜಿಲ್ಲೆ): ವಿದ್ಯುತ್ ಬಿಲ್ ಬಿಲ್ ವಸೂಲಿಗೆ ಹೋಗಿದ್ದ ಸೆಸ್ಕ್ ಸಿಬ್ಬಂದಿ ಮೇಲೆ ತಂದೆ ಹಾಗೂ ಅಪ್ರಾಪ್ತ ವಯಸ್ಸಿನ ಪುತ್ರ ಹಲ್ಲೆ ಮಾಡಿದ್ದಾರೆ.

ಇಲ್ಲಿನ ಹಳೇ ಕೋರ್ಟ್ ರಸ್ತೆಯಲ್ಲಿರುವ ಕೋಳಿ ಅಂಗಡಿ ಮಾಲೀಕ ಸುರೇಶ್ ಎಂಬುವವರು ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡಿದ್ದು, ಬುಧವಾರ ಸೆಸ್ಕ್ ಸಿಬ್ಬಂದಿ ಸಂತೋಷ್ ಹಾಗೂ ಇತರರು ಸುರೇಶ್ ಅವರ ಮನೆ ಬಳಿ ತೆರಳಿ ಬಾಕಿಯಿರುವ ₹1,150 ಬಿಲ್ ಪಾವತಿಸುವಂತೆ ಕೇಳಿದ್ದಾರೆ.

‘ನಾವು ಹಣ ಕಟ್ಟುವುದಿಲ್ಲ. ಸರ್ಕಾರ ಉಚಿತ ವಿದ್ಯುತ್ ನೀಡುವುದಾಗಿ ಹೇಳಿದೆ. ಆದರೂ ಬಿಲ್ ಕೇಳಲು ಬಂದಿದ್ದೀಯಾ’ ಎಂದು ಸೆಸ್ಕ್ ಸಿಬ್ಬಂದಿಯನ್ನು ಸುರೇಶ್ ಹಾಗೂ ಅವರ ಪತ್ನಿ ನಿಂದಿಸಿ ಜಗಳ ತೆಗಿದಿದ್ದಾರೆ. ಇದು ಅತಿರೇಕಕ್ಕೆ ತಿರುಗಿದ್ದು, ಸುರೇಶ್ ಹಾಗೂ ಪುತ್ರ ಹಲ್ಲೆ ಮಾಡಿದ್ದಾರೆ’ ಎಂದು ಸಂತೋಷ್ ಆರೋಪಿಸಿದ್ದಾರೆ.

ಸಂತೋಷ್ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಗಾಗಿದ್ದು, ಪೊಲೀಸರು ಹೇಳಿಕೆ ಪಡೆದಿದ್ದಾರೆ.

‘ಕೇಂದ್ರ ನೀಡದಿದ್ದರೆ ಮಾರುಕಟ್ಟೆಯಿಂದ ಅಕ್ಕಿ ಖರೀದಿ’

ಬೆಂಗಳೂರು: ಕೇಂದ್ರ ಸರ್ಕಾರ ಅನ್ನಭಾಗ್ಯ ಯೋಜನೆಗೆ ಹೆಚ್ಚುವರಿ ಅಕ್ಕಿ ನೀಡದೇ ಇದ್ದರೆ, ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿ ಖರೀದಿಸಿ ವಿತರಣೆ ಮಾಡಲಾಗುವುದು ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದ್ದಾರೆ.

ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಹೆಚ್ಚುವರಿ ಅಕ್ಕಿಗೆ ಕೋರಿಕೆ ಸಲ್ಲಿಸಲಾಗುವುದು. 10 ಕೆ.ಜಿ ಉಚಿತ ಅಕ್ಕಿ ನೀಡುವ ಬಗ್ಗೆ ಶುಕ್ರವಾರ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು. ಒಬ್ಬ ವ್ಯಕ್ತಿಗೆ ಹೆಚ್ಚುವರಿ ತಲಾ 5 ಕೆ.ಜಿ.ಅಕ್ಕಿ ನೀಡುವಂತೆ ಕೇಂದ್ರಕ್ಕೆ ಮನವಿ ಮಾಡುತ್ತೇವೆ’ ಎಂದರು.

ಅಮೃತ್ ಪೌಲ್ ಜಾಮೀನು ಅರ್ಜಿ ವಿಚಾರಣೆ

ಕಂತುಗಳಲ್ಲಿ ದೋಷಾರೋಪ ಪಟ್ಟಿಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣದಲ್ಲಿ ಪ್ರಾಸಿಕ್ಯೂಷನ್, ವಿಚಾರಣಾ ನ್ಯಾಯಾಲಯಕ್ಕೆ ಒಂದು, ಎರಡು, ಮೂರು... ಹೀಗೆ ಕಂತು ಕಂತುಗಳಲ್ಲಿ ದೋಷಾರೋಪ ಪಟ್ಟಿ ಸಲ್ಲಿಸುತ್ತಿದ್ದು ಇದು ಅಪರಾಧ ದಂಡ ಪ್ರಕ್ರಿಯಾ ಸಂಹಿತೆ–1973ರ (ಸಿಆರ್‌ಪಿಸಿ) ಕಲಂ 173ಕ್ಕೆ ವಿರುದ್ಧವಾದ ನಡವಳಿಕೆ’ ಎಂದು ಪ್ರಕರಣದ ಪ್ರಮುಖ ಆರೋಪಿ ಐಪಿಎಸ್ ಅಧಿಕಾರಿ ಅಮ್ರಿತ್ ಪೌಲ್ ಪರ ವಕೀಲರು ಹೈಕೋರ್ಟ್‌ಗೆ ಹೇಳಿದರು.

ಸದ್ಯ ನ್ಯಾಯಾಂಗ ಬಂಧನದಲ್ಲಿರುವ ಅಮೃತ್ ಪೌಲ್ ಜಾಮೀನು ಕೋರಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಪಿ.ಎಂ.ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಮ್ರಿತ್ ಪೌಲ್ ಪರ ವಾದ ಮಂಡಿಸಿದ ಹಿರಿಯ ವಕೀಲ ಎಂ.ಎಸ್. ಶ್ಯಾಮ ಸುಂದರ್, ‘ಅರ್ಜಿದಾರರು ಕಳೆದ ಒಂದು ವರ್ಷದಿಂದ ನ್ಯಾಯಾಂಗ ಬಂಧನದಲ್ಲಿದ್ದಾರೆ ಮತ್ತು ವಿಚಾರಣಾ ನ್ಯಾಯಾಲಯವು ಅವರ ವಿರುದ್ಧದ ಯಾವುದೇ ಅಪರಾಧಗಳನ್ನು ಸಂಜ್ಞೇಯ ಎಂದು ಪರಿಗಣಿಸದೇ ಇರುವ ಕಾರಣ ಅವರ ಬಂಧನ ಕಾನೂನು ಬಾಹಿರ ವಾಗಿದೆ’ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

‘ಕಂತು ಕಂತುಗಳಲ್ಲಿ ದೋಷಾರೋಪ ಪಟ್ಟಿ ಸಲ್ಲಿಸುವ ಪ್ರಾಸಿಕ್ಯೂಷನ್ ನಡವಳಿಕೆಯನ್ನು ದೆಹಲಿ ಹೈಕೋರ್ಟ್ ಇತ್ತೀಚೆಗಷ್ಟೇ ಖಂಡಿಸಿದೆ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದ ಅವರು, ‘ಕಲಂ 67(2)ರ ಅಡಿಯಲ್ಲಿ ಆರೋಪಿಗಳ ಹಕ್ಕುಗಳಿಗೆ ವಿರುದ್ಧವಾಗಿ ನಡೆಯುವ ಈ ಅಭ್ಯಾಸವನ್ನು ನಿಲ್ಲಿಸಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

‘ನಕಲು ಮಾಡುವುದು ಅತ್ಯಂತ ದುರ್ಬಲ ಅಪರಾಧ. ಇದನ್ನು ಕರ್ನಾಟಕ ಶಿಕ್ಷಣ ಕಾಯ್ದೆ ವಿಶ್ಲೇಷಿಸಿದಾಗ ಈ ಪ್ರಕರಣದಲ್ಲಿ ಗಂಭೀರವಾದದ್ದೇನೂ ಇಲ್ಲ ಎಂದು ಅಂದಾಜಿಸಲಾಗಿದೆ. ಅಂತೆಯೇ, ಆರಂಭಿಕವಾಗಿ ಪ್ರಕರಣದ ಅಪರಾಧಗಳನ್ನು ಭಾರತೀಯ ದಂಡ ಸಂಹಿತೆ (ಐಪಿಸಿ) ಅಡಿಯಲ್ಲಿ ದಾಖಲಿಸಿದ್ದು, ನಂತರ ಇದಕ್ಕೆ ಭ್ರಷ್ಟಾಚಾರ ನಿಗ್ರಹ ಕಾಯ್ದೆಯನ್ನೂ ಹೊಸೆಯಲಾಗುತ್ತಿದೆ. ಇದರಿಂದ ಪ್ರಾಸಿಕ್ಯೂಷನ್ ತನ್ನ ವಿಶೇಷ ಅಧಿಕಾರ ವ್ಯಾಪ್ತಿ ಮೀರುತ್ತಿದೆ’ ಎಂದರು. ಕೋರ್ಟ್ ಕಲಾಪದ ಅವಧಿ ಮುಗಿದ ಕಾರಣ ನ್ಯಾಯಪೀಠವು ವಿಚಾರಣೆಯನ್ನು ಇದೇ 8ಕ್ಕೆ ಮುಂದೂಡಿತು. ಪಿಎಸ್‌ಐ ನೇಮಕಾತಿ ವಿಭಾಗದ ಎಡಿಜಿಪಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಮ್ರಿತ್ ಪೌಲ್, ಹಗರಣದ 35ನೇ ಆರೋಪಿಯಾಗಿದ್ದಾರೆ.

ಸಮಗ್ರ ವರದಿ ಸಲ್ಲಿಸಲು ಹೈಕೋರ್ಟ್ ನಿರ್ದೇಶನ

ಪಿಯು ಕಾಲೇಜುಗಳಲ್ಲಿ ಸೌಕರ್ಯ ಕೊರತೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನೋಟಿಸ್‌ಗೆ ವಿವರಣೆ ನೀಡಿದ ಕಾಲೇಜುಗಳು
- ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠದಿಂದ ವಿಚಾರಣೆ
- ವರದಿ ಸಲ್ಲಿಕೆಗೆ ಮೂರು ವಾರಗಳ ಗಡುವು

ಬೆಂಗಳೂರು: ‘ಅಗತ್ಯ ಭೌಗೋಳಿಕ ವಿಸ್ತೀರ್ಣವೂ ಸೇರಿದಂತೆ ಇತರೆ ಮೂಲಸೌಕರ್ಯಗಳ ಕೊರತೆ ನೀಗಿಸದೇ ಕಾರ್ಯ ನಿರ್ವಹಿಸುತ್ತಿರುವ ರಾಜ್ಯದ 632 ಪದವಿಪೂರ್ವ ಕಾಲೇಜುಗಳ ಸದ್ಯದ ಸ್ಥಿತಿಗತಿಯ ಬಗ್ಗೆ ಸಮಗ್ರ ವರದಿ ಸಲ್ಲಿಸಿ’ ಎಂದು ರಾಜ್ಯ ಸರ್ಕಾರಕ್ಕೆ, ಹೈಕೋರ್ಟ್ ನಿರ್ದೇಶಿಸಿದೆ.

‘ಚೌಗಲೆ ಶಿಕ್ಷಣ ಸಂಸ್ಥೆಗೆ ಹುಬ್ಬಳ್ಳಿಯ ವಿದ್ಯಾನಗರದಲ್ಲಿ ಪದವಿಪೂರ್ವ ಕಾಲೇಜು ಕಟ್ಟಡ ನಿರ್ಮಾಣಕ್ಕೆ ನೀಡಿರುವ ಅನುಮತಿ ರದ್ದುಪಡಿಸಬೇಕು’ ಎಂದು ಕೋರಿ ಚಂದ್ರಶೇಖರ್ ಎಂ. ಅರಮನಿ ಹಾಗೂ ಇತರರು 2009ರಲ್ಲಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

‘ಕರ್ನಾಟಕ ಪದವಿಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಪ್ರವೇಶ ಮತ್ತು ಅನುದಾನ) ನಿಯಮಗಳು-2006ಕ್ಕೆ 2018ರಲ್ಲಿ ತಿದ್ದುಪಡಿ ತಂದಿರುವ ಬಗ್ಗೆ ಸರ್ಕಾರ ಮಾಹಿತಿ ನೀಡಿದೆ. ಈ ಮಾಹಿತಿಯ ಅನುಸಾರ ಸರ್ಕಾರವು 2013ರ ಜುಲೈ 8ರಂದು ಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದ ಅನುಸಾರ ರಾಜ್ಯದಲ್ಲಿ 632 ಪಿಯು ಕಾಲೇಜುಗಳು ನಿಯಮಾನುಸಾರ ನಿರ್ದಿಷ್ಟ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿಲ್ಲ. ಅಂತೆಯೇ, ಇತರ ಅಗತ್ಯ ಮೂಲಸೌಕರ್ಯಗಳನ್ನೂ ಪೂರೈಸಿಲ್ಲ ಎಂದಿದೆ. ಹಾಗಾದರೆ, ಆ 632 ಕಾಲೇಜುಗಳಿಗೆ ಶಿಕ್ಷಣ ಇಲಾಖೆಯು ನೀಡಿರುವ ನೋಟಿಸ್‌ಗೆ ಪ್ರತಿಯಾಗಿ ಕಾಲೇಜುಗಳು ಏನು ವಿವರಣೆ ಕೊಟ್ಟಿವೆ, ಅದು ಸರ್ಕಾರಕ್ಕೆ ಸಮಾಧಾನ ತಂದಿದೆಯೇ? ಸಮಾಧಾನ ತಂದಿಲ್ಲ ಎಂದಾದರೆ ಕಾಲೇಜುಗಳ ವಿರುದ್ಧ ಕೈಗೊಂಡ ಕ್ರಮಗಳೇನು ಎಂಬ ಬಗ್ಗೆ ಸಮಗ್ರ ವರದಿಯನ್ನು ಮೂರು ವಾರಗಳಲ್ಲಿ ಸಲ್ಲಿಸಿ’ ಎಂದು ನ್ಯಾಯಪೀಠ ಸರ್ಕಾರಕ್ಕೆ ನಿರ್ದೇಶಿಸಿತು.

ಅಂತೆಯೇ, ‘ಕರ್ನಾಟಕ ಪದವಿಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಪ್ರವೇಶ ಮತ್ತು ಅನುದಾನ) ತಿದ್ದುಪಡಿ ನಿಯಮಗಳು-2017ರ ಪ್ರಕಾರ ಕಾಲೇಜುಗಳು ಸಲ್ಲಿಸಿದ ವರದಿ ಆಧರಿಸಿ ಪರಿಶೀಲನೆ ನಡೆಸುವ ಅವಕಾಶವಿದೆಯೇ, ಒಂದೊಮ್ಮೆ ಇದ್ದರೆ ವರದಿಗಳನ್ನು ಆಧರಿಸಿ ನಿಯಮಗಳ ಅನುಸಾರ ಕ್ರಮ ಕೈಗೊಳ್ಳಬಹುದೇ ಎಂಬ ಬಗ್ಗೆಯೂ ವರದಿ ನೀಡಿ’ ಎಂದು ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್ ನಂ. 75, ಮಹಾತ್ಮ ಗಾಂಧಿ ರಸ್ತೆ ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023 ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **‘ಶೈಕ್ಷಣಿಕ ನೆರವಿಗೆ ಅರ್ಜಿ’** ಎಂದು ಬರೆಯಬೇಕು.

ವಿದ್ಯಾರ್ಥಿಯ ಅನಿಸಿಕೆ

ಪುಸ್ತಕ ಖರೀದಿಸಿದೆ

‘ಪ್ರಜಾವಾಣಿ’ ನೀಡಿದ ವಿದ್ಯಾರ್ಥಿ ವೇತನವು ವಿದ್ಯಾಭ್ಯಾಸಕ್ಕೆ ಸಹಾಯವಾಯಿತು. ಪಿಯುಸಿ, ಸಿಇಟಿ, ನೀಟ್, ಜೆಇಇ ಪರೀಕ್ಷೆಗೆ ತಯಾರಿ ನಡೆಸಲು ಬೇಕಾದ ಪುಸ್ತಕಗಳು, ಸಮವಸ್ತ್ರ ಖರೀದಿಸಿದೆ.

ಸ್ಪಂದನಾ, ಕೊಪ್ಪ, ಚಿಕ್ಕಮಗಳೂರು

‘ಮೋದಿ ಗ್ಯಾರಂಟಿ ಕಾರ್ಡ್ ಕೊಟ್ಟಿಲ್ಲ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಕೇಂದ್ರ ಸರ್ಕಾರ ಜನರಿಗೆ ₹15 ಲಕ್ಷ ಕೊಡುವುದಾಗಿ ಹೇಳಿತ್ತು, ಕೊಟ್ಟಿಲ್ಲ ಎಂದು ರಾಜ್ಯದ ಸಚಿವರು ಆರೋಪಿಸುವ ಮೂಲಕ ಜನರ ದಾರಿ ತಪ್ಪಿಸಲು ಯತ್ನಿಸುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಯಾರಿಗೂ ಗ್ಯಾರಂಟಿ ಕಾರ್ಡ್ ಕೊಟ್ಟಿಲ್ಲ. ವಿದೇಶದಿಂದ ಕಪ್ಪು ಹಣ ತಂದರೆ ಒಬ್ಬೊಬ್ಬರಿಗೆ ₹15 ಲಕ್ಷ ಕೊಡುವಷ್ಟು ಇದೆ ಎಂದು ಹೇಳಿದ್ದರು ಅಷ್ಟೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹೇಳಿದರು.

ಮೂರು ಸುತ್ತಿನ ಸಭೆ ನಡೆಸಿದರೂ ‘ಗ್ಯಾರಂಟಿ’ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸ್ಪಷ್ಟ ನಿರ್ಣಯಕ್ಕೆ ಬರಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಜನರಿಗೆ ಮೋಸ ಮಾಡಿರುವ ಕಾಂಗ್ರೆಸ್ ಕ್ಷಮೆಯಾಚಿಸಬೇಕು ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಶುಕ್ರವಾರ, ಜೂನ್ 2, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 152 | ಪುಟ 12
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಇತ್ತೀಚೆಗಷ್ಟೇ ದಾಂಪತ್ಯ ಜೀವನಕ್ಕೆ ಕಾಲಿಟ್ಟದ್ದ ವಸಿಷ್ಠ ಸಿಂಹ–ಹರಿಪ್ರಿಯಾ ರೀಲ್‌ನಲ್ಲೂ ಜೋಡಿಯಾಗಿದ್ದಾರೆ

ಆಳ–ಅಗಲ ವಿದ್ಯಾರ್ಥಿಗಳ ಆತ್ಮಹತ್ಯೆಗೆ ಕಾರಣವೇ ಗೊತ್ತಿಲ್ಲ

ಹಿಮಾಲಯದೆತ್ತರಕ್ಕೆ ಭಾರತ– ನೇಪಾಳ ಬಾಂಧವ್ಯ: ಮೋದಿ 9

ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆ ಇಳಿಕೆ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,428 ▼	18,487 ▼	₹62,250 (ಬೆಂಗಳೂರು) ▲	₹73,800 (ಬೆಂಗಳೂರು) ▲	82.42 ▲

ಯಾರಿಗೆಲ್ಲ ಗ್ಯಾರಂಟಿ?

ಇಂದು ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ಗ್ಯಾರಂಟಿಗಳನ್ನು ಜಾರಿ ಮಾಡುವ ಸಂಬಂಧ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಅಂತಿಮ ನಿರ್ಧಾರ ಹೊರ ಬೀಳಲಿದೆ.

ಗ್ಯಾರಂಟಿ ಜಾರಿ ಸಂಬಂಧ ಸಂಪನ್ಮೂಲ ಕ್ರೋಡೀಕರಣದ ಮಾರ್ಗೋಪಾಯಗಳನ್ನು ಚರ್ಚಿಸಲು ಬುಧವಾರ ಕರೆದಿದ್ದ ಸಚಿವರು ಮತ್ತು ಅಧಿಕಾರಿಗಳ ಸಭೆಯಲ್ಲಿ ಸ್ಪಷ್ಟ ನಿರ್ಣಯ ತೆಗೆದುಕೊಳ್ಳಲು ಸಾಧ್ಯವಾಗಿರಲಿಲ್ಲ. ಅಧಿಕಾರಿಗಳು ನೀಡಿದ್ದ ಸಲಹೆ ಮತ್ತು ಆಯ್ಕೆಗಳ ಬಗ್ಗೆ ಮರು ಪರಿಶೀಲನೆ ನಡೆಸಿ, ಹೊಸ ಪ್ರಸ್ತಾವನೆ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿತ್ತು.

ಈ ಸೂಚನೆಯ ಕಾರಣ ಹಣಕಾಸು ಇಲಾಖೆಯ ಅಧಿಕಾರಿಗಳು ಹೊಸ ಪ್ರಸ್ತಾವನೆ ಸಿದ್ಧಪಡಿಸಲು ಗುರುವಾರ ಸಭೆ ನಡೆಸಿ ಚರ್ಚಿಸಿದರು. ಪರಿಷ್ಕೃತ ಪ್ರಸ್ತಾವನೆಯನ್ನು ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಗುತ್ತದೆ.

ಮಣಿಪುರ ಗಲಭೆ: ನ್ಯಾಯಾಂಗ ತನಿಖೆಗೆ ನಿರ್ಧಾರ

ಇಂಫಾಲ (ಮಣಿಪುರ): ರಾಜ್ಯದಲ್ಲಿ ಭುಗಿಲೆದ್ದ ಗಲಭೆ ಕುರಿತು ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಲಾಗುವುದು, ಶಾಂತಿ ಸಮಿತಿ ರಚಿಸಲಾಗುವುದು ಎಂದು ಕೇಂದ್ರ ಸರ್ಕಾರ ಹೇಳಿದೆ. 9

ಆಸ್ತಿ ತೆರಿಗೆ: ಇದೇ 30ರವರೆಗೆ ಶೇ 5ರಷ್ಟು ರಿಯಾಯಿತಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಆಸ್ತಿ ತೆರಿಗೆಗೆ ಶೇ 5ರಷ್ಟು ರಿಯಾಯಿತಿಯನ್ನು ಜೂನ್ 30ರವರೆಗೆ ವಿಸ್ತರಿಸಿ ಸರ್ಕಾರ ಆದೇಶ ಹೊರಡಿಸಿದೆ.

ಪ್ರತಿ ವರ್ಷ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ರಿಯಾಯಿತಿ ನೀಡಲಾಗುತ್ತಿತ್ತು. ಈ ಬಾರಿಯೂ ಏಪ್ರಿಲ್‌ನಲ್ಲಿ ರಿಯಾಯಿತಿ ಇತ್ತು. ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಮೇ ತಿಂಗಳಲ್ಲಿ ರಿಯಾಯಿತಿ ಇರಲಿಲ್ಲ. ನಾಗರಿಕರಿಗೆ 'ಗಿಫ್ಟ್' ಎನ್ನುವ ರೀತಿಯಲ್ಲಿ ರಿಯಾಯಿತಿಯನ್ನು ವಿಸ್ತರಿಸಲಾಗಿದೆ. ಈಗಾಗಲೇ ಪೂರ್ಣ ಪಾವತಿ ಮಾಡಿದವರಿಗೆ ಮರುಪಾವತಿ ಮಾಡಲಾಗುತ್ತದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸಿಬಿಎಸ್‌ಇ 10ನೇ ತರಗತಿಗೆ ಎನ್‌ಸಿಇಆರ್‌ಟಿ ಪರಿಷ್ಕೃತ ಪಠ್ಯಪುಸ್ತಕ ಪ್ರಕಟ

ಪ್ರಜಾಪ್ರಭುತ್ವ ಪಾಠಕ್ಕೆ ಕೊಕ್

ಪ್ರಜಾವಾಣಿ ವಾರ್ತೆ

ನವದೆಹಲಿ: ಸಿಬಿಎಸ್‌ಇ ಹತ್ತನೇ ತರಗತಿಯ ವಿಜ್ಞಾನ ಪಠ್ಯಪುಸ್ತಕದಿಂದ 'ಆವರ್ತಕ ಕೋಷ್ಟಕ' (ಪಿರಿಯಾಡಿಕ್ ಟೇಬಲ್) ಹಾಗೂ ರಾಜ್ಯಶಾಸ್ತ್ರ ಪಠ್ಯ ಪುಸ್ತಕದಿಂದ 'ಪ್ರಜಾಪ್ರಭುತ್ವ' ಪಾಠಗಳಿಗೆ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯು (ಎನ್‌ಸಿಇಆರ್‌ಟಿ) ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಕೊಕ್ ನೀಡಿದೆ.

ಪಠ್ಯವನ್ನು ತರ್ಕಬದ್ಧಗೊಳಿಸುವ ಜತೆಗೆ ವಿದ್ಯಾರ್ಥಿಗಳ ಮೇಲಿನ ಶೈಕ್ಷಣಿಕ ಹೊರೆ ಇಳಿಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಎನ್‌ಸಿಇಆರ್‌ಟಿ ಸ್ಪಷ್ಟನೆ ನೀಡಿದೆ. ಆದರೆ, ಎನ್‌ಸಿಇಆರ್‌ಟಿ ನಡೆಗೆ ಶಿಕ್ಷಣ-ತಜ್ಞರಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಮೊಘಲ್ ಸಾಮ್ರಾಜ್ಯ, ಮಹಾತ್ಮ ಗಾಂಧಿ ಹತ್ಯೆ, ಆರೆಸ್ಸೆಸ್ ನಿಷೇಧ, ಗುಜರಾತ್ ದಂಗೆ, ಡಾರ್ವಿನ್‌ನ ವಿಕಾಸವಾದ ಸಿದ್ಧಾಂತದ ಕುರಿತ ವಿವರಗಳನ್ನು ಒಂದು ತಿಂಗಳ ಹಿಂದೆಯಷ್ಟೇ ಪಠ್ಯಪುಸ್ತಕದಿಂದ ಕೈಬಿಡಲಾಗಿತ್ತು. ಮಂಡಳಿಯ ಈ ಕ್ರಮಕ್ಕೆ ಪ್ರತಿ-ಪಕ್ಷಗಳು ಮತ್ತು ಶಿಕ್ಷಣ ತಜ್ಞರು ಆಕ್ಷೇಪ ವ್ಯಕ್ತಪಡಿಸಿದ್ದರು. ಈಗ 10ನೇ ತರಗತಿ ಪಠ್ಯಪುಸ್ತಕದಲ್ಲೂ ಕತ್ತರಿ ಪ್ರಯೋಗ ಮಾಡಿದೆ.

'ಮಂಡಳಿಯು ಮಾಡಿದ ಈ ಬದಲಾವಣೆಯು ತರ್ಕಬದ್ಧವೇ ಅಥವಾ ಸಮರ್ಥನೀಯವೇ' ಎಂದು ಪ್ರಶ್ನಿಸಿರುವ ಎನ್‌ಸಿಇಆರ್‌ಟಿಯ ಮಾಜಿ ನಿರ್ದೇಶಕ ಪ್ರೊ.ಕೃಷ್ಣಕುಮಾರ್, 'ಬದಲಾವಣೆಗೆ ವಿವರ ನೀಡಲಾಗದು. ವಿಕಾಸವಾದದ ಸಿದ್ಧಾಂತ ಇಲ್ಲದೆ ಒಬ್ಬ ಶಿಕ್ಷಕ, ವಿದ್ಯಾರ್ಥಿಗಳಿಗೆ ಬೋಧಿಸಲು ಹೇಗೆ ಸಾಧ್ಯ? ಆವರ್ತಕ ಕೋಷ್ಟಕ ಇಲ್ಲದೆ ರಸಾಯನ ವಿಜ್ಞಾನ ಇಲ್ಲ' ಎಂದಿದ್ದಾರೆ.

ಹೊಸದಾಗಿ ಮುದ್ರಿಸಲಾದ ವಿಜ್ಞಾನ ಪಠ್ಯಪುಸ್ತಕದಲ್ಲಿ ಆವರ್ತಕ ಕೋಷ್ಟಕವನ್ನು ತೆಗೆದುಹಾಕಲಾಗಿದೆ. ಇದರಡಿ ಬರುವ ಪರಿಸರ ಸುಸ್ಥಿರತೆ ಹಾಗೂ ಇಂಧನ ಮೂಲಗಳು ಅಧ್ಯಾಯಗಳನ್ನು ಕೈಬಿಡಲಾಗಿದೆ. ಇದರಿಂದ ವಿದ್ಯುತ್ ಮತ್ತು ಕಾಂತೀಯತೆಗೆ ವಿಜ್ಞಾನಿ ಮೈಕಲ್ ಫ್ಯಾರಡೆ ಸಲ್ಲಿಸಿದ ಕೊಡುಗೆಯ ಅಧ್ಯಯನದಿಂದ ವಿದ್ಯಾರ್ಥಿಗಳು ವಂಚಿತರಾಗುವಂತಾಗಿದೆ.

ರಾಜ್ಯಶಾಸ್ತ್ರ ಪಠ್ಯಪುಸ್ತಕದಿಂದ ಪ್ರಜಾಪ್ರಭುತ್ವ ರಾಜಕೀಯ–1ರಡಿ ಬರುವ ಮಹತ್ವದ ಸಂಘರ್ಷಗಳು ಮತ್ತು ಚಳವಳಿಗಳು, ಪ್ರಜಾಪ್ರಭುತ್ವದ ಸವಾಲುಗಳು, ರಾಜಕೀಯ ಪಕ್ಷಗಳು ಅಧ್ಯಾಯಗಳನ್ನೂ ಕೈಬಿಡಲಾಗಿದೆ.

ಕೋವಿಡ್ ಪಿಡುಗಿನ ಸಂದರ್ಭದಲ್ಲಿ ಡಿಜಿಟಲ್ ಕಲಿಕೆಯ ಮಹತ್ವದ ಅರಿವಾಗಿದೆ. ಪಠ್ಯಪುಸ್ತಕದಲ್ಲಿದ್ದ ಕಷ್ಟಕರ, ಪುನರಾವರ್ತಿತ ಹಾಗೂ ಅನಗತ್ಯ ಅಂಶಗಳನ್ನು ಕೈಬಿಡಲಾಗಿದೆ ಎಂದು ಎನ್‌ಸಿಇಆರ್‌ಟಿ ತಿಳಿಸಿದೆ.

11 ಮತ್ತು 12ನೇ ತರಗತಿಯಲ್ಲಿ ವಿದ್ಯಾರ್ಥಿಗಳು ಈ ವಿಷಯಗಳನ್ನು ಪ್ರತ್ಯೇಕವಾಗಿ ಆಯ್ಕೆ ಮಾಡಿಕೊಂಡು ಕಲಿಯುವ ಅವಕಾಶವಿದೆ. ಪದವಿ ಪೂರ್ವ ಶಿಕ್ಷಣ ಹಂತದಲ್ಲಿ ರಸಾಯನ ವಿಜ್ಞಾನ ವಿಷಯವನ್ನು ಆಯ್ಕೆ ಮಾಡಿಕೊಳ್ಳುವ ವಿದ್ಯಾರ್ಥಿಗಳಿಗೆ ಆವರ್ತಕ ಕೋಷ್ಟಕ ಕಲಿಯುವ ಅವಕಾಶವಿದೆ ಎಂದು ವಿವರಿಸಿದೆ.

ಎನ್‌ಇಪಿ ಜಾರಿಗೆ ಆರೆಸ್ಸೆಸ್ ಪಟ್ಟು

ರಾಷ್ಟ್ರೀಯ ಶಿಕ್ಷಣ ನೀತಿಯ(ಎನ್‌ಇಪಿ) ಶಿಫಾರಸುಗಳ ಅನ್ವಯ ಪಠ್ಯಕ್ರಮಗಳನ್ನು ಬದಲಾಯಿಸಲಾಗುತ್ತಿದೆ ಎಂದು ಮಂಡಳಿ ಹೇಳಿದೆ. ಮತ್ತೊಂಡೆದೆ ದೇಶದ ಎಲ್ಲಾ ಶಾಲೆಗಳಲ್ಲಿ ಎನ್‌ಇಪಿ ಜಾರಿಗೊಳಿಸಬೇಕು ಎಂದು ಆರೆಸ್ಸೆಸ್ ಈಗಾಗಲೇ ಕೇಂದ್ರದ ಮೇಲೆ ಒತ್ತಡ ಹೇರಿದೆ.

ಎನ್‌ಸಿಇಆರ್‌ಟಿಯ ಈ ಕ್ರಮಕ್ಕೆ ಆರೆಸ್ಸೆಸ್‌ನ ಅಂಗ ಸಂಸ್ಥೆಯಾದ ಶಿಕ್ಷಾ ಸಂಸ್ಕೃತಿ ಉತ್ಥಾನ್ ನ್ಯಾಸ್ ಬೆಂಬಲ ನೀಡಿದೆ. ಇದರ ರಾಷ್ಟ್ರೀಯ ಕಾರ್ಯದರ್ಶಿ ಅತುಲ್ ಕೊಠಾರಿ ಮಾತನಾಡಿ, 'ಬಿಜೆಪಿ ಸಂಸದ ವಿನಯ್ ಸಹಸ್ರಬುದ್ಧೆ ನೇತೃತ್ವದ ಸಮಿತಿಯ ಶಿಫಾರಸುಗಳ ಅನ್ವಯ ಪಠ್ಯಪುಸ್ತಕಗಳಲ್ಲಿ ಈ ಬದಲಾವಣೆ ಮಾಡಲಾಗಿದೆ ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

'ಕೆಲವು ವಿಷಯಗಳನ್ನು ಒಪ್ಪಲು ಸಾಧ್ಯವಿಲ್ಲ. ಇತ್ತೀಚೆಗೆ ಖಾಲಿಸ್ತಾನ ಪದ ಕೈಬಿಟ್ಟಿದ್ದು ಇದಕ್ಕೆ ನಿದರ್ಶನ ಎಂದರು.

2022ರ ವಿಜಯದಶಮಿ ಆಚರಣೆ ಸಮಾರಂಭದ ಭಾಷಣದಲ್ಲಿ ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್, 'ವಿದ್ಯಾರ್ಥಿಗಳು ಉತ್ತಮ ಸಂಸ್ಕೃತಿ ಮತ್ತು ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡು ದೇಶಭಕ್ತಿಯ ಸ್ಫೂರ್ತಿ ಪಡೆಯಲು ಎನ್‌ಇಪಿ ಸಹಕಾರಿಯಾಗಿದೆ ಎಂದು ಪ್ರತಿಪಾದಿಸಿದ್ದರು.

ಸಚಿವರ ಸಮರ್ಥನೆ

'ಕೋವಿಡ್ ಸಂದರ್ಭದಲ್ಲಿನ ಶೈಕ್ಷಣಿಕ ಸ್ಥಿತಿ ಆಧರಿಸಿ ಪಠ್ಯ ತರ್ಕಬದ್ಧಗೊಳಿಸುವಿಕೆಯ ಪ್ರಕ್ರಿಯೆ ಆರಂಭವಾಗಿದೆ. ವಿದ್ಯಾರ್ಥಿಗಳ ಮೇಲಿನ ಶೈಕ್ಷಣಿಕ ಹೊರೆ ಕಡಿಮೆ ಮಾಡುವ ಆಶಯವೂ ಇದರ ಹಿಂದಿದೆ' ಎಂದು ಕೇಂದ್ರ ಶಿಕ್ಷಣ ಖಾತೆಯ ರಾಜ್ಯ ಸಚಿವ ಸುಭಾಷ್ ಸರ್ಕಾರ್ ಸಮರ್ಥಿಸಿ-ಕೊಂಡಿದ್ದಾರೆ.

ವಿಕಾಸವಾದ ಸಿದ್ಧಾಂತವು ಎಲ್ಲಾ ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ. ಆಸಕ್ತ ವಿದ್ಯಾರ್ಥಿಗಳು ಇದರ ಅಧ್ಯಯನ ಮಾಡಬಹುದು. 12ನೇ ತರಗತಿಯ ಪಠ್ಯಪುಸ್ತಕ-ದಲ್ಲೂ ವಿಕಾಸವಾದ ಸಿದ್ಧಾಂತದ ಪಠ್ಯವಿದೆ.

ಸರ್ಕಾರ ವಿದ್ಯಾರ್ಥಿಗಳ ಮೇಲೆ ಯಾವುದೇ ಸಿದ್ಧಾಂತ ಹೇರುವ ಪ್ರಯತ್ನ ಮಾಡುತ್ತಿಲ್ಲ' ಎಂದು ತಿಳಿಸಿದ್ದಾರೆ.

'ಸಂವಿಧಾನ ಪ್ರಸ್ತಾವನೆ ಓದು ಕಡ್ಡಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಶಾಲಾ– ಕಾಲೇಜುಗಳ ವಿದ್ಯಾರ್ಥಿಗಳು ಪ್ರತಿದಿನ ಸಂವಿಧಾನದ ಪ್ರಸ್ತಾವನೆಯನ್ನು (preamble) ಓದಿ, ಅರ್ಥೈಸಿಕೊಳ್ಳಲು ಸಮಾಜ ಕಲ್ಯಾಣ ಸಚಿವ ಡಾ.ಎಚ್‌.ಸಿ.ಮಹದೇವಪ್ಪ ಸೂಚನೆ ನೀಡಿದ್ದಾರೆ.

ಇಲಾಖೆಯ ಅಧಿಕಾರಿಗಳ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿ ಈ ಸಂಬಂಧ ಆದೇಶ ಹೊರಡಿಸುವಂತೆಯೂ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಂವಿಧಾನದ ಪ್ರಸ್ತಾವನೆಯನ್ನು ಓದುವ ಮೂಲಕ ಎಲ್ಲರೂ ಸಂವಿಧಾನ ತೋರಿದ ಮಾರ್ಗದಲ್ಲಿ ಕೆಲಸ ಮಾಡಬೇಕು. ಶಾಲಾ, ಕಾಲೇಜು ಮತ್ತು ವಿಶ್ವವಿದ್ಯಾಲಯ-ಗಳಲ್ಲಿ ಪ್ರತಿದಿನ ಪ್ರಸ್ತಾವನೆ ಓದಬೇಕು. ಇದಕ್ಕಾಗಿ ಪ್ರತ್ಯೇಕ ಆದೇಶ ಹೊರಡಿಸಬೇಕು ಎಂದು ಹೇಳಿದರು.

ಪರಿಶಿಷ್ಟ ಜಾತಿ, ಪಂಗಡಗಳು ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳು ಶುಲ್ಕವನ್ನು ಪಾವತಿಸಿಲ್ಲ ಎಂಬ ಕಾರಣಕ್ಕೆ ಶಾಲಾ–ಕಾಲೇಜುಗಳ ಪ್ರವೇಶ ನೀಡುವುದಕ್ಕೆ ಅಡ್ಡಿ ಪಡಿಸುವಂತಿಲ್ಲ. ಮೊದಲಿಗೆ ಪ್ರವೇಶ ನೀಡಬೇಕು ಎಂದು ಮಹದೇವಪ್ಪ ತಿಳಿಸಿದರು.

ಭಾರತೀಯ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಕುಸ್ತಿಪಟುಗಳು ನಡೆಸುತ್ತಿರುವ ಹೋರಾಟ ಕುರಿತು ಚರ್ಚಿಸಲು ಉತ್ತರ ಪ್ರದೇಶದ ಮುಜಫ್ಫರನಗರ ಜಿಲ್ಲೆಯ ಸೋರಮ್ ಗ್ರಾಮದಲ್ಲಿ ಗುರುವಾರ ನಡೆದ ರೈತರ 'ಮಹಾಪಂಚಾಯತ್' ಉದ್ದೇಶಿಸಿ ಬಿಕೆಯು ಮುಖಂಡ ರಾಕೇಶ್ ಟಿಕಾಯತ್ ಮಾತನಾಡಿದರು –ಪಿಟಿಐ ಚಿತ್ರ

'ಮಹಾ ಪಂಚಾಯತ್'ನಲ್ಲಿ ಪ್ರತಿಭಟನಕಾರರಿಂದ ಶಪಥ

ನ್ಯಾಯ ಸಿಗುವವರೆಗೆ ಹೋರಾಟ

ಪ್ರಜಾವಾಣಿ ವಾರ್ತೆ/ಪಿಟಿಐ

ಲಖನೌ/ಮುಜಫ್ಫರನಗರ (ಉತ್ತರ-ಪ್ರದೇಶ): ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಭಾರತೀಯ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಸಾಧ್ಯವಿರುವ ಎಲ್ಲ ಹೋರಾಟ ನಡೆಸುವುದಾಗಿ 'ಮಹಾಪಂಚಾಯತ್' ಗುರುವಾರ ಶಪಥ ಮಾಡಿದೆ. ಪ್ರತಿಭಟನೆ ನಡೆಸುತ್ತಿರುವ ಕುಸ್ತಿಪಟುಗಳಿಗೆ ನ್ಯಾಯ ಸಿಗುವವರೆಗೆ ಹೋರಾಟವನ್ನು ಕೈಬಿಡದಿರಲೂ ತೀರ್ಮಾನಿಸಿದೆ.

ಬ್ರಿಜ್‌ಭೂಷಣ್ ಸಿಂಗ್ ಅವರನ್ನು ಬಂಧಿಸಬೇಕು ಎಂಬ ಕುಸ್ತಿಪಟುಗಳ ಬೇಡಿಕೆಗೆ ಸಂಪೂರ್ಣ ಬೆಂಬಲ ಇದೆ ಎಂದು ಘೋಷಿಸಿದ ರೈತರ 'ಮಹಾ ಪಂಚಾಯತ್', 'ಈ ಹೋರಾಟದಲ್ಲಿ ನಮ್ಮ ಪುತ್ರಿಯರ (ಮಹಿಳಾ ಕುಸ್ತಿಪಟುಗಳು) ಬೆನ್ನಿಗೆ ದೃಢವಾಗಿ ನಿಲ್ಲಲಾಗುವುದು' ಎಂದು ಘೋಷಿಸಿದೆ.

ರಾಜಧಾನಿ ಲಖನೌದಿಂದ 500 ಕಿ.ಮೀ. ದೂರವಿರುವ ಮುಜಫ್ಫರನಗರ ಜಿಲ್ಲೆಯ ಸೋರಮ್ ಗ್ರಾಮದಲ್ಲಿ ನಡೆದ 'ಮಹಾಪಂಚಾಯತ್' ಉದ್ದೇಶಿಸಿ ಮಾತನಾಡಿದ ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ಮುಖಂಡ ಮಾಂಗೆರಾಮ್ ತ್ಯಾಗಿ, 'ಮಹಿಳಾ ಕುಸ್ತಿಪಟುಗಳು ದೇಶವೇ ಹೆಮ್ಮೆಪಡುವಂತೆ ಮಾಡಿದ್ದಾರೆ. ಅವರಿಗೆ ನ್ಯಾಯ ಸಿಗುವಂತೆ ಮಾಡಲು ಎಲ್ಲ ರೀತಿಯ ಹೋರಾಟ ನಡೆಸುತ್ತೇವೆ' ಎಂದರು.

'ಜಾತಿ ಆಧಾರದ ಮೇಲೆ ಕುಸ್ತಿಪಟುಗಳನ್ನು ವಿಭಜಿಸುವ ಪ್ರಯತ್ನಗಳು ನಡೆಯುತ್ತಿವೆ' ಎಂದು ಕಿಡಿಕಾರಿದ ತ್ಯಾಗಿ, 'ಕುಸ್ತಿಪಟುಗಳು ಪದಕಗಳನ್ನು ಗೆದ್ದಾಗ ಯಾರಾದರೂ ಅವರ ಜಾತಿಯ ಬಗ್ಗೆ ಕೇಳಿದ್ದರೇ' ಎಂದು ಪ್ರಶ್ನಿಸಿದರು.

9ನೇ ಪುಟ ನೋಡಿ

ರಾಷ್ಟ್ರಪತಿ ಬಳಿ ನಿಯೋಗ: ರಾಕೇಶ್

ಮುಜಫ್ಫರನಗರ: 'ಹರಿಯಾಣದ ಕುರುಕ್ಷೇತ್ರದಲ್ಲಿ ಶುಕ್ರವಾರ ಖಾಪ್ ಮುಖಂಡರ ಮತ್ತೊಂದು ಸಭೆ ನಡೆಸಿ, ಕುಸ್ತಿಪಟುಗಳ ಹೋರಾಟ ಕುರಿತು ಮತ್ತಷ್ಟು ನಿರ್ಧಾರಗಳನ್ನು ಕೈಗೊಳ್ಳಲಾಗುವುದು' ಎಂದು ಬಿಕೆಯು ಮುಖಂಡ ರಾಕೇಶ್ ಟಿಕಾಯತ್ ಹೇಳಿದರು.

'ಮಹಾ ಪಂಚಾಯತ್' ಉದ್ದೇಶಿಸಿ ಮಾತನಾಡಿದ ಅವರು, 'ಎಲ್ಲ ಖಾಪ್‌ಗಳ ಪ್ರತಿನಿಧಿಗಳ ನಿಯೋಗ ಒಯ್ದು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಹಾಗೂ ಕೇಂದ್ರ ಸರ್ಕಾರಕ್ಕೆ ಕುಸ್ತಿಪಟುಗಳ ಬೇಡಿಕೆಗಳಿಗೆ ಸಂಬಂಧಿಸಿ ಮನವಿ ಸಲ್ಲಿಸ-ಲಾಗುವುದು. ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ಆಗಲೂ ಕ್ರಮ ಕೈಗೊಳ್ಳದಿದ್ದರೆ ನಮ್ಮ ಹೋರಾಟದ ಮುಂದಿನ ಹೆಜ್ಜೆ ಕುರಿತು ನಿರ್ಧರಿಸಲಾಗುವುದು' ಎಂದು ಹೇಳಿದರು.

ಸಾಹಿತಿಗಳಿಗೆ ಬೆದರಿಕೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಸಾಹಿತಿ ಹಾಗೂ ಹೋರಾಟಗಾರರಿಗೆ ಜೀವ ಬೆದರಿಕೆ ಪತ್ರಗಳು ಬರುತ್ತಿದ್ದು, ಈ ಸಂಬಂಧ ಬಸವೇಶ್ವರನಗರ ಠಾಣೆಯಲ್ಲಿ ಗುರುವಾರ ಎಫ್‌ಐಆರ್ ದಾಖಲಾಗಿದೆ.

'ಬಸವೇಶ್ವರನಗರ ನಿವಾಸಿ ವೈದ್ಯೆ ಹಾಗೂ ಲೇಖಕಿ ವಸುಂಧರಾ ಭೂಪತಿ ಅವರು ಪತ್ರದ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದು-ವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಮೇ 29ರಂದು ವಸುಂಧರಾ ಅವರ ಮನೆ ವಿಳಾಸಕ್ಕೆ ಪತ್ರ ಬಂದಿದೆ. ಪತ್ರದ ಮೇಲೆ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ಪಟ್ಟಣದ ಅಂಚೆ ಕಚೇರಿ ಮುದ್ರೆ ಇದೆ. ಅಲ್ಲಿಯ ಸಿಬ್ಬಂದಿಯಿಂದ ಮಾಹಿತಿ ಪಡೆಯಲಾಗುತ್ತಿದೆ' ಎಂದರು.

ಕವಿ ಬಂಜಗೆರೆ ಜಯಪ್ರಕಾಶ್ ಅವರಿಗೂ ಬೆದರಿಕೆ ಪತ್ರ ಬಂದಿದ್ದು, ದೂರು ಸಲ್ಲಿಸಿದ್ದಾರೆ. ಈ ಕುರಿತು ಪ್ರಕ್ರಿಯಿಸಿದ ಬಂಜಗೆರೆ, 'ಆರು ತಿಂಗಳ ಹಿಂದೆ ಇದೇ ರೀತಿ ಪತ್ರ ಬರೆದಿದ್ದ ವ್ಯಕ್ತಿಯೇ ಈಗಲೂ ಬರೆದಿದ್ದಾನೆ. ಈ ಕುರಿತು ಹಾರೋಹಳ್ಳಿ ಪೊಲೀಸರ ಗಮನಕ್ಕೆ ತಂದಿರುವೆ' ಎಂದರು.

ದೂರಿನ ವಿವರ: 'ನಾನು ವೃತ್ತಿಯಲ್ಲಿ ವೈದ್ಯೆ. ಹಲವು ಸಾಹಿತ್ಯ ಕೃತಿಗಳನ್ನು ರಚಿಸಿದ್ದೇನೆ. ಮಹಿಳಾಪರ ಹಾಗೂ ಜನಪರ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದೇನೆ' ಎಂದು ವಸುಂಧರಾ ದೂರಿನಲ್ಲಿ ತಿಳಿಸಿದ್ದಾರೆ.

'ಎಸ್‌.ಜಿ. ಸಿದ್ದರಾಮಯ್ಯ, ಕುಂ. ವೀರಭದ್ರಪ್ಪ, ಬಂಜಗೆರೆ ಜಯಪ್ರಕಾಶ್, ಬರಗೂರು ರಾಮಚಂದ್ರಪ್ಪ, ದೇವನೂರ ಮಹಾದೇವ, ಬಿ.ಟಿ. ಲಲಿತಾ ನಾಯಕ್, ಪ್ರಕಾಶ್ ರಾಜ್ (ನಟ), ಭಗವಾನ್, ಮಹೇಶ್ ಚಂದ್ರ ಗುರು, ದ್ವಾರಕಾನಾಥ್, ಮೈಸೂರಿನ ಭಾಸ್ಕರ್ ಪ್ರಸಾದ್, ಚನ್ನಮಲ್ಲ ಸ್ವಾಮಿ, ನಿಜಗುಣಾನಂದ, ದಿನೇಶ್ ಅಮಿನ್‌ಮಟ್ಟು, ಹಂಪ ನಾಗರಾಜಯ್ಯ ಸೇರಿ 61 ಜನರ ಜೊತೆ ಗುರುತಿ-ಸಿಕೊಳ್ಳದಂತೆ ಬೆದರಿಕೆ ಪತ್ರದಲ್ಲಿ ಬರೆಯಲಾಗಿದೆ' ಎಂದಿದ್ದಾರೆ.

'ಎಲ್ಲ ಸಾಹಿತಿ ಹಾಗೂ ಹೋರಾಟಗಾರರ 'ಜೀವದ ದೀಪ ಆರುತ್ತದೆ' ಎಂದು ಬರೆದಿದ್ದಾರೆ. ಪತ್ರದ ಕೊನೆಯಲ್ಲಿ 'ಸಹಿಷ್ಣು ಹಿಂದು, ಜೈ ಹಿಂದು ರಾಷ್ಟ್ರ' ಎಂಬ ಬರಹವಿದೆ. ಈ ಹಿಂದೆಯೂ ಹಲವು ಬಾರಿ ಇಂಥ ಪತ್ರಗಳು ಬಂದಿದ್ದವು. ಈಗ ಪುನಃ ಪತ್ರ ಬಂದಿದೆ. ಈ ಬಗ್ಗೆ ಕಾನೂನು ಕ್ರಮ ಕೈಗೊಳ್ಳಿ' ಎಂದು ದೂರಿನಲ್ಲಿ ಹೇಳಲಾಗಿದೆ.

ಮತೀಯ ಗೂಂಡಾಗಿರಿ ವಿದ್ಯಾರ್ಥಿಗಳ ಮೇಲೆ ಹಲ್ಲೆ

ಉಳ್ಳಾಲ(ದಕ್ಷಿಣ ಕನ್ನಡ): ವಿಹಾರಕ್ಕೆಂದು ಸಮುದ್ರ ತೀರಕ್ಕೆ ಬಂದಿದ್ದ ಮೂವರು ವಿದ್ಯಾರ್ಥಿನಿಯರು ಹಾಗೂ ಮೂವರು ವಿದ್ಯಾರ್ಥಿಗಳ ಮೇಲೆ ತಂಡವೊಂದು ದಾಳಿ ನಡೆಸಿರುವ ಘಟನೆ ಉಳ್ಳಾಲ ಪೊಲೀಸ್ ಠಾಣಾ ವ್ಯಾಪ್ತಿಯ ಸೋಮೇಶ್ವರ ಸಮುದ್ರ ತೀರದಲ್ಲಿ ಗುರುವಾರ ಸಂಜೆ ನಡೆದಿದೆ.

ಕೇರಳ ಮೂಲದ ಆರು ವಿದ್ಯಾರ್ಥಿಗಳು ವಿಹಾರಕ್ಕೆಂದು ಕಡಲ ತೀರಕ್ಕೆ ಬಂದಿದ್ದರು. ಮೂವರು ವಿದ್ಯಾರ್ಥಿಗಳು ಮುಸ್ಲಿಂ ಸಮುದಾಯಕ್ಕೆ ಸೇರಿದವರೆಂಬುದನ್ನು ಗಮನಿಸಿದ ತಂಡವೊಂದು ಇವರನ್ನು ಹಿಂಬಾಲಿಸಿತ್ತು ಎನ್ನಲಾಗಿದೆ. ವಿಹಾರದ ವೇಳೆ ತಂಡ ದಾಳಿ ನಡೆಸಿದೆ. ವಿದ್ಯಾರ್ಥಿಗಳು ಗಾಯಗೊಂಡಿದ್ದು, ಅವರನ್ನು ದೇರಳಕಟ್ಟೆ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಜತೆಗಿದ್ದ ಮೂವರು ವಿದ್ಯಾರ್ಥಿನಿಯ-ರು ವಾಪಸಾಗಿದ್ದಾರೆ. ಸ್ಥಳೀಯರು ಪೊಲೀಸರಿಗೆ ಮಾಹಿತಿ ತಿಳಿಸಿದ್ದಾರೆ.

ಪೊಲೀಸರು ಸ್ಥಳಕ್ಕೆ ಭೇಟಿ ನೀಡುವಷ್ಟರಲ್ಲಿ ಹಲ್ಲೆ ನಡೆಸಿದವರು ಸ್ಥಳದಿಂದ ಪರಾರಿಯಾಗಿದ್ದಾರೆ. ಉಳ್ಳಾಲ ಪೊಲೀಸರು ಸೋಮೇಶ್ವರ ಸಮುದ್ರ ತೀರದಲ್ಲಿ ಬಿಗಿ ಬಂದೋಬಸ್ತ್ ಏರ್ಪಡಿಸಿದ್ದಾರೆ. ಘಟನೆ ಬಗ್ಗೆ ಎಫ್‌ಐಆರ್ ದಾಖಲಾಗಿದೆ.

ಉತ್ತರಾಖಂಡ: ಭೂಕುಸಿತ ಸಂಕಷ್ಟದಲ್ಲಿ ಯಾತ್ರಿಗಳು

ಪಿಥೋರ್‌ಗಢ (ಪಿಟಿಐ): ಉತ್ತರಾಖಂಡದ ಧಾರ್ಚುಲಾದಿಂದ 45 ಕಿ.ಮೀ ದೂರದಲ್ಲಿರುವ ನಜಾಂಗ್ ಪ್ರದೇಶದಲ್ಲಿ ಭಾರಿ ಭೂಕುಸಿತ ಸಂಭವಿಸಿದ್ದು, 200ಕ್ಕೂ ಹೆಚ್ಚು ಆದಿ ಕೈಲಾಸ ಯಾತ್ರಿಗಳು ವಿವಿಧ ಪ್ರದೇಶಗಳಲ್ಲಿ ಸಿಲುಕಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ದೊಡ್ಡ ಪ್ರಮಾಣದಲ್ಲಿ ಮಣ್ಣು ರಸ್ತೆಯ ಮೇಲೆ ಬಿದ್ದಿದ್ದು, ಆದಿ ಕೈಲಾಸಕ್ಕೆ ಹೋಗುವ ಮತ್ತು ಹಿಂದಿರುಗುವ ಮಾರ್ಗದ ವಿವಿಧೆಡೆ ಯಾತ್ರಿಗಳು ಸಿಲುಕಿಕೊಂಡಿದ್ದಾರೆ ಎಂದು ಧಾರ್ಚುಲಾದ ಉಪ ವಿಭಾಗಾಧಿಕಾರಿ (ಎಸ್‌ಡಿಎಂ) ದೇವೇಶ್ ಶಶ್ನಿ ಮಾಹಿತಿ ನೀಡಿದ್ದಾರೆ.

'ಯಾತ್ರಾರ್ಥಿಗಳು ಸುರಕ್ಷಿತವಾಗಿದ್ದಾರೆ. ಧಾರ್ಚುಲಾ, ನಪಾಲ್ಚು, ಗುಂಜಿ ಮತ್ತು ಬುಂಡಿ ಪ್ರದೇಶಗಳಲ್ಲಿ ಭೂಕುಸಿತದ ಅವಶೇಷಗಳ-ನ್ನು ತೆರವುಗೊಳಿಸುವುದಕ್ಕಾಗಿ ಕಾಯುತ್ತಿದ್ದಾರೆ' ಎಂದು ಅವರು ಹೇಳಿದ್ದಾರೆ.

ಮೇ 30ರಂದು ಸಂಜೆ ಸಂಭವಿಸಿದ ಭೂಕುಸಿತದಿಂದ 100 ಮೀಟರ್‌ಗೂ ಹೆಚ್ಚು ರಸ್ತೆ ಹಾಳಾಗಿದೆ ಎಂದು ಅವರು ವಿವರಿಸಿದ್ದಾರೆ.

ಜೂನ್ 4ರ ಮೊದಲು ರಸ್ತೆ ಪುನರಾರಂಭ ಆಗುವ ಸಾಧ್ಯತೆ ಇಲ್ಲ ಎಂದು ಅವರು ಹೇಳಿದ್ದಾರೆ. ಈ ವರ್ಷ ಮೇ 4 ರಂದು ಆದಿ ಕೈಲಾಸ ಯಾತ್ರೆ ಆರಂಭವಾಗಿದೆ.

'ಐಫೋನ್: ಫಾಕ್ಸ್‌ಕಾನ್‌ಗೆ ಭೂಮಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಫೋನ್ ತಯಾರಿಕಾ ಕಂಪನಿ ಫಾಕ್ಸ್‌ಕಾನ್‌ಗೆ ಇದೇ ಜುಲೈ ವೇಳೆಗೆ ದೇವನಹಳ್ಳಿಯಲ್ಲಿ ಕೈಗಾರಿಕಾ ಭೂಮಿ ಹಸ್ತಾಂತರ ಮಾಡಲಾಗುವುದು. 2024ರ ಏಪ್ರಿಲ್ 1ರ ವೇಳೆಗೆ ಐಫೋನ್‌ಗಳ ಉತ್ಪಾದನೆ ಆರಂಭಿಸುವ ಗುರಿ ಹೊಂದಲಾಗಿದೆ ಎಂದು ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಫಾಕ್ಸ್‌ಕಾನ್ ಕಂಪನಿಯ ಜಾರ್ಜ್ ಚು ಅವರ ನೇತೃತ್ವದಲ್ಲಿ ಉನ್ನತ ಅಧಿಕಾರಿಗಳ ತಂಡವು ಗುರುವಾರ ಸಚಿವರನ್ನು ಭೇಟಿ ಮಾಡಿ ಮಾತುಕತೆ ನಡೆಸಿತು. ಇದೇ ಸಂದರ್ಭದಲ್ಲಿ ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅವರೂ ಹಾಜರಿದ್ದರು.

ಸುಮಾರು ₹13,600 ಕೋಟಿ ಹೂಡಿಕೆಯ ಈ ಯೋಜನೆಯಿಂದ 50 ಸಾವಿರ ಮಂದಿಗೆ ಉದ್ಯೋಗ ಸಿಗಲಿದೆ. ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶದಲ್ಲಿ (ಐಟಿಐಆರ್) ಕಾರ್ಯ ಯೋಜನೆಗಾಗಿ 300 ಎಕರೆ ಗುರುತಿಸಲಾಗಿದೆ ಎಂದು ಪಾಟೀಲ ತಿಳಿಸಿದರು.

ಇಬ್ಬರು ಪೈಲಟ್‌ಗಳು ಪ್ರಾಣಾಪಾಯದಿಂದ ಪಾರು

ವಾಯುಪಡೆ ತರಬೇತಿ ವಿಮಾನ ಪತನ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಭಾರತೀಯ ವಾಯು ಪಡೆಯ 'ಕಿರಣ್' ತರಬೇತಿ ವಿಮಾನವೊಂದು ಗುರುವಾರ ತಾಲ್ಲೂಕಿನ ಸಪ್ಪಯ್ಯನಪುರದಲ್ಲಿ ಪತನಗೊಂಡಿದ್ದು, ಇಬ್ಬರು ಪೈಲಟ್‌ಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ತರಬೇತುದಾರ ವಿಂಗ್ ಕಮಾಂಡರ್ ತೇಜ್‌ಪಾಲ್ (50) ಮತ್ತು ತರಬೇತಿ ಪಡೆಯುತ್ತಿದ್ದ ಪೈಲಟ್ ಭೂಮಿಕಾ (28) ಅವರು ವಿಮಾನ ನಿಯಂತ್ರಣ ತಪ್ಪುತ್ತಲೇ ಪ್ಯಾರಾಚೂಟ್ ಮೂಲಕ ಸುರಕ್ಷಿತವಾಗಿ ಕೆಳಕ್ಕೆ ಇಳಿದಿದ್ದಾರೆ. ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ವಾಯುಪಡೆಯು ಇಬ್ಬರನ್ನೂ ಹೆಲಿಕಾಪ್ಟರ್ ಮೂಲಕ ಬೆಂಗಳೂರಿಗೆ ಕರೆದೊಯ್ದಿದೆ.

'ತರಬೇತಿ ಹಾರಾಟ ನಡೆಸುತ್ತಿದ್ದ ಸಂದರ್ಭದಲ್ಲಿ ವಿಮಾನ ಅಪಘಾತಕ್ಕೀಡಾಗಿದ್ದು, ಇಬ್ಬರೂ ಸಿಬ್ಬಂದಿ ಸುರಕ್ಷಿತವಾಗಿ ಇಳಿದಿದ್ದಾರೆ. ಪತನದ ಕಾರಣವನ್ನು ಪತ್ತೆ ಮಾಡುವುದಕ್ಕಾಗಿ ತನಿಖೆಗೆ ಆದೇಶಿಸಲಾಗಿದೆ' ಎಂದು ಭಾರತೀಯ ವಾಯುಸೇನೆ ಟ್ವೀಟ್‌ನಲ್ಲಿ ತಿಳಿಸಿದೆ.

ಚಾಮರಾಜನಗರ ಬಳಿಯ ಸಪ್ಪಯ್ಯನಪುರದಲ್ಲಿ ವಿಮಾನ ಅಪಘಾತವಾದ ಸ್ಥಳದಲ್ಲಿ ಅವಶೇಷ ಗಳನ್ನು ವೀಕ್ಷಿಸಿದ್ದ ಜನರು

'ಆಗಸದಲ್ಲಿ ಸ್ಫೋಟದ ಶಬ್ದ ಕೇಳಿಸಿತು. ವಿಮಾನ ಎರಡು ಸುತ್ತು ತಿರುಗಿತು. ಅಷ್ಟರಲ್ಲಿ ಇಬ್ಬರು ಪ್ಯಾರಾಚೂಟ್ ಮೂಲಕ ಕೆಳಕ್ಕೆ ಇಳಿಯುವುದು ಕಾಣಿಸಿತು. ಸ್ವಲ್ಪ ದೂರದಲ್ಲಿ ವಿಮಾನ ಉರಿಯುತ್ತ ಕೆಳಗಡೆ ಬಿತ್ತು. ಸ್ಥಳಕ್ಕೆ ಬಂದು ನೋಡಿದಾಗ ವಿಮಾನದ ಭಾಗಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಜನರು ಯಾರೂ ಇರಲಿಲ್ಲ. ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿದೆವು' ಎಂದು ಪ್ರತ್ಯಕ್ಷದರ್ಶಿ ಭೋಗಾಪುರದ ಮಹೇಶ್ ತಿಳಿಸಿದರು.

ವಿಷಯ ತಿಳಿಯುತ್ತಿದ್ದಂತೆಯೇ ಅಗ್ನಿಶಾಮಕ ದಳ, ಪೊಲೀಸರು, ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ದೌಡಾಯಿಸಿ ರಕ್ಷಣಾ ಕಾರ್ಯದಲ್ಲಿ ತೊಡಗಿದರು. ಬೆಂಕಿ ಹತ್ತಿಕೊಂಡು ಪತನಗೊಂಡ ವಿಮಾನದ ಅವಶೇಷಗಳು ಉರಿಯುತ್ತಿದ್ದವು. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಮೇಕೆದಾಟು: ತಮಿಳುನಾಡಿಗೆ ತೊಂದರೆ ಇಲ್ಲ – ಡಿ.ಕೆ.ಶಿವಕುಮಾರ್

'ಜಗಳ ಸಾಕು, ಸಹಕಾರ ಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೇಕೆದಾಟು ಯೋಜನೆಯಿಂದ ತಮಿಳುನಾಡಿಗೆ ಯಾವುದೇ ರೀತಿಯ ತೊಂದರೆ-ಯಾಗುವುದಿಲ್ಲ. ನಮಗೆ ತಮಿಳುನಾಡಿನ ಮೇಲೆ ದ್ವೇಷ ಮಾಡುವ, ಯುದ್ಧ ಮಾಡುವ ಉದ್ದೇಶವಿಲ್ಲ. ಅಲ್ಲಿರುವವರು ನಮ್ಮ ಅಣ್ಣತಮ್ಮಂದಿರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಮೇಕೆದಾಟು ಯೋಜನೆ ಜಾರಿಗೆ ಸಿದ್ಧತೆ ನಡೆಸುವಂತೆ ಡಿ.ಕೆ. ಶಿವಕುಮಾರ್ ನೀಡಿದ್ದ ಹೇಳಿಕೆಗೆ ತಮಿಳುನಾಡಿನ ಜಲಸಂಪನ್ಮೂಲ ಸಚಿವ ದೊರೈ ಮುರುಗನ್ ಬುಧವಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ತಮಿಳುನಾಡಿನವರು ಆತಂಕಪಡುವ ಅಗತ್ಯವಿಲ್ಲ. ಈ ಯೋಜನೆಯಿಂದ ಯಾವುದೇ ತೊಂದರೆ ಇಲ್ಲ. ಹೀಗಾಗಿ, ಅವರಿಗೆ ಹೃದಯ ಶ್ರೀಮಂತಿಕೆ ಇರಲಿ. ನಮ್ಮಲ್ಲೂ ಹೃದಯ ಶ್ರೀಮಂತಿಕೆಯಿದೆ. ನಾವು ಜಗಳವಾಡಿ ಕೋರ್ಟ್ ಕಚೇರಿ ಅಲೆದಿದ್ದು ಸಾಕು. ಸೌಹಾರ್ದತೆಯಿಂದ ಕುಡಿಯುವ ನೀರು ಹಾಗೂ ರೈತರಿಗೆ ಅನುಕೂಲವಾಗುವ ಯೋಜನೆಗೆ ಸಹಕರಿಸಬೇಕು' ಎಂದು ತಮಿಳುನಾಡು ಸರ್ಕಾರಕ್ಕೆ ಅವರು ಮನವಿ ಮಾಡಿದರು.

'ಮೇಕೆದಾಟು ಯೋಜನೆಯಿಂದ ತಮಿಳುನಾಡಿಗೂ ಅನುಕೂಲವಾಗುತ್ತದೆ. ಸಮುದ್ರಕ್ಕೆ ಹೋಗುವ ನೀರು ತಡೆದು ಅದನ್ನು ಕಾವೇರಿ ಭಾಗದ ಜನರ ಬಳಕೆಗೆ ಅವಕಾಶ ಮಾಡಿಕೊಡಲಾಗುವುದು. ಕಾವೇರಿ ನದಿಗೆ ಅಣೆಕಟ್ಟುಗಳ ಬೀಗ ಕೇಂದ್ರ ಸರ್ಕಾರದ ಕೈಯಲ್ಲಿದೆ. ತಮಿಳುನಾಡಿಗೆ ಯಾವಾಗ ಎಷ್ಟು ನೀರು ಬಿಡಬೇಕು ಎಂದು ಅವರು ತೀರ್ಮಾನಿಸಿ ಬಿಡುತ್ತಾರೆ'ಎಂದರು.

'ಮೇಕೆದಾಟು ಯೋಜನೆ ಆಗ್ರಹಿಸಿ ನಾವು ಪಾದಯಾತ್ರೆ ಮಾಡಿದ ನಂತರ ಹಿಂದಿನ ಬಿಜೆಪಿ ಸರ್ಕಾರ ಬಜೆಟ್‌ನಲ್ಲಿ ₹ 1 ಸಾವಿರ ಕೋಟಿ ಅನುದಾನ ಮೀಸಲಿಟ್ಟಿತ್ತು. ಆದರೆ, ಆ ಹಣ ಖರ್ಚು ಮಾಡಿಲ್ಲ' ಎಂದರು.

ಎಐಎಡಿಎಂಕೆ, ಡಿಎಂಕೆ ಆಕ್ಷೇಪ

ಚೆನ್ನೈ (ಪಿಟಿಐ): ಮೇಕೆದಾಟು ಅಣೆಕಟ್ಟು ನಿರ್ಮಾಣಕ್ಕೆ ರಾಜ್ಯ ಸರ್ಕಾರ ಬದ್ಧವಾಗಿದೆ ಎಂಬ ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆಗೆ ತಮಿಳುನಾಡಿನ ಎಐಎಡಿಎಂಕೆ ಹಾಗೂ ಆಡಳಿತರೂಢ ಡಿಎಂಕೆ ಪಕ್ಷ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

'ಕರ್ನಾಟಕ ಸರ್ಕಾರದ ಈ ನಿರ್ಧಾರದಿಂದ ತಮಿಳುನಾಡು ಭವಿಷ್ಯದಲ್ಲಿ ಮರುಭೂಮಿಯಾಗ-ಲಿದೆ. ಹಾಗಾಗಿ, ಅಣೆಕಟ್ಟು ನಿರ್ಮಾಣದ ವಿರುದ್ಧ ತೀವ್ರ ಪ್ರತಿಭಟನೆ ನಡೆಸಲಾಗುವುದು' ಎಂದು ಎಐಎಡಿಎಂಕೆ ವಿರೋಧ ಪಕ್ಷದ ನಾಯಕ ಕೆ. ಪಳನಿಸ್ವಾಮಿ ಎಚ್ಚರಿಕೆ ನೀಡಿದ್ದಾರೆ.

'ಕಾಂಗ್ರೆಸ್ ಸರ್ಕಾರವು ಕಾವೇರಿ ನದಿಯ ಕೊನೆ ತೀರದ ಜನರ ಹಿತಾಸಕ್ತಿಗೆ ವಿರುದ್ಧವಾಗಿ ಯಾವುದೇ ನಿರ್ಧಾರ ಕೈಗೊಳ್ಳಬಾರದು' ಎಂದು ಒತ್ತಾಯಿಸಿದ್ದಾರೆ. ಕಾವೇರಿ ಅಂತರರಾಜ್ಯ ನದಿ ವಿವಾದ ಕಾಯ್ದೆ 1956ರ ಅನ್ವಯ ನದಿಯ ಸ್ವರೂಪ ಬದಲಾಯಿಸುವ ಯಾವುದೇ ಹಕ್ಕು ಕರ್ನಾಟಕಕ್ಕೆ ಇಲ್ಲ. ಅಲ್ಲದೇ, ಕಾವೇರಿ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿ ನದಿ ನೀರು ಹಂಚಿಕೆಯ ರಾಜ್ಯಗಳ ಅನುಮತಿ ಇಲ್ಲದೆ ಹೊಸದಾಗಿ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳದಂತೆ ಅಂತಿಮ ತೀರ್ಪಿನಲ್ಲೂ ಸ್ಪಷ್ಟಪಡಿಸಲಾಗಿದೆ ಎಂದು ತಿಳಿಸಿದ್ದಾರೆ.

ತಮಿಳುನಾಡಿನ ವಿರೋಧದ ನಡುವೆಯೂ ಕರ್ನಾಟಕ ಸರ್ಕಾರ ಅಣೆಕಟ್ಟು ನಿರ್ಮಾಣ ಮಾಡುವುದಾಗಿ ಘೋಷಿಸಿದೆ. ಡ್ಯಾಂ ನಿರ್ಮಿಸಿದರೆ ನೀರಾವರಿ ಮತ್ತು ಕುಡಿಯುವ ನೀರಿಗೆ ಕಾವೇರಿ ನದಿ ಅವಲಂಬಿಸಿರುವ ತಮಿಳುನಾಡು ಮರು-ಭೂಮಿಯಾಗಲಿದೆ ಎಂದಿರುವ ಪಳನಿಸ್ವಾಮಿ,



'ಅಣೆಕಟ್ಟು ನಿರ್ಮಾಣ ವಿರುದ್ಧದ ಹೋರಾಟದಲ್ಲಿ ಡಿಎಂಕೆ ಸರ್ಕಾರವನ್ನು ನಾವು ಅವಲಂಬಿಸುವುದಿಲ್ಲ' ಎಂದಿದ್ದಾರೆ.

ಸಿಪಿಐ ರಾಜ್ಯ ಕಾರ್ಯದರ್ಶಿ ಆರ್. ಮುತರಸನ್ ಕೂಡ ಆಕ್ಷೇಪ ವ್ಯಕ್ತಪಡಿಸಿದ್ದು, 'ತಮಿಳುನಾಡು, ಪುದುಚೇರಿ ಮತ್ತು ಕೇರಳದ ಅನುಮತಿ ಇಲ್ಲದೆಯೇ ಕಾವೇರಿ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಯೋಜನೆ ಕೈಗೆತ್ತಿಕೊಳ್ಳುವಂತಿಲ್ಲ. ಈ ಬಗ್ಗೆ ಕಾವೇರಿ ನ್ಯಾಯಮಂಡಳಿಯ ಅಂತಿಮ ತೀರ್ಪಿನಲ್ಲಿ ಸ್ಪಷ್ಟಪಡಿಸಲಾಗಿದೆ' ಎಂದಿದ್ದಾರೆ.

ಡಿಎಂಕೆಗೆ ಅಚ್ಚರಿ: ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ನೇತೃತ್ವದ ಡಿಎಂಕೆ ಸರ್ಕಾರ ಕೂಡ ಅಣೆಕಟ್ಟು ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸಿದೆ. ಅಲ್ಲದೇ, ಅಧಿಕಾರಕ್ಕೆ ಬಂದ ತಕ್ಷಣವೇ ತಮಿಳುನಾಡನ್ನು ಟೀಕಿಸಿರುವ ಶಿವಕುಮಾರ್ ಧೋರಣೆಗೆ ಅಚ್ಚರಿ ವ್ಯಕ್ತಪಡಿಸಿದೆ.

'ಕಾವೇರಿ ನ್ಯಾಯಮಂಡಳಿ ಅಥವಾ ಸುಪ್ರೀಂ ಕೋರ್ಟ್‌ನ ಅಂತಿಮ ತೀರ್ಪಿನಲ್ಲಿ ಉದ್ದೇಶಿತ ಮೇಕೆದಾಟು ಅಣೆಕಟ್ಟು ನಿರ್ಮಾಣದ ಬಗ್ಗೆ ಪ್ರಸ್ತಾಪವೇ ಇಲ್ಲ. ಈ ಬಗ್ಗೆ ಉಪ ಮುಖ್ಯಮಂತ್ರಿ ಶಿವಕುಮಾರ್ ಮೊದಲು ತಿಳಿದುಕೊಳ್ಳಬೇಕು' ಎಂದು ಜಲ ಸಂಪನ್ಮೂಲ ಸಚಿವ ದುರೈಮುರುಗನ್ ಬುಧವಾರ ಪ್ರತಿಕ್ರಿಯಿಸಿದ್ದರು.

ನೈಋತ್ಯ ರೈಲ್ವೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಪ್ರಕಟಣೆ ಸಂ. ಇಸಿಎನ್-ಟಿಆರ್‌ಡಿ-08-2023 ದಿನಾಂಕ : 20-05-2023

ಕೆಲಸದ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆ ವಲಯದ ಮುಖ್ಯ ವಿದ್ಯುತ್ ಇಂಜಿನಿಯರ್, ನಿರ್ಮಾಣ, ಹುಬ್ಬಳ್ಳಿ ಇವರ ವ್ಯಾಪ್ತಿಯಲ್ಲಿನ ವಿವಿಧ ನಿರ್ಮಾಣ ಸ್ಥಳಗಳು / ಸೆಕ್ಷನ್‌ಗಳಿಗಾಗಿ ಯೋಜನೆ ಮೇಲ್ವಿಚಾರಣಾ ಸೇವೆಗಳನ್ನು ಒದಗಿಸಲು ಯೋಜನೆ ಮೇಲ್ವಿಚಾರಣಾ ಸೇವಾ ಏಜೆನ್ಸಿ (ಪಿಎಸ್‌ಎಸ್‌ಎ) ನೇಮಿಸುವುದಕ್ಕಾಗಿ ಪ್ರಸ್ತಾವನೆಗಾಗಿ ಕೋರಿಕೆ.	ರೂ. 2,92,80,480.24

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 05-07-2023 ರಂದು 11:00 ಗಂಟೆಯವರೆಗೆ

ಟೆಂಡರ್ ಪ್ರಕಟಣೆ ಸಂ. ಇಸಿಎನ್-ಟಿಆರ್‌ಡಿ-10-2023 ದಿನಾಂಕ : 27-05-2023

ಕೆಲಸದ ಹೆಸರು	ಅಂದಾಜು ಮೌಲ್ಯ
ತಳಕಲ್ ಯಾರ್ಡ್‌ನಲ್ಲಿ ರಸ್ತೆ-5 ಮತ್ತು ರಸ್ತೆ-6ರ ವಿದ್ಯುದೀಕರಣ ಮತ್ತು ರಸ್ತೆ-4ಗೆ ಸಂಪರ್ಕಿಸಲು ಯಾರ್ಡ್‌ನಲ್ಲಿ ಅಗತ್ಯವಾದ ಮಾರ್ಪಾಡು.	ರೂ. 1,11,13,981.30

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 19-06-2023 ರಂದು 11:00 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ಟಿಆರ್‌ಡಿ / ಸಿಎನ್ ಬೆಂಗಳೂರು ದಂಡು

ಪಿಯುಬಿ/131/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023-24

S.W.Railways | SWRRLY | SWRRLY

ರವೀಂದ್ರ ಪುಸ್ತಕಾಲಯ, ಛಂದ ಪುಸ್ತಕಕ್ಕೆ ‘ಕಸಾಪ ದತ್ತಿ ಪ್ರಶಸ್ತಿ’

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ ‘ಅಂಕಿತ ಪುಸ್ತಕ ಪುರಸ್ಕಾರ ದತ್ತಿ ಪ್ರಶಸ್ತಿ’ಗೆ ಸಾಗರದ ರವೀಂದ್ರ ಪುಸ್ತಕಾಲಯ ಹಾಗೂ ಬೆಂಗಳೂರಿನ ಛಂದ ಪುಸ್ತಕ ಸಂಸ್ಥೆ ಆಯ್ಕೆಯಾಗಿವೆ. ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ 2022 ಹಾಗೂ 2023ನೇ ಸಾಲಿಗೆ ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ಫಲಕ ಹಾಗೂ ತಲಾ ₹ 35 ಸಾವಿರ ನಗದು ಒಳಗೊಂಡಿದೆ. ಬೆಂಗಳೂರಿನ ಅಂಕಿತ ಪುಸ್ತಕ ಪ್ರಕಾಶನವು ಈ ದತ್ತಿ ನಿಧಿಯನ್ನು ಸ್ಥಾಪಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಇಸ್ರೋ | isro

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಎಲೆಕ್ಟ್ರೋ-ಆಪ್ಟಿಕ್ಸ್ ಸಿಸ್ಟಮ್‌ಗಳಿಗಾಗಿ ಪ್ರಯೋಗಾಲಯ (LEOS)
ಪೀಣ್ಯ, ಬೆಂಗಳೂರು-560058, ಲಿಯೋಸ್ ನಿರ್ಮಾಣ ಮತ್ತು ನಿರ್ವಹಣೆ ಗುಂಪು(LCMG)
[Phone: (080)-22685088, 5193, 5093, 5086, Fax: (080)-28392310]

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ (ಎನ್‌ಐಇಟಿ)

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಗಳಿಗಾಗಿ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ:

ಕೆಲಸದ ಹೆಸರು ; ಎನ್‌ಐಇಟಿ ಸಂಖ್ಯೆ ಮತ್ತು ದಿನಾಂಕ: ಅಡ್ಮಿನ್ ಬ್ಲಾಕ್, ಲಿಯೋಸ್, ಪೀಣ್ಯ, ಬೆಂಗಳೂರು-560058 ನಲ್ಲಿ ಉಪನ್ಯಾಸ ಸಭಾಂಗಣಕ್ಕೆ ಹೊರ ಆವರಣದೊಂದಿಗೆ 13 ಪ್ಯಾಸೆಂಜರ್ ಕ್ಯಾಪ್ಸುಲ್ ಲಿಫ್ಟ್‌ನ ಸರಬರಾಜು ಮತ್ತು ನಿರ್ಮಾಣ ಮಾಡುವುದು. ಎನ್‌ಐಇಟಿ ಸಂಖ್ಯೆ: ಲಿಯೋಸ್/ಸಿ&ಎಂಜಿ/ಕ್ಯಾಪ್ಸುಲ್ ಲಿಫ್ಟ್/ಇಟಿಎನ್-01ಎಂ/2023-24 ದಿನಾಂಕ: 26.05.2023 **ಟೆಂಡರ್ ಮತ್ತು ಇಎಮ್‌ಡಿಗೆ ಅಂದಾಜು ವೆಚ್ಚ ರೂ.35.25 ಲಕ್ಷ ಇಎಂಡಿ ರೂ: 70,500/- ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ** : 04 ತಿಂಗಳು **ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಲು ಪ್ರಾರಂಭದ ದಿನಾಂಕ:** 01.06.2023 **ಮುಕ್ತಾಯದ ದಿನಾಂಕ:** 14.06.2023

ಆಸಕ್ತ ಟೆಂಡರುದಾರರು ಇ-ಟೆಂಡರ್(ಎನ್‌ಐಇಟಿ) ಆಹ್ವಾನದ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರವನ್ನು www.isro.gov.in ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್‌ಲೋಡ್ ಮಾಡಬಹುದು.

ಸಹಿ/-
ಸಮೂಹ ನಿರ್ದೇಶಕ [ನಿರ್ಮಾಣ ಮತ್ತು ನಿರ್ವಹಣಾ ಸಮೂಹ]
ಯುಆರ್ ಎಸ್ ಸಿ, ಬೆಂಗಳೂರು

ಬ್ರಾಹ್ಮಣ ಸಭಾ: ವಿದ್ಯಾರ್ಥಿ ಸಹಾಯ ನಿಧಿಗೆ ಅರ್ಜಿ ಆಹ್ವಾನ

ಬೆಂಗಳೂರು: ಜೆ.ಪಿ.ನಗರ ಬ್ರಾಹ್ಮಣ ಸಭಾವು 2023ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ 70ಕ್ಕಿಂತ ಹೆಚ್ಚು ಅಂಕ ಪಡೆದ ಸಮುದಾಯದ ವಿದ್ಯಾರ್ಥಿಗಳಿಂದ ‘ವಿದ್ಯಾರ್ಥಿ ಸಹಾಯ ನಿಧಿ’ಗೆ ಅರ್ಜಿ ಆಹ್ವಾನಿಸಿದೆ.

ವಿದ್ಯಾರ್ಥಿಗಳು ದೃಢೀಕರಿಸಿದ ಅಂಕಪಟ್ಟಿ, ಭಾವಚಿತ್ರ, ಆಧಾರ್ ಕಾರ್ಡ್, ವಾರ್ಷಿಕ ಆದಾಯ ಪತ್ರ, ವಾಸವಿರುವ ವಿಳಾಸ, ಸಂಪರ್ಕ ಸಂಖ್ಯೆ ಸಹಿತ ಅರ್ಜಿಯ ಪ್ರತಿಯನ್ನು ಇದೇ 30ರೊಳಗೆ ಎಂ.ಎಸ್. ರಾಮಪ್ರಸಾದ್, ಖಜಾಂಚಿ, ಜೆ.ಪಿ.ನಗರ ಬ್ರಾಹ್ಮಣ ಸಭಾ, 1298, 20ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜೆ.ಪಿ.ನಗರ 2ನೇ ಹಂತ, ಬೆಂಗಳೂರು-560078 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕ: 9448617964

ಪ್ರಜಾವಾಣಿ@75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ
8147623791
080 45557204
readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

Azadi Ka Amrit Mahotsav | icmr INDIAN COUNCIL OF MEDICAL RESEARCH | NCDIR NATIONAL CENTRE FOR DISEASE INFORMATICS AND RESEARCH | G20

ICMR-NATIONAL CENTRE FOR DISEASE INFORMATICS AND RESEARCH
Department of Health Research, Ministry of Health and Family Welfare, Government of India,
Nirmal Bhawan- ICMR Complex, Poojanahalli Road, Kannamangala Post,
Bengaluru -562 110. Karnataka (India) Email: adm.ncdir@gov.in

VACANCY NOTICE - Advertisement No. 01/2023

Online applications are invited from eligible candidates for the one post of Technical Assistant (reserved for SC) in the Pay Matrix Level: 6 of ₹.35400-112400 at ICMR-NCDIR, Bengaluru. **Essential Qualification:** First Class three years Bachelor's degree in Computer Science/Computer Applications from a recognized University OR First Class B.E./B.Tech in Computer Engineering/Computer Science/Information Technology/ Information Science from a recognized University. Last date for submission of online applications: **07.07.2023 upto 05:00 PM.** Detailed advertisement and other terms and conditions can be viewed/ downloaded from the websites www.ncdirindia.org / www.icmr.nic.in.

Sd/-
Director

ಸ್ವಾಮೀಜಿ ಫೋಟೊ ಹೊರಕ್ಕೆ: ಬಿಜೆಪಿ ಆಕ್ರೋಶ

ವಿಧಾನಸೌಧದ 3ನೇ ಮಹಡಿಯಲ್ಲಿ ಸಚಿವರ ಕೊಠಡಿ ಮುಂದಿರಿಸಿದ್ದ ಚಿತ್ರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದ ಮೂರನೇ ಮಹಡಿಯಲ್ಲಿ ಸಚಿವರಾದ ಕೆ.ಎಚ್. ಮುನಿಯಪ್ಪ ಹಾಗೂ ಕೆ.ಎನ್. ರಾಜಣ್ಣ ಅವರ ಕೊಠಡಿಯಿಂದ ಮಾಜಿ ಮುಖ್ಯಮಂತ್ರಿಗಳು ಹಾಗೂ ಸಿದ್ಧಗಂಗಾ ಸ್ವಾಮೀಜಿ ಅವರ ಚಿತ್ರಗಳನ್ನು ಹೊರಗೆ ಹಾಕಲಾಗಿದೆ ಎಂದು ಬಿಜೆಪಿ ಆರೋಪಿಸಿದೆ.

ಎಚ್.ಡಿ. ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿ ಅವರ ಚಿತ್ರಗಳ ಜೊತೆಗೆ ಶಿವಕುಮಾರ ಸ್ವಾಮೀಜಿ ಅವರ ಚಿತ್ರವನ್ನೂ ಹೊರ ಹಾಕಲಾಗಿದೆ ಎಂದು ಬಿಜೆಪಿ ಮಾಡಿರುವ ಟ್ವೀಟ್‌ನಲ್ಲಿ ಆರೋಪಿಸಲಾಗಿದೆ.

ಕೊಠಡಿಗಳನ್ನು ಸ್ವಚ್ಛ ಮಾಡುವ ಸಂದರ್ಭದಲ್ಲಿ ಚಿತ್ರಗಳನ್ನು ಹೊರ ಗಿರಿಸಲಾಗಿತ್ತು ಎಂದು ಸಚಿವರ ಕಚೇರಿಯ ಮೂಲಗಳು ತಿಳಿಸಿವೆ

ಇಂಟರ್‌ನ್ಯಾಷನಲ್ ಬುಕ್ ಆಫ್ ರೆಕಾರ್ಡ್‌ಗೆ ವಿಷ್ಣು ‘ಕಟೌಟ್ ಜಾತ್ರೆ’

ಬೆಂಗಳೂರು: ವಿಷ್ಣುವರ್ಧನ್ ಹೆಸರಿನಲ್ಲಿ ಕಳೆದ ವರ್ಷ ನಡೆದಿದ್ದ ‘ಕಟೌಟ್ ಜಾತ್ರೆ’ ಏಷ್ಯಾ ಬುಕ್ ಮತ್ತು ಇಂಟರ್ ನ್ಯಾಷನಲ್ ಬುಕ್ ಆಫ್ ರೆಕಾರ್ಡ್‌ಗೆ ಸೇರಿದೆ ಎಂದು ವಿಷ್ಣು ಸೇನಾ ಸಮಿತಿಯ ರಾಜ್ಯಾಧ್ಯಕ್ಷ ವೀರಕಪುತ್ರ ಶ್ರೀನಿವಾಸ ತಿಳಿಸಿದ್ದಾರೆ.

ವಿಷ್ಣುವರ್ಧನ್ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿ 50 ವರ್ಷ ತುಂಬಿದ್ದ ಹಿನ್ನೆಲೆಯಲ್ಲಿ ವೀರಕಪುತ್ರ ಶ್ರೀನಿವಾಸ ನೇತೃತ್ವದಲ್ಲಿ 50 ಸೇನಾನಿಗಳು 2022ರ ಸೆಪ್ಟೆಂಬರ್ 18ರಂದು ವಿಷ್ಣು ಪುಣ್ಯಭೂಮಿಯಲ್ಲಿ 40 ಅಡಿ ಎತ್ತರ, 8 ಅಡಿ ಅಗಲದ 51 ಬೃಹತ್ ಕಟೌಟ್‌ಗಳನ್ನು ಸ್ಥಾಪಿಸಿ ‘ಕಟೌಟ್ ಜಾತ್ರೆ’ ಕಾರ್ಯಕ್ರಮವನ್ನು ಆಯೋಜಿಸಿದ್ದರು.

ಲಕ್ಷಾಂತರ ಜನರು ಭಾಗವಹಿಸಿದ್ದ ಈ ಕಟೌಟ್ ಜಾತ್ರೆಯನ್ನು ಏಷ್ಯಾ ಬುಕ್ ಆಫ್ ರೆಕಾರ್ಡ್ ಮತ್ತು ಇಂಟರ್ ನ್ಯಾಷನಲ್ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲಿಸಲು ಮನವಿ ಸಲ್ಲಿಸಲಾಗಿತ್ತು. ವಿವಿಧ ಹಂತಗಳಲ್ಲಿ ಪರಿಶೀಲನೆ ನಡೆಸಿದ ಬಳಿಕ ದಾಖಲೆಗೆ ಸೇರಿಸಲಾಗಿದೆ. ಎರಡೂ ದಾಖಲೆಗಳ ಪ್ರಮಾಣಪತ್ರ ಮತ್ತು ಪದಕಗಳು ಗುರುವಾರ ಕೈಸೇರಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಬನಶಂಕರಿ ಅಮ್ಮನವರ ಕುಂಭಾಭಿಷೇಕ ಮಹೋತ್ಸವ: ಬೆಳಿಗ್ಗೆ 9ಕ್ಕೆ ಲಕ್ಷ ಮೋದಕ ಮಹಾಗಣಪತಿ ಹೋಮ, ಸಂಜೆ 5ಕ್ಕೆ ಲಕ್ಷ ಕುಂಕುಮಾರ್ಚನೆ, ಆಯೋಜನೆ: ಆಯೋಜನೆ ಮತ್ತು ಸ್ಥಳ: ಬನಶಂಕರಿ ದೇವಸ್ಥಾನ, ಎಸ್. ಕರಿಯಪ್ಪ ರಸ್ತೆ

ಚುನಾಯಿತ ವಿಪ್ರ ಶಾಸಕರ ಸನ್ಮಾನ ಸಮಾರಂಭ: ಸಾನ್ನಿಧ್ಯ: ಸುಬುಧೇಂದ್ರ ತೀರ್ಥ ಶ್ರೀಪಾದ ಸ್ವಾಮೀಜಿ, ಅಧ್ಯಕ್ಷತೆ: ಗೋವಿಂದ ಕುಲಕರ್ಣಿ, ಅತಿಥಿಗಳು: ಶ್ರೀಕಾಂತ್ ಬಡವೆ, ಸಂಜಯ್ ಮಿಶ್ರ, ಪ್ರದೀಪ್ ಜಿ.ಆರ್., ಆರ್. ಲಕ್ಷ್ಮೀಕಾಂತ್, ರಾಘವೇಂದ್ರ ಮಯ್ಯ, ಆಯೋಜನೆ: ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘ, ಸ್ಥಳ: ಶಂಕರ ಸೇವಾ ಸಮಿತಿ, ರಾಜಾಜಿನಗರ, ಸಂಜೆ 5

‘ನೃತ್ಯ ನಿರಾಜನಾ’ ಉತ್ಸವ: ಅತಿಥಿಗಳು: ಸಾಯಿ ವೆಂಕಟೇಶ್, ಎಸ್. ನಂಜುಂಡ ರಾವ್, ದರ್ಶಿನಿ ಮಂಜುನಾಥ್, ಆಯೋಜನೆ: ನೃತ್ಯ ದಿಶಾ ಟ್ರಸ್ಟ್, ಸ್ಥಳ: ರವಿಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಬಿ.ಟಿ.ಎಂ. ಬಡಾವಣೆ ವಿಭಾಗ,
ಬೃಬೆಂಮಪಾ ವಾಣಿಜ್ಯ ಸಂಕೀರ್ಣ, 2ನೇ ಮಹಡಿ,
ಲಶ್ಕರ್ ಹೊಸೂರು ರಸ್ತೆ, ಆಡುಗೋಡಿ, ಬೆಂಗಳೂರು-560 030.

ಸಂಖ್ಯೆ:ಕಾಅ/(ಬಿಟಿಎಂ)/ಎಇ/ಇ-ಪ್ರೊಕ್ಯೂರ್/02/2023-24 ದಿನಾಂಕ: 01-06-2023

ಅಲ್ಪಾವಧಿ ಟೆಂಡರ್ ಪ್ರಕಟಣೆ : 1ನೇ ಕರೆ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ. ಬಡಾವಣೆ ವಿಭಾಗ, ಬಿ.ಬಿ.ಎಂ.ಪಿ ಬೆಂಗಳೂರು ಇವರು ಅಥವಾ ಯಾವುದಾದರೂ ಪ್ರತಿಷ್ಠಿತ ಏಜೆನ್ಸಿಗಳಿಂದ ಬಿ.ಬಿ.ಎಂ.ಪಿ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಎಂಇಎಸ್/ರೈಲ್ವೇಸ್ ಅಥವಾ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಐಟಂದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು / ವರ್ಗ	ನಿಗದಿಪಡಿಸಿದ ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ)
1)	ವಾರ್ಡ್ ನಂ.185 ಈಜಿಪುರದಲ್ಲಿ ವಾರ್ಡ್ ಮಿತಿಯಲ್ಲಿ ಅವಶೇಷಗಳನ್ನು ತೆಗೆದುಹಾಕಲು ಮತ್ತು ಇತರ ಕೆಲಸಗಳಿಗಾಗಿ ಟ್ರ್ಯಾಕ್ಟರ್ ಮತ್ತು ಕಾರ್ಮಿಕರನ್ನು ತೊಡಗಿಸಿಕೊಳ್ಳುವುದು. (ಇತರೆ)	15.00	37,500/-
2)	ವಾರ್ಡ್ ನಂ.186 ಕೋರಮಂಗಲದ ವಾರ್ಡ್ ಮಿತಿಯಲ್ಲಿ ಅವಶೇಷಗಳನ್ನು ತೆಗೆದುಹಾಕಲು ಮತ್ತು ಇತರ ಕೆಲಸಗಳಿಗಾಗಿ ಟ್ರ್ಯಾಕ್ಟರ್ ಮತ್ತು ಕಾರ್ಮಿಕರನ್ನು ತೊಡಗಿಸಿಕೊಳ್ಳುವುದು. (ಇತರೆ)	15.00	37,500/-
3)	ವಾರ್ಡ್ ನಂ.187 ಆಡುಗೋಡಿಯ ವಾರ್ಡ್ ಮಿತಿಯಲ್ಲಿ ಅವಶೇಷಗಳನ್ನು ತೆಗೆದುಹಾಕಲು ಮತ್ತು ಇತರ ಕೆಲಸಗಳಿಗಾಗಿ ಟ್ರ್ಯಾಕ್ಟರ್ ಮತ್ತು ಕಾರ್ಮಿಕರನ್ನು ತೊಡಗಿಸಿಕೊಳ್ಳುವುದು. (ಪರಿಶಿಷ್ಟ ಜಾತಿ)	15.00	18,750/-
4)	ವಾರ್ಡ್ ನಂ. 188 ಲಕ್ಕಸಂದ್ರದ (ಹಳೆಯ ವಾರ್ಡ್ ಸಂಖ್ಯೆ 146) ವಾರ್ಡ್ ಮಿತಿಯಲ್ಲಿ ಅವಶೇಷಗಳನ್ನು ತೆಗೆದುಹಾಕಲು ಮತ್ತು ಇತರ ಕೆಲಸಗಳಿಗಾಗಿ ಟ್ರ್ಯಾಕ್ಟರ್ ಮತ್ತು ಕಾರ್ಮಿಕರನ್ನು ತೊಡಗಿಸಿಕೊಳ್ಳುವುದು. (ಪರಿಶಿಷ್ಟ ಜಾತಿ)	15.00	18,750/-
5)	ವಾರ್ಡ್ ನಂ.190 ಮಡಿವಾಳದಲ್ಲಿ (ಹಳೆಯ ವಾರ್ಡ್ ನಂ. 172) ವಾರ್ಡ್ ಮಿತಿಯಲ್ಲಿ ಅವಶೇಷಗಳನ್ನು ತೆಗೆದುಹಾಕಲು ಮತ್ತು ಇತರ ಕೆಲಸಗಳಿಗಾಗಿ ಟ್ರ್ಯಾಕ್ಟರ್ ಮತ್ತು ಕಾರ್ಮಿಕರನ್ನು ತೊಡಗಿಸಿಕೊಳ್ಳುವುದು. (ಇತರೆ)	15.00	37,500/-
6)	ವಾರ್ಡ್ ನಂ. 191 ಜಕ್ಕಸಂದ್ರದಲ್ಲಿ ವಾರ್ಡ್ ಮಿತಿಯಲ್ಲಿ ಅವಶೇಷಗಳನ್ನು ತೆಗೆದುಹಾಕಲು ಮತ್ತು ಇತರ ಕೆಲಸಗಳಿಗಾಗಿ ಟ್ರ್ಯಾಕ್ಟರ್ ಮತ್ತು ಕಾರ್ಮಿಕರನ್ನು ತೊಡಗಿಸಿಕೊಳ್ಳುವುದು. (ಇತರೆ)	15.00	37,500/-
7)	ವಾರ್ಡ್ ನಂ.192 ಬಿಟಿಎಂ ಬಡಾವಣೆಯ (ಹಳೆಯ ವಾರ್ಡ್ ಸಂಖ್ಯೆ 176) ವಾರ್ಡ್ ಮಿತಿಯಲ್ಲಿ ಅವಶೇಷಗಳನ್ನು ತೆಗೆದುಹಾಕಲು ಮತ್ತು ಇತರ ಕೆಲಸಗಳಿಗಾಗಿ ಟ್ರ್ಯಾಕ್ಟರ್ ಮತ್ತು ಕಾರ್ಮಿಕರನ್ನು ತೊಡಗಿಸಿಕೊಳ್ಳುವುದು. (ಇತರೆ)	15.00	37,500/-
8)	ವಾರ್ಡ್ ನಂ. 193 ಎನ್ ಎಸ್ ಪಾಳ್ಯದ ವಾರ್ಡ್ ಮಿತಿಯಲ್ಲಿ ಅವಶೇಷಗಳನ್ನು ತೆಗೆದುಹಾಕಲು ಮತ್ತು ಇತರ ಕೆಲಸಗಳಿಗಾಗಿ ಟ್ರ್ಯಾಕ್ಟರ್ ಮತ್ತು ಕಾರ್ಮಿಕರನ್ನು ತೊಡಗಿಸಿಕೊಳ್ಳುವುದು. (ಪರಿಶಿಷ್ಟ ಪಂಗಡ)	15.00	18,750/-

ಟೆಂಡರ್‌ನ ಕಾರ್ಯಸೂಚಿ: 1. ಭರ್ತಿಯಾದ ಟೆಂಡರ್ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 12-06-2023ರ ಸಂಜೆ 4:00 ಗಂಟೆಯವರೆಗೆ. 2. ಬಿಡ್‌ಗಳನ್ನು ತೆರೆಯುವ ದಿನಾಂಕ: 13-06-2023ರ ಸಂಜೆ 4:30 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ. ಬಡಾವಣೆ ವಿಭಾಗ, ಬೃಬೆಂಮಪಾ.

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ
9ನೇ ಮಹಡಿ, ಇ & ಎಫ್ ಬ್ಲಾಕ್, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009.
ದೂರವಾಣಿ ಸಂಖ್ಯೆ: 080-23118888, ಇ-ಮೇಲ್ : rgrhcladm@gmail.com

No: RGHCL 11 ADM 2023 ದಿನಾಂಕ: 01.06.2023

ಪ್ರಕಟಣೆ

ರಾಜೀವ್ ಗಾಂಧಿ ವಸತಿ ನಿಗಮವು **11 ತಿಂಗಳ ಅವಧಿಗೆ ತಾತ್ಕಾಲಿಕ ಮತ್ತು ಸಂಪೂರ್ಣವಾಗಿ ಗುತ್ತಿಗೆ ಆಧಾರದ ಮೇಲೆ** ಈ ಕೆಳಗಿನ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸುತ್ತದೆ, ಹುದ್ದೆಗಳ ಗುತ್ತಿಗೆಯ ಅವಧಿಯನ್ನು ವಿಸ್ತರಿಸಬಹುದಾಗಿದ್ದು, ಆಸಕ್ತ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ವಿದ್ಯಾರ್ಹತೆ ಮತ್ತು ಅನುಭವದ ಪ್ರಮಾಣ ಪತ್ರಗಳು/ಅಗತ್ಯ ದಾಖಲೆಗಳೊಂದಿಗೆ ಇ-ಮೇಲ್ ಐ.ಡಿ: **rgrhcladm@gmail.com** ಗೆ **ದಿನಾಂಕ: 09.06.2023ರ ಸಂಜೆ 5.00 ಗಂಟೆಯೊಳಗೆ** ಸಲ್ಲಿಸುವುದು. **ದಿನಾಂಕ: 14.06.2023 ರಂದು ಬೆಳಿಗ್ಗೆ 10.30 ಗಂಟೆಗೆ** ನಿಗದಿಯಾಗಿರುವ ಸಂದರ್ಶನಕ್ಕೆ ಅರ್ಹ ಅಭ್ಯರ್ಥಿಗಳಿಗೆ ಮಾತ್ರ ಹಾಜರಾಗಲು ಅವಕಾಶವಿರುತ್ತದೆ.

ಕ್ರ. ಸಂ.	ಹುದ್ದೆಯ ಹೆಸರು	ಸಂಖ್ಯೆ	ಮಾಹೆಯಾನ ಗೌರವ ಧನ	ವಿದ್ಯಾರ್ಹತೆ ಮತ್ತು ಅನುಭವ
1	ಪ್ರಧಾನ ವ್ಯವಸ್ಥಾಪಕರು	1	ರೂ.55,000/-	ನಿವೃತ್ತ ಉಪವಿಭಾಗಾಧಿಕಾರಿಗಳ ಶ್ರೇಣಿಗಿಂತ ಉನ್ನತ ಅಥವಾ ಸಮಾನ ದರ್ಜೆಯ ಅಧಿಕಾರಿ.
2	ಸಹಾಯಕ ಪ್ರಧಾನ ವ್ಯವಸ್ಥಾಪಕರು	1	ರೂ.45,000/-	ತಹಶೀಲ್ದಾರ್/ಗ್ರೇಡ್-1ಉಪ ನೋಂದಣಾಧಿಕಾರಿ ಶ್ರೇಣಿಗೆ ಸಮಾನವಾದ ನಿವೃತ್ತ ಅಧಿಕಾರಿ
3	ವ್ಯವಸ್ಥಾಪಕರು	2	ರೂ.35,000/-	ಉಪ ತಹಶೀಲ್ದಾರ್ ಹುದ್ದೆಯ ನಿವೃತ್ತ ಅಧಿಕಾರಿ ಅಥವಾ ಸದರಿ ಹುದ್ದೆಯ ಸಮಾನ ದರ್ಜೆಯ ನಿವೃತ್ತ ಅಧಿಕಾರಿ
4	ವಿಷಯ ನಿರ್ವಾಹಕರು	4	ರೂ.25,000/-	ಪ್ರಥಮ ದರ್ಜೆ ಸಹಾಯಕ ಯಾವುದೇ ವಿಷಯದಲ್ಲಿ ಪದವಿ ಹಾಗೂ 3 ವರ್ಷಗಳ ಸೇವಾನುಭವ ಹೊಂದಿರಬೇಕು.

ಸೂಚನೆ:
1. ಅರ್ಜಿಯ ಮುದ್ರಿತ ಅಥವಾ ಕೈಬರಹದ ಪ್ರತಿಯನ್ನು (ಐಚ್ಛಿಕ) ಮೇಲೆ ತಿಳಿಸಿದ ವಿಳಾಸಕ್ಕೆ ಸಲ್ಲಿಸಬಹುದು.
2. ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಮತ್ತು ಸ್ವ-ವಿವರದ ಸಂಪೂರ್ಣ ವಿವರಗಳೊಂದಿಗೆ "................. ಹುದ್ದೆಯ ನೇಮಕಾತಿಗಾಗಿ ಅರ್ಜಿ" ಎಂದು Envelop Cover ನ ಮೇಲೆ ನಮೂದಿಸುವುದು.
3. ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಪ್ರಾವೀಣ್ಯತೆ (ಮಾತನಾಡುವುದು, ಓದುವುದು ಮತ್ತು ಬರೆಯುವುದು) ಹೊಂದಿರಬೇಕು.
4. ಆಯ್ಕೆಯನ್ನು ಸಂಪೂರ್ಣವಾಗಿ ಅರ್ಹತೆ ಮತ್ತು ಅನುಭವದ ಆಧಾರದ ಮೇಲೆ ಮಾಡಲಾಗುತ್ತದೆ.
5. ಹೆಚ್ಚಿನ ಮಾಹಿತಿಗಾಗಿ ಕಚೇರಿ ಸಮಯದಲ್ಲಿ ಮಾತ್ರ **080-23118888/080-22106888/9448287350** ಅನ್ನು ಸಂಪರ್ಕಿಸಿ ಅಥವಾ ವೆಬ್‌ಸೈಟ್ **https://ashraya.karnataka.gov.in** ಗೆ ಭೇಟಿ ನೀಡಿ.
6. ಯಾವುದೇ ಕಾರಣಗಳನ್ನು ನೀಡದೆಯೇ ಅಥವಾ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸುವ ಹಕ್ಕನ್ನು ರಾಜೀವ್ ಗಾಂಧಿ ವಸತಿ ನಿಗಮ ಹೊಂದಿದೆ.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು

DIPR/CP/RO152/2023-24

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ.
ಇ-ಜಿಎಸ್‌ಯು-ಇಎಲ್‌ಇ-2023-24-ಓಟಿ-2 ದಿನಾಂಕ : 26-05-2023,
ಇ-ಜಿಎಸ್‌ಯು-ಇಎಲ್‌ಇ-2023-24-ಓಟಿ-3 ದಿನಾಂಕ : 26-05-2023,
ಇ-ಜಿಎಸ್‌ಯು-ಇಎಲ್‌ಇ-2023-24-ಓಟಿ-4 ದಿನಾಂಕ : 26-05-2023,
ಇ-ಜಿಎಸ್‌ಯು-ಇಎಲ್‌ಇ-2023-24-ಓಟಿ-5 ದಿನಾಂಕ : 26-05-2023,
ಇ-ಜಿಎಸ್‌ಯು-ಇಎಲ್‌ಇ-2023-24-ಓಟಿ-6 ದಿನಾಂಕ : 27-05-2023,
ಇ-ಜಿಎಸ್‌ಯು-ಇಎಲ್‌ಇ-2023-24-ಓಟಿ-7 ದಿನಾಂಕ : 27-05-2023 ಮತ್ತು
ಇ-ಜಿಎಸ್‌ಯು-ಇಎಲ್‌ಇ-2023-24-ಓಟಿ-8 ದಿನಾಂಕ : 27-05-2023
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಕೆಲಸದ ಹೆಸರು	ಅಂದಾಜು ಮೌಲ್ಯ
1	[illegible]	ರೂ. 3,00,32,480.80
2	[illegible]	ರೂ. 3,50,78,084.20
3	[illegible]	ರೂ. 3,49,90,754.88
4	[illegible]	ರೂ. 3,90,81,663.42
5	[illegible]	ರೂ. 3,05,91,562.52
6	[illegible]	ರೂ. 5,08,36,973.40
7	[illegible]	ರೂ. 3,52,33,694.60

[illegible]

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

[illegible]

S.W.Railways | SWRRLY | SWRRLY

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

JOB OPPORTUNITIES

Teachers/ Professors

WANTED TEACHERS
According to CPI order No. ಸಿ8(3) / ಖಾ.ಹು.ಭ.ಇ./ 1044105 / 2022-23
(1) BSc, B.Ed (PCM) - 2 Post retired vacancy
(2) BSc, B.Ed (CBZ) transfer vacancy
(3) B.A. B.Ed. (Kannada) Retired vacancy
to Teach in High School.
Apply to the Manager, St. Joseph's High School, Briand Square, Chamarajpet, Bengaluru-18, within 21 days

WANTED KANNADA TEACHER (High School) Cambridge English School, Mathikere, Yeshwanthpur, Bangalore-54. Contact: No. 9379191544.

REQUIRED EXPERIENCED candidates with BPEd & NTT qualification. Contact: JVS English School #8, BEML Layout, 8th main Road, Basaveshwara Nagar Bengaluru-79. Contact :9343745526

BE/ B.SC/ MBA/ Diploma holders Nursery TEACHERS for CBSE School. Good salary & afternoon lunch. At Chikkabidarakallu, Bangalore. Freshers preferred. 9449835744/ 9535601743

Engg/ Production Technical

WANTED: ITI, Diploma Holders, Fitters, Electricians, Helpers (50 Members) near Kengeri for S K RESOURCE SOLUTIONS-080 23133633/ 23134876/ 9845739500. Good Salary with All benefits.

Manager

WANTED TEAM Leads for MNC. Upto 75k fixed pay + Incentives. IRDA licensed/ Financial services experience preferred. Call: 9845088345

Part-Time Jobs

RETIRED/ VRS Persons, Age Above 45 Years, Earn 50K-60K PM, Here No Retirement: 9886641282/ 7019215243

Multiple Vacancy

WANTED: SECURITY Officer/ Field Officer/ Area Manager/ Training Officer in & around Bangalore, Tumkur & Mysore for SHASHI DETECTIVE SERVICES PVT.LTD-9845162830, 9880495755, 9845739500

26ನೇ ವಿವಾಹ ವಾರ್ಷಿಕೋತ್ಸವ

ಶ್ರೀಮತಿ ನೇತ್ರಾವತಿ ಎಸ್ ಮತ್ತು ಶ್ರೀ ಬಿ. ಉಮೇಶ್

ನಮಗೆ ಸಂಸ್ಕಾರವನ್ನು ಕಲಿಸಿರುವ ಹೆಮ್ಮೆಯ ಅಮ್ಮ ಹಾಗೂ ಶ್ರೀ ಪ್ರವೀಣ್ ಸೂದ್, ಐ.ಪಿ.ಎಸ್., ಮಾನ್ಯ ನಿರ್ದೇಶಕರು, ಸಿ.ಬಿ.ಐ., ಭಾರತ ಸರ್ಕಾರ, ನವದೆಹಲಿರವರಿಂದ "ಕನ್ನಡ ಪಂಡಿತ" ಎಂಬ ಗೌರವಕ್ಕೆ ಪಾತ್ರರಾಗಿರುವ ಬೆಲೆ ಕಟ್ಟಲಾಗದ ಮಾಣಿಕ್ಯ ಅಪ್ಪನಿಗೆ ಹಾರ್ದಿಕ ಅಭಿನಂದನೆಗಳು.

ಯು.ಹೇಮಾ, ಬಿ.ಕಾಂ., ಯು. ಮಯೂರ, ಬಿ.ಇ., (ಸಿವಿಲ್)

WANTED FEMALE Telecaller & Billing Executive Retail 2 Wheeler Showroom Koramangala Good Communication Skills. 9945083900, 9731028676.

Wanted

WANTED COUNTER Sales Men/ Women Ready Made Blouse Shop in Chickpet, Bangalore CONTACT: 9448121073

REAL ESTATE SELLING

Commercial Building

Malleshwaram

FULLY FURNISHED 16,000Sft. A/C Showroom For Rent/Sale On Prime Busy Commercial Area,8th Cross, Malleshwaram, Bangalore. Call: 9663001940.

Farm House/ Land/ Resorts

Multiple Locations

1/2 ACRE converted eKhata furnished 15 AC rooms resto cafe 6-9L income nandi hills rd connecting STRR 9.1Cr Ph 7019346409

Residential/ Commercial

Koramangala

KORAMANGALA(JAKKASANDRA) RESIDENTIAL Rental Income 70K, Building BBMP(A-kata) near Green View hospital price. 93 lakhs. Contact:9731456798/ 9731276419

Sites

Intl Airport Road

BIAAPA APPROVED SITE SALE ATTACHED TELECOM LAYOUT PHASE1 500 METRES FROM STONE HILL INTERNATIONAL SCHOOL 7337616557.

RENTAL PROPERTIES

Accommodation Available

Commercial

OFFICE SPACE for rent in RT Nagar 1st floor and 2nd floor bangalore- Built Up Area around 1050 sft. approximate. Semi-Furnished Contact no. 8016423418/ 9994752503.

Industrial And Factory

A NEW Industrial Shed at 2nd Floor in Kamakshipalya with 10HP Power Available For Rent.Call:6363163527.

Godown

WAREHOUSE/GODOWN/BUILT TO suit-2750sqft Singasandra off Hosur road, Adjacent to Manipalcountry road, closer to metro station, singasandra bus stop. Available for rent Contact:9731276419/9731456798

AUTOMOTIVE

Four Wheelers Selling

Toyota

DAMAGED BY ACCIDENT KA05. MP9818 Toyota Innova 2.5V(E4) BSBS4,2014 at.Nandi Toyota Kanakapura Road for sale with RC Cancellation Quote After inspection within seven days SampatSurveyor: 9900182098

BUSINESS

Business Offers

Finance

GET OWN BUSINESS 10 LAKHS INVESTMENT MONTHLY INCOME 1L FOR GREEN HERBAL AYURVEDIC: 8892501007/ 9606701007

LOANS AVAILABLE on car/ bikes pledging and also provide loan on mortgage of Properties. 9986991597

REQUIRED

Required Land 8000 to 15000 sqft anywhere in Bangalore City having minimum road width of 60 feet for PETROL BUNK - Rent / Company Lease for 20 years with rent between Rs.20/50. Building Tax will be paid by us.

Contact: 96861 75666 / 99451 55688
Email: gmsudev@yahoo.com

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

PERSONAL

Change of Name

CHANGE OF NAME
I, VASANTHA W/o. R Raghuram R/a #2, Khata No. 73/1/02, near Curious School, Chokkanahalli Layout, Chokkanahalli, Bangalore-560064 Declare that K. VASANTHALAKSHMI and VASANTHA above both Names are one and the same person, i.e. Myself Only. Henceforth, I will be known as VASANTHA only. vide affidavit dated: 24-05-2023 sworn before notary Lakshmaiah, Bangalore.

I, LEKHA Madhavan Kunhipeedikayil @ Smt. Lekha Kishore, W/o Late. C.K. Krishna Kishore, Aged about 52 years, residing at Udayapuram, Kadachera (P.O), Kannur District, Kerala Presently residing at Dubai declare that both the names i.e., Smt. Lekha Madhavan Kunhipeedikayil and Smt. Lekha Kishore pertains to me only and I have declared the same vide affidavit dated 27.02.2023 sworn to before Anita Gupta Vice Consul Consulate General of India Dubai (UAE).

I, ADITHYA K S/o.Pavan Kumar Kasamsetty R/a#238, H Road, Ideal Homes 2nd Phase, Rajarajeshwari Nagara, Bengaluru- 560098 Have Changed My Name to ADITHYA KASAMSETTY vide affidavit dated:1-6-2023 before Notary S.R. Thulasikrishna, Bangalore

CHANGE OF NAME
We, Dr. Manjunath Reddy G and G. Lakshmi W/o. Dr. Manjunath Reddy R/a Shetthyhalli Village, Bangalore. Declare that in my Son's Birth Certificate his Name Entered as AADI Instead of G. AASHRITH REDDY and Father Name Entered as Dr. MANJUNATH REDDY Instead of Dr. MANJUNATH REDDY G. vide affidavit Dated 26.05.2023 before Notary D. Sarala Kumari, Bangalore.

PUBLIC NOTICE

PUBLIC NOTICE
The General Public is hereby put to notice that I **Sri.Ramesh Babu.K,** residing at Flat No.12, Site No.28, Sri Sai Apartment, 20th B Main, Venkateshwara layout, BTM 1st Stage, Bangalore, have lost/misplaced the Original Agreement to Sell dated 09/03/2018, registered as Document No.BTM-1-05518-2017-18, stored in C.D.No.BTMD122, registered in the office of Sub-registrar, Jayanagar (B.T.M Layout) with respect to the Schedule Property and further I have lodged a police complaint on 03/02/2023, before the Bengaluru City Police, Bangalore regarding lost/misplaced of above said document. Any person found the lost/misplaced document mentioned above are hereby required to notify the same within **7 days** from hereof failing which the claim or objection, if any shall be considered as invalid and waived.

SCHEDULE PROPERTY
All that piece and parcel of the residential **Flat bearing No.102,** A-Block, in the **Ground Floor,** having **Two Bed Rooms,** measuring **1115 Square feet** of Super Built up area in the Apartment known as **SAI SAMRAKSHA** constructed on the land bearing Sy.No.54/4, measuring 1 Acre, situated at Yelenahalli Village, Begur Hobli, Bangalore South Taluk, Bangalore, along with **462 Square Feet of undivided share** right, title and interest and ownership in the land and **One Covered Car parking** in the basement floor.

Sri.Ramesh Babu.K
Residing at Flat No.12, Site No.28, Sri Sai Apartment, 20th B Main, Venkateshwara layout, BTM 1st Stage, Bangalore.
Ph: 8792775777

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ರೈಲು ಪ್ರಯಾಣ ದರ ರಿಯಾಯಿತಿ: ಅರ್ಜಿ ವಿಲೇವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈಲ್ವೆ ಪ್ರಯಾಣ ದರದಲ್ಲಿ ಹಿರಿಯ ನಾಗರಿಕರಿಗೆ ನೀಡಲಾಗುತ್ತಿದ್ದ ರಿಯಾಯಿತಿಯನ್ನು ಮರು ಜಾರಿಗೊಳಿಸಲು ಕೇಂದ್ರ ರೈಲ್ವೆ ಸಚಿವಾಲಯಕ್ಕೆ ನಿರ್ದೇಶಿಸಬೇಕು' ಎಂದು ಕೋರಲಾಗಿದ್ದ ಅರ್ಜಿಯನ್ನು ಇತ್ಯರ್ಥಪಡಿಸಿರುವ ಹೈಕೋರ್ಟ್, 'ಈ ವಿಚಾರವಾಗಿ ಚುನಾಯಿತ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಿ ಪರಿಹಾರ ಪಡೆಯಿರಿ' ಎಂದು ಅರ್ಜಿದಾರರಿಗೆ ಸಲಹೆ ನೀಡಿದೆ.

ಈ ಕುರಿತಂತೆ ಹುಬ್ಬಳ್ಳಿಯ ವೈದ್ಯ, ವಕೀಲ ಹಾಗೂ ಸಾಮಾಜಿಕ ಹೋರಾಟಗಾರ ಡಾ. ವಿನೋದ್ ಜಿ. ಕುಲಕರ್ಣಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿನೋದ್ ಜಿ. ಕುಲಕರ್ಣಿ ವಾದ ಆಲಿಸಿದ ನ್ಯಾಯಪೀಠ, 'ಪ್ರಯಾಣ ದರದಲ್ಲಿ ರಿಯಾಯಿತಿ ಅಥವಾ ವಿನಾಯಿತಿ ನೀಡುವುದು ಸರ್ಕಾರದ ನೀತಿ ನಿರ್ಧಾರಕ್ಕೆ ಒಳಪಟ್ಟ ವಿಷಯ. ಇದರಲ್ಲಿ ಸರ್ಕಾರಕ್ಕೆ ನಿರ್ದೇಶನ ನೀಡಲು ಅಥವಾ ಮಧ್ಯಪ್ರವೇಶಿಸಲು ಬರುವುದಿಲ್ಲ. ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸುವುದರ ಬದಲಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಲಭ್ಯವಿರುವ ಅಸ್ತ್ರಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಿ' ಎಂದು ಅರ್ಜಿದಾರರಿಗೆ ಸೂಚಿಸಿತು.

ಅರ್ಜಿಯಲ್ಲಿ ಏನಿತ್ತು?: 'ರೈಲ್ವೆ ಪ್ರಯಾಣ ದರದಲ್ಲಿ ಈ ಮೊದಲು 58 ವರ್ಷ ದಾಟಿದ ಮಹಿಳೆಯರಿಗೆ ಶೇ 50ರಷ್ಟು ಹಾಗೂ 60 ವರ್ಷ ದಾಟಿದ ಪುರುಷರಿಗೆ ಶೇ 40ರಷ್ಟು ರಿಯಾಯಿತಿ ನೀಡಲಾಗುತ್ತಿತ್ತು. ಇದರಿಂದ ಹಿರಿಯ ನಾಗರಿಕರು ಧಾರ್ಮಿಕ ಕೇಂದ್ರಗಳಿಗೆ ತೀರ್ಥಯಾತ್ರೆ ಕೈಗೊಳ್ಳಲು ಅನುಕೂಲವಾಗಿತ್ತು. ಆದರೆ, ಕೋವಿಡ್-19ರ ನಂತರ ರೈಲ್ವೆ ಇಲಾಖೆ ಈ ರಿಯಾಯಿತಿಯನ್ನು ಸ್ಥಗಿತಗೊಳಿಸಿದೆ. ಇದು ನಾಗರಿಕರ ಪ್ರಯಾಣದ ಹಕ್ಕನ್ನು ಮೊಟಕುಗೊಳಿಸಿದಂತಾಗಿದೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ ಅಭಿಮತ

'ವೈದ್ಯಕೀಯ ಕ್ಷೇತ್ರ: ಕೌಶಲ ಇದ್ದರೆ ಅವಕಾಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಲ ವರ್ಷಗಳಲ್ಲಿ ಹಲವಾರು ವೈದ್ಯಕೀಯ ಕಾಲೇಜುಗಳು ಸ್ಥಾಪನೆಯಾಗಿವೆ. ವೈದ್ಯಕೀಯ ಸೇರಿ ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶ ಪಡೆಯಲು ಜ್ಞಾನದ ಜತೆಗೆ ಕೌಶಲವೂ ಅಗತ್ಯ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ತಿಳಿಸಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 28ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

'ವೈದ್ಯಕೀಯ ಶಿಕ್ಷಣ ವ್ಯವಸ್ಥೆಯಲ್ಲಿ ಹಲವು ಸವಾಲುಗಳಿವೆ. ಭಾರತೀಯ ವೈದ್ಯಕೀಯ ಪದ್ಧತಿ, ಅಲೋಪಥಿ ಹಾಗೂ ಇತರ ವೈದ್ಯಕೀಯ ವಿಜ್ಞಾನದಲ್ಲಿ ಗುಣಮಟ್ಟದ ಶಿಕ್ಷಣ ನೀಡುವ ಜತೆಗೆ ಕೌಶಲ ವೃದ್ಧಿಸಬೇಕು' ಎಂದು ಹೇಳಿದರು.

'ಆಯುರ್ವೇದ 2047' ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದ ಭಾರತೀಯ ವೈದ್ಯ ಪದ್ಧತಿಯ ರಾಷ್ಟ್ರೀಯ ಆಯೋಗದ ಅಧ್ಯಕ್ಷ ಡಾ.ದೇವ್‌ಪೂಜಾರಿ ಜಯಂತ್ ಯಶವಂತ್, 'ಆಯುರ್ವೇದಕ್ಕೆ ಜಾಗತಿಕ ಮಟ್ಟದಲ್ಲಿ ಮನ್ನಣೆ ಸಿಗುತ್ತಿದೆ. ಇದರಿಂದಾಗಿ ವಿದೇಶಗಳಲ್ಲಿಯೂ ಆಯುರ್ವೇದ ಕಾಲೇಜು ಸ್ಥಾಪನೆಗೆ ಪ್ರಸ್ತಾವಗಳು ಬರುತ್ತಿವೆ. ಮುಂದಿನ 25 ವರ್ಷಗಳಲ್ಲಿ ಆಯುರ್ವೇದ ಏನಾಗುತ್ತದೆ ಎಂದು ಈಗಲೇ ಹೇಳುವುದು ಕಷ್ಟ. ಕೋವಿಡ್ ಕಾಣಿಸಿಕೊಂಡ ಬಳಿಕ ಎರಡು ವರ್ಷಗಳಲ್ಲಿಯೇ ಐಟಿ ಕ್ಷೇತ್ರದಲ್ಲಿ ಕಾರ್ಯವಿಧಾನ ಬದಲಾಗಿ, ಮನೆಯಿಂದಲೇ ಕಾರ್ಯನಿರ್ವಹಣೆ ಪ್ರಾರಂಭವಾಯಿತು. ಇದರಿಂದಾಗಿ ಭವಿಷ್ಯದ ಬಗ್ಗೆ ನಿಖರವಾಗಿ ಹೇಳಲು ಸಾಧ್ಯವಿಲ್ಲ' ಎಂದು ಹೇಳಿದರು.

ಕುಲಪತಿ ಡಾ.ಎಂ.ಕೆ.ರಮೇಶ್, 'ನಮ್ಮ ವಿಶ್ವವಿದ್ಯಾಲಯ ಏಷ್ಯಾದಲ್ಲಿಯೇ ಅತೀ ದೊಡ್ಡ ವಿಶ್ವವಿದ್ಯಾಲಯವಾಗಿದೆ. ಪರೀಕ್ಷೆ ಮುಗಿದ 24 ಗಂಟೆಗಳಲ್ಲಿ ಫಲಿತಾಂಶ ನೀಡುತ್ತಿದ್ದೇವೆ. 6 ಪ್ರಾದೇಶಿಕ ಕೌಶಲ ಪ್ರಯೋಗಾಲಯ ನಿರ್ಮಿಸಬೇಕೆಂದುಕೊಂಡಿದ್ದೇವೆ' ಎಂದರು.

ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವೈದ್ಯಕೀಯ ವಿದ್ಯಾರ್ಥಿಗಳು

'ಪರಿಶೀಲಿಸಿ ಸೂಕ್ತ ಕ್ರಮ'

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಡಾ.ಎನ್. ರಾಮಕೃಷ್ಣ ರೆಡ್ಡಿ ವಿರುದ್ಧದ ಭ್ರಷ್ಟಾಚಾರ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಶರಣಪ್ರಕಾಶ್ ಪಾಟೀಲ, 'ಆರೋಪಗಳ ಬಗ್ಗೆ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು. ಈಗ ಇಲಾಖೆಯ ಬಗ್ಗೆ ತಿಳಿದುಕೊಳ್ಳುತ್ತಿದ್ದೇನೆ. ಒಬ್ಬ ಅಧಿಕಾರಿ ಒಂದು ಹುದ್ದೆಯನ್ನು ಮಾತ್ರ ಹೊಂದಲು ಸಾಧ್ಯ. ಆದರೆ, ರೆಡ್ಡಿ ಅವರು ಏಕಕಾಲದಲ್ಲಿ ವಿವಿಧ ಹುದ್ದೆಗಳನ್ನು ಹೊಂದಿದ್ದಲ್ಲಿ ಪರಿಶೀಲಿಸಿ, ಕ್ರಮವಹಿಸುತ್ತೇನೆ' ಎಂದು ಭರವಸೆ ನೀಡಿದರು.

ಬ್ರಿಜ್‌ಭೂಷಣ್ ಬಂಧನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣದ ಆರೋಪಿ ಭಾರತೀಯ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್‌ರನ್ನು ಬಂಧಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ಜಾಗೃತ ನಾಗರಿಕರು (ಕನ್ಸರ್ನ್‌ಡ್ ಸಿಟಿಜನ್ಸ್ ಆಫ್ ಕರ್ನಾಟಕ) ಸಂಘಟನೆಯ ಸದಸ್ಯರು ಜಿಲ್ಲಾಧಿಕಾರಿ ಕೆ.ಎ. ದಯಾನಂದ್ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಬ್ರಿಜ್‌ಭೂಷಣ್ ವಿರುದ್ಧ ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ಕುಸ್ತಿಪಟುಗಳ ಮೇಲೆ ಬೀದಿಯಲ್ಲೇ ಹಲ್ಲೆ ನಡೆಸಿ ಬಂಧಿಸಿರುವುದು ಖಂಡನೀಯ. ಅತ್ಯಾಚಾರ ಆರೋಪಿಯನ್ನು ಕುಸ್ತಿ ಒಕ್ಕೂಟದ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಬೇಕು. ಪೋಕ್ಸೊ ಕಾಯ್ದೆಯಡಿ ಬಂಧಿಸಬೇಕು ಎಂದೂ ಮನವಿಯಲ್ಲಿ ಒತ್ತಾಯಿಸಲಾಗಿದೆ.

ಸಂಘಟನೆಯ ಕೆ.ಎಸ್. ವಿಮಲಾ, ಸುರೇಂದ್ರ ರಾವ್, ಶಶಿಧರ್, ವಿಜಯಮ್ಮ, ಡಾ. ವಸುಂಧರಾ ಭೂಪತಿ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ, ಸುಕನ್ಯಾ ಮಾರುತಿ, ಶಶಿಕಾಂತ ಯಡಹಳ್ಳಿ ನಿಯೋಗದಲ್ಲಿದ್ದರು.

ಒತ್ತಾಯಪತ್ರಕ್ಕೆ ಕೆ. ಮರುಳಸಿದ್ದಪ್ಪ, ಜಿ. ರಾಮಕೃಷ್ಣ, ಎಸ್.ಜಿ. ಸಿದ್ದರಾಮಯ್ಯ, ಬಿ.ಕೆ. ಚಂದ್ರಶೇಖರ್, ವಿ.ಪಿ. ನಿರಂಜನಾರಾಧ್ಯ, ಬಿ. ಶ್ರೀಪಾದ ಭಟ್, ಯೋಗಾನಂದ ಸಹಿ ಹಾಕಿ ಬೆಂಬಲ ಸೂಚಿಸಿದ್ದಾರೆ.

ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣದ ಆರೋಪಿ, ಭಾರತೀಯ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್‌ಭೂಷಣ್ ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ಜಾಗೃತ ನಾಗರಿಕರು (ಕನ್ಸರ್ನ್‌ಡ್ ಸಿಟಿಜನ್ಸ್ ಆಫ್ ಕರ್ನಾಟಕ) ಸಂಘಟನೆಯ ಸದಸ್ಯರು ಜಿಲ್ಲಾಧಿಕಾರಿ ಕೆ.ಎ. ದಯಾನಂದ್ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಭೂಸ್ವಾಧೀನ: ವಾರದೊಳಗೆ ವಿವರ ನೀಡಿ– ಸಚಿವ

'ಬಾಕಿ ಪ್ರಕರಣ ತ್ವರಿತ ಇತ್ಯರ್ಥ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಐಎಡಿಬಿಯಲ್ಲಿ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಬಾಕಿ ಉಳಿದಿರುವ ಪ್ರಕರಣಗಳನ್ನು ತ್ವರಿತ ಇತ್ಯರ್ಥಪಡಿಸುವುದು ತಮ್ಮ ಮೊದಲ ಆದ್ಯತೆ. ಈ ಸಂಬಂಧ ಅಧಿಕಾರಿಗಳು ಇನ್ನು ಒಂದು ವಾರದೊಳಗೆ ಸರಿಯಾದ ಅಂಕಿ-ಅಂಶ ಮತ್ತು ವಿವರಗಳನ್ನು ನೀಡಬೇಕು' ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅಧಿಕಾರಿಗಳಿಗೆ ಸೂಚಿಸಿದರು.

ಕೈಗಾರಿಕಾ ಇಲಾಖೆಯ ವ್ಯಾಪ್ತಿಗೆ ಸೇರಿದ ಪ್ರಾಧಿಕಾರ, ನಿಗಮ ಮತ್ತು ಮಂಡಳಿಗಳ ಅಧಿಕಾರಿಗಳೊಂದಿಗೆ ಗುರುವಾರ ಸುದೀರ್ಘ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಬಳಿಕ ಈ ಸೂಚನೆ ನೀಡಿದರು.

ಕಳೆದ ಐದು ವರ್ಷಗಳಲ್ಲಿ ಎಷ್ಟು ಕೈಗಾರಿಕಾ ನಿವೇಶನಗಳನ್ನು ಹೇಗೆ ಮತ್ತು ಯಾರಿಗೆ ಹಂಚಲಾಗಿದೆ. ಅವು ಯಾವ ಸ್ಥಿತಿಯಲ್ಲಿವೆ ಎನ್ನುವ ವರದಿ ಸಿದ್ಧವಾಗಬೇಕು. ಇದರ ಆಧಾರದ ಮೇಲೆ ಕ್ಷಿಪ್ರ ಕ್ರಮ ಕೈಗೊಳ್ಳಲಾಗುವುದು. ರಾಜ್ಯದಲ್ಲಿ ಕೇವಲ ಟಿಡಿಎಸ್ ಮೂಲಕವೇ ವರ್ಷಕ್ಕೆ ₹1.20 ಲಕ್ಷ ಕೋಟಿ ಸಂಗ್ರಹವಾಗುತ್ತಿದೆ' ಎಂದರು.

'ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಹಲವು ಪ್ರಕರಣಗಳಲ್ಲಿ ಕಾನೂನು ವಿಭಾಗದ ಅಧಿಕಾರಿಗಳು ಸರಿಯಾಗಿ ಪ್ರತಿನಿಧಿಸದೇ ಪ್ರತಿವಾದಿಗಳ ಜತೆ ಶಾಮೀಲಾಗುತ್ತಿರುವ ವರದಿಗಳಿವೆ. ನೂತನ ಸರ್ಕಾರ ಇದನ್ನು ಎಳ್ಳಷ್ಟೂ ಸಹಿಸುವುದಿಲ್ಲ. ನಾನು ನೋಡಲು ಮೃದು ಸ್ವಭಾವದ ವ್ಯಕ್ತಿಯಾಗಿದ್ದೇನೆ. ಆದರೆ, ರಾಜ್ಯದ ಹಿತದೃಷ್ಟಿಯಿಂದ ಕಠಿಣ ಕ್ರಮ ಜರುಗಿಸಲು ಹಿಂಜರಿಯುವುದಿಲ್ಲ. ಕೇವಲ ಲಾಬಿ ಮಾಡಿಕೊಂಡು ಓಡಾಡುವ ಅಧಿಕಾರಿಗಳ ವಿರುದ್ಧ ಚಾಟಿ ಬೀಸುವುದು ನಿಶ್ಚಿತ' ಎಂದು ಎಚ್ಚರಿಕೆ ನೀಡಿದರು.

ನಗರದ ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯದಲ್ಲಿ 'ಮಾರ್ಸ್ ಆಪರ್ಚುನಿಟಿ ರೋವರ್' ಪ್ರತಿಕೃತಿಯನ್ನು ಉದ್ಘಾಟಿಸಲಾಯಿತು. ಇಸ್ರೊ ನಿರ್ದೇಶಕ ಎಂ. ಶಂಕರನ್, ಅಂಡರ್ ಸೆಕ್ರೆಟರಿ ಆಫ್ ಕಾಮರ್ಸ್ ಫಾರ್ ಇಂಟರ್ ನ್ಯಾಷನಲ್ ಟ್ರೇಡ್‌ನ ಮಾರಿಸಾ ಲಾಗೋ, ಚೆನ್ನೈನಲ್ಲಿರುವ ಅಮೆರಿಕದ ಕಾನ್ಸುಲೇಟ್ ಜನರಲ್ ಜುಡಿತ್ ರವೀನ್, ವಿಐಟಿಎಂನ ನಿರ್ದೇಶಕಿ ಕೆ.ಎ. ಸಾಧನ ವೀಕ್ಷಿಸಿದರು –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ

ವಿಐಟಿಎಂನಲ್ಲಿ 'ಮಾರ್ಸ್ ಆಪರ್ಚುನಿಟಿ ರೋವರ್' ಪ್ರತಿಕೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ದಶಕಗಳ ಹಿಂದೆ ಕೆಂಪು ಗ್ರಹದಲ್ಲಿ ನೀರಿನ ಕುರುಹು ಇದೆಯೇ ಎಂಬುದನ್ನು ಪತ್ತೆ ಹಚ್ಚಲು ನಾಸಾ ಕಳುಹಿಸಿದ್ದ 'ಮಾರ್ಸ್ ಆಪರ್ಚುನಿಟಿ ರೋವರ್' ಇದರ ಪೂರ್ಣ ಪ್ರಮಾಣದ ಪ್ರತಿಕೃತಿಯು ಇಲ್ಲಿನ ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯಕ್ಕೆ (ವಿಐಟಿಎಂ) ಬಂದಿಳಿದಿದೆ.

ಯು.ಎಸ್. ಅಂಡರ್ ಸೆಕ್ರೆಟರಿ ಆಫ್ ಕಾಮರ್ಸ್ ಫಾರ್ ಇಂಟರ್ ನ್ಯಾಷನಲ್ ಟ್ರೇಡ್ ಮರಿಸಾ ಲಾಗೊ, ಚೆನ್ನೈನ ಯು.ಎಸ್. ಕಾನ್ಸಲ್ ಜನರಲ್ ಜುಡಿತ್ ರವೀನ್, ಬೆಂಗಳೂರಿನಲ್ಲಿರುವ ಯು.ಆರ್. ರಾವ್ ಸ್ಯಾಟಲೈಟ್ ಸೆಂಟರ್‌ನ ನಿರ್ದೇಶಕ ಡಾ.ಎಂ. ಶಂಕರನ್, ಜೆಟ್ ಪ್ರೊಪಲ್ಶನ್ ಲ್ಯಾಬೊರೇಟರಿಯ ನಿಸಾರ್ ಮಿಷನ್ ಸಿಸ್ಟಂ ಮ್ಯಾನೇಜರ್ ಆನ ಮರಿಯ ಗುರ್ರೆರೊ ಅವರು ಪ್ರತಿಕೃತಿ ಅನಾವರಣ ಮಾಡಿದರು.

'ಸೂಕ್ಷ್ಮ ವಲಯಗಳಲ್ಲಿ ಅಮೆರಿಕ ಮತ್ತು ಭಾರತದ ಸಹಕಾರ ಇನ್ನಷ್ಟು ನಿಕಟವಾಗಿದೆ. ಬಾಹ್ಯಾಕಾಶ ವಲಯವು ನಮ್ಮ ಸಹಭಾಗಿತ್ವಕ್ಕೆ ಮತ್ತೊಂದು ಉದಾಹರಣೆ' ಎಂದು ಯು.ಎಸ್. ಅಂಡರ್ ಸೆಕ್ರೆಟರಿ ಆಫ್ ಕಾಮರ್ಸ್ ಫಾರ್ ಇಂಟರ್ ನ್ಯಾಷನಲ್ ಟ್ರೇಡ್ ಮರಿಸಾ ಲಾಗೊ ಬಣ್ಣಿಸಿದರು.

ಟ್ಯಾಂಕರ್‌ಗೆ ಡಿಕ್ಕಿ: ಬೈಕ್ ಸವಾರ ಸಾವು

ಬೆಂಗಳೂರು: ಜೀವನ್‌ಭಿಮಾನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ನೀರಿನ ಟ್ಯಾಂಕರ್ ಹಾಗೂ ದ್ವಿಚಕ್ರ ವಾಹನ ನಡುವೆ ಅಪಘಾತ ಸಂಭವಿಸಿದ್ದು, ಸವಾರ ಲಾಲು ಮಂಗಲ್ (36) ಎಂಬುವವರು ಮೃತಪಟ್ಟಿದ್ದಾರೆ.

'ಅಸ್ಸಾಂನ ಲಾಲು ಮಂಗಲ್, ಎರಡು ವರ್ಷಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದರು. ಮುರುಗೇಶಪಾಳ್ಯದಲ್ಲಿ ವಾಸವಿದ್ದರು. ಕೂಲಿ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಲಾಲು ಮಂಗಲ್ ಅವರು ಬುಧವಾರ ತಡರಾತ್ರಿ ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ವಿಂಡ್ ಟನಲ್ ರಸ್ತೆಯ ಇಸ್ರೊ ಜಂಕ್ಷನ್ ಬಳಿ ನೀರಿನ ಟ್ಯಾಂಕರ್ ನಿಂತಿತ್ತು. ಅದನ್ನು ಲಾಲು ಮಂಗಲ್ ಗಮನಿಸಿರಲಿಲ್ಲ. ಅತೀ ವೇಗವಾಗಿ ದ್ವಿಚಕ್ರ ವಾಹನ ಚಲಾಯಿಸಿದ್ದರು. ಇದರಿಂದಾಗಿ ಟ್ಯಾಂಕರ್‌ಗೆ ದ್ವಿಚಕ್ರ ವಾಹನ ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡು ಲಾಲು ಮಂಗಲ್ ಮೃತಪಟ್ಟಿದ್ದಾರೆ' ಎಂದು ತಿಳಿಸಿದರು.

'ಯಾವುದೇ ಸಂಚಾರ ಸೂಚನೆ ನೀಡದೇ ರಸ್ತೆಯಲ್ಲಿ ಟ್ಯಾಂಕರ್ ನಿಲ್ಲಿಸಲಾಗಿತ್ತು. ಟ್ಯಾಂಕರ್ ಚಾಲಕ ಹಾಗೂ ಮಾಲೀಕರ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಅವರನ್ನು ಪತ್ತೆ ಮಾಡಲಾಗುತ್ತಿದೆ' ಎಂದರು.

ಬಿಬಿಎಂಪಿ ಚುನಾವಣೆಗೆ ತಯಾರಿ: ಎಚ್‌ಡಿಕೆ ಸಭೆ

ಪ್ರಜಾವಾಣಿ ವಾರ್ತೆ

ರಾಮನಗರ: ಬಿಬಿಎಂಪಿ ಚುನಾವಣೆ ಹಿನ್ನೆಲೆಯಲ್ಲಿ ಜೆಡಿಎಸ್ ಮುಖಂಡ ಎಚ್.ಡಿ. ಕುಮಾರಸ್ವಾಮಿ ಗುರುವಾರ ಬಿಡದಿ ಸಮೀಪದ ಕೇತಗಾನಹಳ್ಳಿ ತೋಟದ ಮನೆಯಲ್ಲಿ ಬೆಂಗಳೂರು ವ್ಯಾಪ್ತಿಯ ಪಕ್ಷದ ಮುಖಂಡರೊಂದಿಗೆ ಚರ್ಚೆ ನಡೆಸಿದರು.

ವಿಧಾನಸಭೆ ಚುನಾವಣೆ ಸೋಲಿನ ಬಗ್ಗೆ ಯಾರೂ ಧೃತಿಗೆಡಬಾರದು. ಪಕ್ಷ ಹಲವು ಸೋಲುಗಳನ್ನು ಕಂಡು, ದಾಟಿಕೊಂಡು ಫೀನಿಕ್ಸ್ ಪಕ್ಷಿಯಂತೆ ಮೇಲೆದ್ದು ಬಂದಿದೆ ಎಂದು ಅವರು ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಿಗೆ ಧೈರ್ಯ ತುಂಬಿದರು.

ವಿಧಾನಸಭೆ ಚುನಾವಣೆ ವೈಫಲ್ಯಗಳಿಂದ ಪಾಠ ಕಲಿಯಬೇಕು. ತಪ್ಪುಗಳನ್ನು ತಿದ್ದಿಕೊಂಡು ಪಕ್ಷವನ್ನು ತಳಮಟ್ಟದಿಂದ ಬಲಪಡಿಸುವತ್ತ ಗಮನ ಹರಿಸಬೇಕು ಎಂದರು.

'ಪಕ್ಷದೊಳಗೆ ಗುಂಪುಗಾರಿಕೆ ಮಾಡುವವರು ನನಗೆ ಬೇಡ. ಕೆಲಸ ಮಾಡುವವರಷ್ಟೇ ಸಾಕು. ಗುಂಪುಗಾರಿಕೆ ಸಹಿಸುವುದಿಲ್ಲ' ಎಂದು ಎಚ್ಚರಿಕೆಯನ್ನೂ ನೀಡಿದರು.

ವಿಧಾನ ಪರಿಷತ್ ಸದಸ್ಯ ಕೆ.ಎನ್. ತಿಪ್ಪೇಸ್ವಾಮಿ, ಪಕ್ಷದ ಬೆಂಗಳೂರು ನಗರ ಘಟಕದ ಅಧ್ಯಕ್ಷ ಎಚ್.ಎಂ. ರಮೇಶಗೌಡ ಸೇರಿದಂತೆ ಬಿಬಿಎಂಪಿ ವ್ಯಾಪ್ತಿಯ 28 ವಿಧಾನಸಭಾ ಕ್ಷೇತ್ರಗಳ ಮುಖಂಡರು ಸಭೆಯಲ್ಲಿದ್ದರು.

'ಮಧ್ಯವರ್ತಿಗಳ ಹಾವಳಿ ತಡೆಗೆ ಕ್ರಮ'

ಬೆಂಗಳೂರು: 'ಇಲಾಖೆಯಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ವೇಗ ನೀಡುವ ಜೊತೆಗೆ, ಮಧ್ಯವರ್ತಿಗಳ ಹಾವಳಿ ತಡೆಗಟ್ಟುವುದು ನನ್ನ ಮೊದಲ ಆದ್ಯತೆ' ಎಂದು ಯುವ ಸಬಲೀಕರಣ, ಕ್ರೀಡೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ. ನಾಗೇಂದ್ರ ಹೇಳಿದರು.

ಸಚಿವ ಸ್ಥಾನ ವಹಿಸಿಕೊಂಡ ಬಳಿಕ ಗುರುವಾರ ಅಧಿಕಾರಿಗಳ ಸಭೆ ನಡೆಸಿದ ಸಚಿವರು, 'ಇಲಾಖೆಯಲ್ಲಿನ ಯೋಜನೆಗಳು ಕಟ್ಟಕಡೆಯ ಫಲಾನುಭವಿಗಳಿಗೆ ತಲುಪಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಹೆಚ್ಚು ಶ್ರಮ ವಹಿಸಿ ಕಾರ್ಯನಿರ್ವಹಿಸಬೇಕು' ಎಂದು ಸೂಚಿಸಿದರು.

'ಇಲಾಖೆ ಹಮ್ಮಿಕೊಂಡಿರುವ ಯೋಜನೆಗಳು ನೇರವಾಗಿ ಜನರಿಗೆ ತಲುಪಬೇಕು. ಪ್ರಸ್ತುತ ಇಲಾಖೆಯಲ್ಲಿ ಚಾಲನೆಯಲ್ಲಿರುವ ಕೆಲವು ಯೋಜನೆಗಳ ಸ್ವರೂಪ ಬದಲಿಸುವ ಮೂಲಕ ಮತ್ತಷ್ಟು ಹೊಸ ಯೋಜನೆಗಳನ್ನು ರೂಪಿಸಬೇಕಿದೆ' ಎಂದರು.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್

ಕಾರ್ಪೋರೇಟ್ ಐಡೆಂಟಿಫಿಕೇಶನ್ ನಂಬರ್ (ಸಿಐಎನ್): L18101KA2004PLC033475
ನೋಂದಾಯಿತ ಕಚೇರಿ: ನಂ. 25, 2ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೈಗಾರಿಕಾ ಉಪನಗರ, ಯಶವಂತಪುರ, ಬೆಂಗಳೂರು–560022
ದೂ: +91 80 68951000 ಫ್ಯಾಕ್ಸ್: +91 80 68951001 ಇಮೇಲ್: cs@gokaldasexports.com; ವೆಬ್‌ಸೈಟ್: www.gokaldasexports.com

ಅಂಚೆ ಮತಪತ್ರದ ನೋಟೀಸ್

ಸದಸ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಕಂಪನಿಗಳ ಕಾಯಿದೆ, 2013 ("ಕಾಯ್ದೆ") ಸೆಕ್ಷನ್ 108 ಮತ್ತು 110ರ ಅನುಗುಣವಾಗಿ ಮತ್ತು ಅನ್ವಯವಾಗುವ ಇತರೆ ನಿಬಂಧನೆಗಳ ಜೊತೆಗೆ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014, ("ನಿರ್ವಹಣೆ ಮತ್ತು ಆಡಳಿತ ನಿಯಮಗಳು") ಓದಿಕೊಂಡಂತೆ, ಕಾಲ ಕಾಲಕ್ಕೆ ತಿದ್ದುಪಡಿ ಮಾಡಿದಂತೆ ಮಿನಿಸ್ಟ್ರಿ ಆಫ್ ಕಾರ್ಪೊರೇಟ್ ಅಫೇರ್ಸ್‌ನಿಂದ ಹೊರಡಿಸಲಾದ ("ಎಂಸಿಎ" ಸುತ್ತೋಲೆಗಳು), ಸಾಮಾನ್ಯ ಸುತ್ತೋಲೆ ಸಂಖ್ಯೆಗಳಾದ 14/2020 ದಿನಾಂಕ ಏಪ್ರಿಲ್ 8, 2020, 17/2020 ದಿನಾಂಕ ಏಪ್ರಿಲ್ 13, 2020, 20/2020 ದಿನಾಂಕ ಮೇ 5, 2020, 22/2020 ದಿನಾಂಕ ಜೂನ್ 15, 2020, 33/2020, ದಿನಾಂಕ ಸೆಪ್ಟೆಂಬರ್ 28, 2020, 39/2020 ದಿನಾಂಕ ಡಿಸೆಂಬರ್ 31, 2020, 10/2021 ದಿನಾಂಕ ಜೂನ್ 23, 2021, 20/2021 ದಿನಾಂಕ ಡಿಸೆಂಬರ್ 08, 2021, 3/2022 ದಿನಾಂಕ ಮೇ 5, 2022 ಮತ್ತು 11/2022 ದಿನಾಂಕ ಡಿಸೆಂಬರ್ 28, 2022, ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾರವರು ಹೊರಡಿಸಿದ ಸಾಮಾನ್ಯ ಸಭೆಗಳ ಮೇಲೆ ಸೆಕ್ರೆಟರಿ ಸ್ಟ್ಯಾಂಡರ್ಡ್ಸ್‌ನ ನಿಯಮಗಳಿಗೆ ಅನುಗುಣವಾಗಿ, ಸೆಕ್ಯೂರಿಟೀಸ್ ಆಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದ ("ಲಿಸ್ಟಿಂಗ್ ಆಬ್ಲಿಗೇಷನ್ಸ್ ಅಂಡ್ ಡಿಸ್‌ಕ್ಲೋಷರ್ ರಿಕ್ವಾಯರ್‌ಮೆಂಟ್ಸ್ ನಿಬಂಧನೆಗಳು") ನಿಯಂತ್ರಣಗಳು, 2015ರ ("ಎಲ್‌ಒಆರ್‌ಡಿ ರೆಗ್ಯುಲೇಷನ್ಸ್") ನಿಯಂತ್ರಣ 44ಅನ್ನು ಓದಿಕೊಂಡಂತೆ ಮತ್ತು ಕಾಯ್ದೆಯ ಇತರ ಅನ್ವಯವಾಗುವ ಕಾನೂನು, ನಿಯಮಗಳು ಮತ್ತು ನಿಬಂಧನೆಗಳಡಿಯ ನಿಯಮಗಳು, ಸುತ್ತೋಲೆಗಳು ಮತ್ತು ಅಧಿಸೂಚನೆಗಳಂತೆ (ಸದ್ಯಕ್ಕೆ ಜಾರಿಯಲ್ಲಿರುವ ಯಾವುದೇ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಅದರ ಮರುರೂಪಿಸುವಿಕೆ(ಗಳು) ಸೇರಿದಂತೆ) ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ("ಕಂಪನಿ") ಸದೂರ ಇ–ಮತದಾನ (ಇ–ಮತದಾನ) ಪ್ರಕ್ರಿಯೆಯ ಮೂಲಕ ಮಾತ್ರ ದಿನಾಂಕ ಏಪ್ರಿಲ್ 26, 2023ರ ಅಂಚೆ ಮತಪತ್ರ ನೋಟೀಸ್‌ನ ಮೂಲಕ ಈ ಕೆಳಗೆ ತಿಳಿಸಲಾದ ವಿಶೇಷ ನಿರ್ಣಯದ ಮೇಲೆ ತನ್ನ ಸದಸ್ಯರಿಂದ ಅನುಮೋದನೆ ಅಪೇಕ್ಷಿಸುತ್ತದೆ.

ವಿಶೇಷ ನಿರ್ಣಯದ ವಿವರ
ಪವಿತ್ರ ರಾಜಾರಾಮ್ ಅವರನ್ನು (ಡಿಐಎನ್: 09322283) ಕಂಪನಿಯ ಸ್ವತಂತ್ರ ನಿರ್ದೇಶಕರಾಗಿ ನೇಮಕ ಮಾಡುವುದು.

ಎಂಸಿಎ ಸುತ್ತೋಲೆಗಳ ಅನುಸಾರವಾಗಿ, ಮೇ 26, 2023ರಂತೆ (ಕಟ್–ಆಫ್ ದಿನಾಂಕ) ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇ-ಮೇಲ್ ವಿಳಾಸಗಳನ್ನು ಡಿಪಾಸಿಟರೀಸ್ / ಡಿಪಾಸಿಟರಿ ಪಾರ್ಟಿಸಿಪೆಂಟ್(ಗಳು)ರವರೊಂದಿಗೆ ಮತ್ತು ಕಂಪನಿಯ ಷೇರು ವರ್ಗಾವಣೆ ಏಜೆಂಟ್, ಅಂದರೆ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (ಕೆಫಿನ್ ಟೆಕ್) ನೊಂದಿಗೆ ನೋಂದಾಯಿಸಿಕೊಂಡಿರುವ ಸದಸ್ಯರಿಗೆ ಕಂಪನಿಯು ವಿದ್ಯುನ್ಮಾನ ವಿಧಾನದ ಮೂಲಕ ಮಾತ್ರ ಪೋಸ್ಟಲ್ ಬ್ಯಾಲೆಟ್ ನೋಟೀಸ್ ರವಾನೆಯನ್ನು ಗುರುವಾರ, ಜೂನ್ 01, 2023ರಂದು ಪೂರ್ಣಗೊಳಿಸಿದೆ. ಅಂಚೆ ಮತಪತ್ರದ ನೋಟೀಸನ್ನು ಕಂಪನಿಯ ವೆಬ್‌ಸೈಟ್ www.gokaldasexports.com ನಿಂದ ಅಥವಾ ಕೆಫಿನ್‌ಟೆಕ್ ವೆಬ್‌ಸೈಟ್‌ನಿಂದ https://evoting.kfintech.com/ ಡೌನ್‌ಲೋಡ್ ಮಾಡಬಹುದು. ನೋಟೀಸನ್ನು ಕಂಪನಿಯ ಷೇರುಗಳನ್ನು ಪಟ್ಟಿ ಮಾಡಲಾಗಿರುವಲ್ಲಿ ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (www.nseindia.com) ಮತ್ತು ಬಿಎಸ್‌ಸಿ ಲಿಮಿಟೆಡ್ (www.bseindia.com)ನ ವೆಬ್‌ಸೈಟ್‌ನಲ್ಲಿ ಸಹ ಪ್ರಕಟಿಸಲಾಗಿರುತ್ತದೆ.

ಕಟ್–ಆಫ್ ದಿನಾಂಕದಂದು ಸದಸ್ಯರು / ಫಲಾನುಭವಿ ಮಾಲೀಕರ ಹೆಸರಿನಲ್ಲಿ ನೋಂದಾಯಿಸಲಾದ ಈಕ್ವಿಟಿ ಷೇರುಗಳ ಪಾವತಿಸಿದ ಮೌಲ್ಯದ ಮೇಲೆ ಮತದಾನದ ಹಕ್ಕುಗಳನ್ನು ಪರಿಗಣಿಸಲಾಗುತ್ತದೆ. ಕಟ್–ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ಈ ನೋಟೀಸನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಎಂದು ಪರಿಗಣಿಸತಕ್ಕದ್ದು. ಸದಸ್ಯರ ಸಮ್ಮತಿ ಅಥವಾ ಅಸಮ್ಮತಿ ಅಭಿಪ್ರಾಯದ ಸಂವಹನವು ರಿಮೋಟ್ ಇ–ವೋಟಿಂಗ್ ವ್ಯವಸ್ಥೆಗಳ ಮೂಲಕ ಮಾತ್ರ ನಡೆಯುತ್ತದೆ.

ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ಇ–ಮತದಾನದ ಸೌಲಭ್ಯವನ್ನು ಒದಗಿಸುವ ಉದ್ದೇಶಕ್ಕಾಗಿ ಕೆಫಿನ್ ಟೆಕ್‌ನ ಸೇವೆಗಳನ್ನು ಬಳಸಿಕೊಂಡಿದೆ. ಇ–ಮತದಾನದ ಅವಧಿಯು ಶುಕ್ರವಾರ, ಜೂನ್ 02, 2023ರಂದು ಬೆಳಿಗ್ಗೆ 9.00 ಗಂಟೆ ಐಎಸ್‌ಟಿಗೆ ಪ್ರಾರಂಭವಾಗುತ್ತದೆ ಮತ್ತು ಶನಿವಾರ, ಜುಲೈ 01, 2023ರ ಸಂಜೆ 5.00 ಗಂಟೆ ಐಎಸ್‌ಟಿಗೆ ಮುಕ್ತಾಯಗೊಳ್ಳುತ್ತದೆ. ತದನಂತರ ಇ–ಮತದಾನವನ್ನು ಕೆಫಿನ್ ಟೆಕ್‌ನಿಂದ ನಿಷ್ಕ್ರಿಯಗೊಳಿಸಲಾಗುವುದು.

ತಮ್ಮ ಇಮೇಲ್ ವಿಳಾಸಗಳು ಮತ್ತು ಮೊಬೈಲ್ ಸಂಖ್ಯೆಗಳನ್ನು ನೋಂದಾಯಿಸದ ಸದಸ್ಯರು, ಕೆಫಿನ್ ಟೆಕ್‌ನೊಂದಿಗೆ ಅದರ ವೆಬ್‌ಸೈಟ್‌ನಲ್ಲಿ ತಾತ್ಕಾಲಿಕವಾಗಿ ನೋಂದಾಯಿಸಲು/ ನವೀಕರಿಸಲು ವಿನಂತಿಸಲಾಗಿದೆ.

ಇ–ಮೇಲ್ ವಿಳಾಸದ ಶಾಶ್ವತ ನೋಂದಣಿಗಾಗಿ, ಸದಸ್ಯರು ತಮ್ಮ ಸಂಬಂಧಪಟ್ಟ ಡಿಪಾಸಿಟರಿ ಪಾರ್ಟಿಸಿಪೆಂಟ್‌ರವರೊಂದಿಗೆ ಹೊಂದಿರುವ ಎಲೆಕ್ಟ್ರಾನಿಕ್ ಹೋಲ್ಡಿಂಗ್‌ಗಳು ಮತ್ತು ಕೆಫಿನ್ ಟೆಕ್‌ನೊಂದಿಗೆ ಹೊಂದಿರುವ ಭೌತಿಕ ಹೋಲ್ಡಿಂಗ್‌ಗಳಿಗೆ ಅನುಗುಣವಾಗಿ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಲು ವಿನಂತಿಸಲಾಗಿದೆ ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

ತಮ್ಮ ಇ–ಮೇಲ್ ವಿಳಾಸವನ್ನು ನೋಂದಾಯಿಸಿರುವ ಯಾವುದೇ ಸದಸ್ಯರು, ಅಂಚೆ ಮತಪತ್ರದ ನೋಟೀಸ್, ರಿಮೋಟ್ ಇ–ಮತದಾನಕ್ಕಾಗಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಸ್ವೀಕರಿಸದಿದ್ದರೆ, ಅಂತಹ ಸದಸ್ಯರು ಅದನ್ನು ಸ್ವೀಕರಿಸಲು ತಮ್ಮ ನೋಂದಾಯಿತ ಇಮೇಲ್ ವಿಳಾಸದಿಂದ einward.ris@kfintech.com ಗೆ ಬರೆಯುವುದರ ಮೂಲಕ ಪಡೆಯಬಹುದು.

ರಿಮೋಟ್ ಇ–ವೋಟಿಂಗ್ ಕಾರ್ಯವಿಧಾನದ ಮೂಲಕ ನಡೆಯುವ ಪೋಸ್ಟಲ್ ಬ್ಯಾಲೆಟ್ ಪ್ರಕ್ರಿಯೆಯು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಕಂಪನಿಯ ನಿರ್ದೇಶಕರ ಮಂಡಳಿಯು, ಕಂಪನಿ ಕಾರ್ಯದರ್ಶಿ (ಸದಸ್ಯತ್ವ ಸಂಖ್ಯೆ ಎಫ್‌ಸಿಎಸ್ 5553) ಶ್ರೀ ನಾಗೇಂದ್ರ ಡಿ ರಾವ್ ಅವರನ್ನು ಪರಿವೀಕ್ಷಕರನ್ನಾಗಿ ನೇಮಿಸಿದೆ.

ಇ–ಮತದಾನದ ಫಲಿತಾಂಶಗಳನ್ನು ಮಂಗಳವಾರ, ಜುಲೈ 04, 2023ರಂದು ಅಥವಾ ಮೊದಲು ಪ್ರಕಟಿಸಲಾಗುವುದು ಮತ್ತು ಕಂಪನಿಯ ವೆಬ್‌ಸೈಟ್ www.gokaldasexports.com ಮತ್ತು ಕೆಫಿನ್‌ಟೆಕ್ ನ ವೆಬ್‌ಸೈಟ್ https://evoting.kfintech.com/ ನಲ್ಲಿ ಪ್ರಕಟಣೆ ಮಾಡಲಾಗುವುದು ಜೊತೆಗೆ ಕಂಪನಿಯ ಷೇರುಗಳನ್ನು ಪಟ್ಟಿ ಮಾಡಲಾದ ಸ್ಟಾಕ್ ಎಕ್ಸ್‌ಚೇಂಜ್‌ಗಳೊಂದಿಗೆ ಸಂವಹನ ಮಾಡಲಾಗುತ್ತದೆ.

ಇ–ಮತದಾನಕ್ಕೆ ಸಂಬಂಧಿಸಿದಂತೆ ಸದಸ್ಯರು ಯಾವುದೇ ಪ್ರಶ್ನೆಗಳು/ ಕುಂದುಕೊರತೆಗಳಿಗಾಗಿ https://evoting.kfintech.com (ಕೆಫಿನ್‌ಟೆಕ್ ವೆಬ್‌ಸೈಟ್) ನ ಡೌನ್‌ಲೋಡ್ ವಿಭಾಗದಲ್ಲಿ ಲಭ್ಯವಿರುವ ಸಹಾಯ ಮತ್ತು ಪದೇ ಪದೇ ಕೇಳಲಾಗುವ ಪ್ರಶ್ನೆಗಳು (FAQ ಗಳು) ಮತ್ತು ಇ–ಮತದಾನ ಬಳಕೆದಾರರ ಕೈಪಿಡಿಯನ್ನು ವೀಕ್ಷಿಸಬಹುದು ಅಥವಾ ಶ್ರೀ ಶಿವಕುಮಾರ್ ರವರನ್ನು evoting@kfintech.com ನಲ್ಲಿ ಅಥವಾ ಕೆಫಿನ್‌ಟೆಕ್‌ನ ಟೋಲ್ ಫ್ರೀ ಸಂಖ್ಯೆ 1–800–309–4001 ಗೆ ಕರೆ ಮಾಡಿ ಸಂಪರ್ಕಿಸಬಹುದು ಅಥವಾ ಕಂಪನಿ ಕಾರ್ಯದರ್ಶಿ ಶ್ರೀ ಗೌರೀಶ್ ಹೆಗಡೆ ಅವರನ್ನು cs@gokaldasexports.com ನ ಮೂಲಕ ಸಂಪರ್ಕಿಸಬಹುದು.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಗೌರೀಶ್ ಹೆಗಡೆ
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : ಜೂನ್ 01, 2023

ಗೌತಮ ವಿದ್ಯಾಸಂಸ್ಥೆ (ರಿ)

ದೊಡ್ಡಬಾಗಿಲು, ತಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ,

ನೇಮಕಾತಿ ಅಧಿಸೂಚನೆ

ದಿನಾಂಕ 01-06-2023

ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಕೆ.ಆರ್. ವೃತ್ತ–560 001 ಇವರ ಪತ್ರ ಸಂಖ್ಯೆ: ಸಿ8(5) / ಶಾ.ಶಿ.ಅ.ಖಾ.ಹು.ಭ. 1052996/2022–23. ದಿನಾಂಕ: 16.05.2023ರ ಅನ್ವಯ **ಗೌತಮ ವಿದ್ಯಾಸಂಸ್ಥೆ (ರಿ), ಡಾ. ಬಿ.ಆರ್. ಅಂಬೇಡ್ಕರ್ ವಸತಿ ಪ್ರೌಢಶಾಲೆ, ದೊಡ್ಡಬಾಗಿಲು, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ** ಇಲ್ಲಿ ಈ ಕೆಳಕಂಡಂತೆ ಖಾಲಿ ಇರುವ ಅನುದಾನಿತ **ಪ್ರೌಢಶಾಲಾ ಆಂಗ್ಲಭಾಷಾ ಸಹಶಿಕ್ಷಕರ ಹುದ್ದೆಗೆ** ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಕರೆಯಲಾಗಿದ್ದು, ಅರ್ಹ ಅಭ್ಯರ್ಥಿಗಳು ತಮ್ಮ ಶೈಕ್ಷಣಿಕ ವಿದ್ಯಾರ್ಹತೆಯ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸುವುದು ಹಾಗೂ ಅರ್ಜಿಯ ಜೊತೆಯಲ್ಲಿ ಪ್ರಧಾನ ಕಾರ್ಯದರ್ಶಿಗಳು, ಗೌತಮ ವಿದ್ಯಾಸಂಸ್ಥೆ (ರಿ), ದೊಡ್ಡಬಾಗಿಲು ಇವರಿಗೆ ಸಂದಾಯ ವಾಗುವಂತೆ ಪರಿಶಿಷ್ಟ ಜಾತಿ ಅಭ್ಯರ್ಥಿಗಳು ರೂ. 500/– ಗಳಿಗೆ ಬ್ಯಾಂಕ್ ಹುಂಡಿ ಲಗತ್ತಿಸಿ ಈ ಪ್ರಕಟಣೆ ಪ್ರಕಟಣೆಗೊಂಡ 21 ದಿನಗಳ ಒಳಗೆ ರಿಜಿಸ್ಟರ್ ಅಂಚೆಯ ಮೂಲಕ ಅಥವಾ ಖುದ್ದಾಗಿ ಈ ಮೇಲ್ಕಂಡ ವಿಳಾಸಕ್ಕೆ ತಲುಪಿಸುವುದು. ಅಭ್ಯರ್ಥಿಗಳು ಅರ್ಜಿಯ ಮತ್ತೊಂದು ಪ್ರತಿಯನ್ನು ಮಾನ್ಯ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ, ಇಲಾಖೆ, ಮೈಸೂರು ಜಿಲ್ಲೆ, ಮೈಸೂರು ಇವರಿಗೆ ಸಲ್ಲಿಸುವುದು.

ಕ್ರ. ಸ.	ವಿಷಯ/ಹುದ್ದೆ	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ	ವಯೋಮಿತಿ	ಮೀಸಲಾತಿ ಬಿಂದು	ಸಮತಲ ಮೀಸಲಾತಿ
01	ಸಹ ಶಿಕ್ಷಕರು ಆಂಗ್ಲ ಭಾಷೆ	01	ಬಿ.ಎ., ಬಿ.ಇಡಿ ಇಂಗ್ಲೀಷ್ ಐಚ್ಛಿಕ ವಿಷಯ	ಕನಿಷ್ಠ 21 ವರ್ಷ ಗರಿಷ್ಠ 45 ವರ್ಷ	01 ಪರಿಶಿಷ್ಟ ಜಾತಿ	

ಸಹಿ/– ಅಧ್ಯಕ್ಷರು
ಗೌತಮ್ ವಿದ್ಯಾಸಂಸ್ಥೆ (ರಿ) ದೊಡ್ಡಬಾಗಿಲು
ಮೊ.ನಂ. 99019 11996

ಸಹಿ/– ಪ್ರಧಾನ ಕಾರ್ಯದರ್ಶಿ
ಗೌತಮ ವಿದ್ಯಾಸಂಸ್ಥೆ (ರಿ) ದೊಡ್ಡಬಾಗಿಲು
ಮೊ.ನಂ. 94485 05005



‘ಮೆಲೋಡಿ ಡ್ರಾಮ’ದ ಸುಮಧುರ ಹಾಡು

ಪ್ರೈಮ್ ಸ್ಟಾರ್ ಸ್ಟುಡಿಯೋ ಲಾಂಛನದಲ್ಲಿ ಎಂ.ನಂಜುಂಡ ರೆಡ್ಡಿ ಅವರು ನಿರ್ಮಿಸಿರುವ, ಮಂಜು ಕಾರ್ತಿಕ್ ನಿರ್ದೇಶನದ ‘ಮೆಲೋಡಿ ಡ್ರಾಮ’ ಚಿತ್ರದ ಹಾಡುಗಳ ಬಿಡುಗಡೆ ಇತ್ತೀಚೆಗೆ ಚಿತ್ರತಂಡದ ಸದಸ್ಯರ ಸಮ್ಮುಖದಲ್ಲಿ ನಡೆಯಿತು.

‘ಚಿತ್ರಕ್ಕೆ ‘ನಿನ್ನ ಕಥೆ ನನ್ನ ಜೊತೆ’ ಎಂಬ ಅಡಿಬರಹವಿದೆ. ಚಿತ್ರದಲ್ಲಿ ಏಳು ಸುಮಧುರ ಹಾಡುಗಳಿವೆ. ಸೋನು ನಿಗಮ್, ಕೈಲಾಶ್ ಖೇರ್, ಪಲಾಕ್ ಮುಚ್ಚಲ್ ಮುಂತಾದ ಖ್ಯಾತ ಗಾಯಕರು ಇಲ್ಲಿ ಹಾಡಿದ್ದಾರೆ. ‘ದ್ವಿಪಾತ್ರ’ ಚಿತ್ರದ ಮೂಲಕ ಚಿತ್ರರಂಗಕ್ಕೆ ಪ್ರವೇಶಿಸಿದ ಸತ್ಯ ಈ ಚಿತ್ರದ ನಾಯಕನಾಗಿ, ‘ಸೀತಾವಲ್ಲಭ’ ಹಾಗೂ ‘ಸರಸು’ ಧಾರಾವಾಹಿ ಮೂಲಕ ಮನೆಮಾತಾಗಿರುವ ಸುಪ್ರೀತ ಸತ್ಯನಾರಾಯಣ ಅವರು ನಾಯಕಿಯಾಗಿ ಇಲ್ಲಿ ನಟಿಸಿದ್ದಾರೆ. ರಂಗಾಯಣ ರಘು, ಅನು ಪ್ರಭಾಕರ್, ರಾಜೇಶ್ ನಟರಂಗ, ಬಾಲು ರಾಜವಾಡಿ, ಲಕ್ಷ್ಮೀ ಸಿದ್ದಯ್ಯ ಮುಂತಾದವರು ಅಭಿನಯಿಸಿದ್ದಾರೆ. ಜೂನ್‌ನಲ್ಲೇ ಚಿತ್ರವನ್ನು ತೆರೆಗೆ ತರುವ ಪ್ರಯತ್ನ ಮಾಡುತ್ತಿದ್ದೇವೆ. ಕಳೆದ ಹದಿನೈದು ವರ್ಷಗಳಿಂದ ನಿರ್ದೇಶನ ವಿಭಾಗದಲ್ಲಿ ಕಾರ್ಯನಿರ್ವಹಿಸಿರುವ ನನ್ನ ನಿರ್ದೇಶನದ ಮೊದಲ ಚಿತ್ರವಿದು’ ಎನ್ನುತ್ತಾರೆ ಮಂಜು ಕಾರ್ತಿಕ್.

ಚಿತ್ರವನ್ನು ನಂಜುಂಡ ರೆಡ್ಡಿ ಅವರು ನಿರ್ಮಿಸಿದ್ದು, ಮನು ಡಿ.ಬಿ. ಹಳ್ಳಿ ಅವರ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಹಾಡುಗಳಿಗೆ ಜಯಂತ ಕಾಯ್ಕಿಣಿ, ವಿ.ನಾಗೇಂದ್ರ ಪ್ರಸಾದ್, ಧನಂಜಯ ರಂಜನ್ ಗೀತಸಾಹಿತ್ಯವಿದೆ. ಕಿರಣ್ ರವೀಂದ್ರನಾಥ್ ಚಿತ್ರದ ಸಂಗೀತ ನಿರ್ದೇಶಕರು. ❖

ಸುಪ್ರೀತ ಸತ್ಯನಾರಾಯಣ

ಪ್ರಜಾವಾಣಿ ನೋಡಿಯೊ
ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸಿಂಹಪ್ರಿಯಾ ಜೋಡಿ ಕಥೆ

ತೆಲುಗಿನ ಕ್ರೈಂ ಥ್ರಿಲ್ಲರ್ ‘ಎವರು’ ಚಿತ್ರದ ರಿಮೇಕ್ ‘ಯದಾ ಯದಾ ಹಿ’ ಇಂದು(ಜೂನ್ 2) ತೆರೆಗೆ ಬರುತ್ತಿದೆ. ರಿಯಲ್ ಲೈಫ್‌ನಲ್ಲಿ ಇತ್ತೀಚೆಗಷ್ಟೇ ದಾಂಪತ್ಯ ಜೀವನಕ್ಕೆ ಕಾಲಿಟ್ಟಿರುವ ವಸಿಷ್ಠ ಸಿಂಹ–ಹರಿಪ್ರಿಯಾ ಈ ಚಿತ್ರದಲ್ಲಿ ರೀಲ್‌ನಲ್ಲಿಯೂ ಜೋಡಿಯಾಗಿದ್ದಾರೆ. ಚಿತ್ರೀಕರಣದ ವೇಳೆಯ ಅನುಭವಗಳನ್ನು ಅವರಿಬ್ಬರೂ ಇಲ್ಲಿ ಹಂಚಿಕೊಂಡಿದ್ದಾರೆ...

ಹರಿಪ್ರಿಯಾ

ವಿನಾಯಕ ಕೆ.ಎಸ್.

- **ಈ ಸಿನಿಮಾದಲ್ಲಿ ನಿಮ್ಮ ಪಾತ್ರವೇನು, ಎಷ್ಟು ಪ್ರಾಮುಖ್ಯವಿದೆ?**

ಹರಿಪ್ರಿಯಾ: ಸಿನಿಮಾ ಒಪ್ಪಿಕೊಳ್ಳಲು ಮುಖ್ಯ ಕಾರಣವೇ ಚಿತ್ರಕಥೆ ಮತ್ತು ಪಾತ್ರದ ಪ್ರಾಮುಖ್ಯ. ಇಲ್ಲಿಯವರೆಗೂ ವಿಭಿನ್ನ ಪಾತ್ರಗಳನ್ನೇ ಮಾಡಿಕೊಂಡು ಬಂದಿರುವೆ. ಈ ಚಿತ್ರದಲ್ಲಿ ಪ್ರಿಯಾಂಕ ಎಂಬ ಪಾತ್ರ. ಆಕೆ ಉದ್ಯಮಿ. ಪಾತ್ರಕ್ಕೆ ತುಂಬ ಆಯಾಮಗಳಿವೆ, ಭಾವನೆಗಳಿವೆ. ಪ್ರೇಕ್ಷಕರಲ್ಲಿಯೂ ಭಾವನೆಗಳನ್ನು ಮೂಡಿಸುವ ಪಾತ್ರ. ಒಂದೇ ಸಲಕ್ಕೆ ಭಾವನೆಗಳು ಬದಲಾಗುವ ಸನ್ನಿವೇಶಗಳಿವೆ. ಹೀಗಾಗಿ ಈ ಚಿತ್ರದಲ್ಲಿ ನಟನೆ ತುಂಬಾ ಸವಾಲಾಗಿತ್ತು.

- **ನಿಮ್ಮ ಪಾತ್ರ ಮೂಲ ಸಿನಿಮಾದ ‘ಸಮೀರಾ’ ಪಾತ್ರದ ರೀತಿ ಇರುತ್ತದೆಯೇ?**

ಮುಖ್ಯ ಎಳೆ ಆ ಸಿನಿಮಾದಂತೆ ಇರುತ್ತದೆ. ಆದರೆ ಈ ಚಿತ್ರ ಬೇರೆ ಬೇರೆ ಭಾಷೆಯಲ್ಲಿ ತೆರೆಕಂಡು ಯಶಸ್ವಿಯಾಗಿದೆ. ಅಲ್ಲೆಲ್ಲ ಬೇರೆ ರೀತಿ ಪ್ರೆಸೆಂಟ್ ಮಾಡಿದ್ದಾರೆ. ಕನ್ನಡದಲ್ಲಿ ಕೂಡ ನಮ್ಮ ಪ್ರಾದೇಶಿಕತೆಗೆ ಒತ್ತು ನೀಡಲಾಗಿದೆ. ನಮಗೆ ಕನೆಕ್ಟ್ ಆಗುತ್ತದೆ. ಒಂದಷ್ಟು ಸನ್ನಿವೇಶಗಳು ಮೂಲ ಸಿನಿಮಾದಂತೆ ಅತ್ಯಾಪ್ತತೆ ಕೇಳುತ್ತವೆ. ಇಲ್ಲಿವರೆಗೆ ಒಬ್ಬಳೇ ಬೋಲ್ಡ್ ಪಾತ್ರ ಮಾಡಿದ್ದೆ. ಜೊತೆಯಾಗಿ ಬೋಲ್ಡ್ ಪಾತ್ರ ಮಾಡಿರಲಿಲ್ಲ. ಹೀಗಾಗಿ ಮುಜುಗರ ಆಗಬಹುದು ಅನ್ನಿಸಿತು. ಇದರಿಂದ ಶೂಟಿಂಗ್‌ಗೆ ತೊಂದರೆಯಾಗಬಹುದೆಂಬ ಭಾವನೆ ಬಂದಿತು. ಹೀಗೆ ಯೋಚನೆ ಮಾಡಿ ಈ ಪಾತ್ರವನ್ನು ಮಾಡುವಂತೆ ವಸಿಷ್ಠ ಸಿಂಹ ಅವರನ್ನು ಕೇಳಿಕೊಂಡೆ.

- **ರೀಲ್‌ನಲ್ಲಿ ಜೋಡಿಯಾಗಿ ಶೂಟಿಂಗ್ ಅನುಭವ ಹೇಗಿತ್ತು?**

2016ರಿಂದ ನಮ್ಮಿಬ್ಬರ ಪರಿಚಯ. ಇಬ್ಬರಿಗೂ ಇಷ್ಟವಾಗಿದ್ದು ನಮ್ಮ ಕೆಲಸ. ಅವರು ಕಾಲೇಜಿನಿಂದಲೂ ನನ್ನ ಸಿನಿಮಾಗಳನ್ನು ನೋಡಿಕೊಂಡು ಬಂದಿದ್ದಾರೆ. ನಂತರ ಸ್ನೇಹ ಪ್ರೇಮವಾಯಿತು. ಪ್ರೇಮಿಗಳಾಗಿ ಶೂಟಿಂಗ್ ಅನುಭವ ಮಜವಾಗಿತ್ತು. ನಮ್ಮಿಬ್ಬರ ಪ್ರೀತಿ ಹೊರಗಡೆಯವರಿಗೆ ತಿಳಿಯದಂತೆ ನಿಭಾಯಿಸುವುದು ಕಷ್ಟವಾಗಿತ್ತು. ಎಲ್ಲಿ ಮೂರನೆಯವರಿಗೆ ಗೊತ್ತಾಗಿಬಿಡುತ್ತದೆಯೋ ಎಂಬ ಭಯವಿತ್ತು. ಇಬ್ಬರ ನಡುವೆ ನಟನೆಯಲ್ಲಿ ಒಂದು ಆರೋಗ್ಯಯುತ ಪೈಪೋಟಿ ಇತ್ತು.

- **ನಿಮ್ಮ ಮುಂದಿನ ಯೋಜನೆಗಳು?**

ಉಪೇಂದ್ರ ಜೊತೆಗೆ ‘ಲಗಾಮು’ ಸಿನಿಮಾ ನಡೆಯುತ್ತಿದೆ. ‘ಬೆಲ್‌ಬಾಟಂ–2’ ಮುಹೂರ್ತವಾಗಿದೆ. ಹೊಸ ಸಿನಿಮಾಗಳ ಕಥೆ ಕೇಳುತ್ತಿದ್ದೇನೆ. ತುಂಬ ಚೆನ್ನಾಗಿರುವುದನ್ನು ಮಾತ್ರ ಒಪ್ಪಿಕೊಳ್ಳೋಣ ಎಂಬ ನಿರ್ಧಾರ ಮಾಡಿರುವೆ. ಇಷ್ಟು ವರ್ಷ ಜೀವನ ಸಿನಿಮಾವೇ ಆಗಿತ್ತು. ಈಗ ಕುಟುಂಬಕ್ಕೆ ಸ್ವಲ್ಪ ಸಮಯ ನೀಡೋಣ ಎಂದಿರುವೆ.

- **ಇಬ್ಬರೂ ಜೊತೆಗೂಡಿ ಬೇರೆ ಸಿನಿಮಾ ಮಾಡುವ ಆಲೋಚನೆ ಇದೆಯಾ?**

ನಿರ್ಮಾಣ, ನಿರ್ದೇಶನದ ಆಲೋಚನೆಗಳಿವೆ. ಆದರೆ ತಕ್ಷಣ ಅಲ್ಲ. ಒಟ್ಟಿಗೆ ನಟಿಸಲು ತುಂಬ ಸ್ಕ್ರಿಪ್ಟ್‌ಗಳು ಬಂದಿವೆ. ಅದರಲ್ಲಿ ಒಂದೆರಡರ ಮೇಲೆ ಕೆಲಸ ನಡೆಯುತ್ತಿದೆ. ನಮ್ಮದೇ ಕನಸು, ಗುರಿ ಇದೆ. ಆ ರೀತಿಯ ಪಾತ್ರಗಳು ಬಂದರೆ ಖಂಡಿತವಾಗಿಯೂ ಒಟ್ಟಿಗೆ ನಟಿಸುತ್ತೇವೆ. ❖

- **ಸಿನಿಮಾದಲ್ಲಿ ನಿಮ್ಮ ಪಾತ್ರವೇನು, ಎಷ್ಟು ಪ್ರಾಮುಖ್ಯವಿದೆ?**

ಪ್ರಮುಖ ಪಾತ್ರ. ಆದರೆ ನಾಯಕನ ಪಾತ್ರವಲ್ಲ. ಇವತ್ತಿನ ಶ್ರೀಮತಿ, ಆವತ್ತಿನ ಪ್ರೇಯಸಿಗಾಗಿ ಈ ಪಾತ್ರ ಒಪ್ಪಿಕೊಂಡಿದ್ದು. ಚಿತ್ರದಲ್ಲಿ ಒಂದಷ್ಟು ಬೋಲ್ಡ್ ಸನ್ನಿವೇಶಗಳಿವೆ. ಅದನ್ನು ಬೇರೆ ನಟರ ಜೊತೆ ಮಾಡಲು ಮುಜುಗರವಾಗುತ್ತೆ ಎಂಬ ಕಾರಣಕ್ಕೆ ಹರಿಪ್ರಿಯಾ ಈ ಪಾತ್ರವನ್ನು ಮಾಡುವಂತೆ ಒಪ್ಪಿಸಿದರು.

- **ಇದು ‘ಎವರು’ ಚಿತ್ರದ ರೀಮೇಕ್. ಅದರಲ್ಲಿ ನಡೆಯುವ ದುರ್ಘಟನೆಗಳು ಇಲ್ಲಿಯೂ ಇವೆಯಾ?**

ನಾನು ನೇರವಾದ ರೀಮೇಕ್ ಚಿತ್ರಗಳನ್ನು ಮಾಡುವುದಿಲ್ಲ. ಇದು ಪೂರ್ತಿ ರೀಮೇಕ್ ಅಲ್ಲ. ಅಲ್ಲಿನ ಕಥೆಯ ಎಳೆಯನ್ನು ಇಟ್ಟುಕೊಂಡು ಸಾಕಷ್ಟು ಬದಲಾವಣೆ ಮಾಡಿಕೊಳ್ಳಲಾಗಿದೆ. ಈ ಚಿತ್ರದ ಬರವಣಿಗೆಯ ಭಾಗವೂ ಆಗಿದ್ದೇನೆ. ಹೀಗಾಗಿ ಇದು ನಮ್ಮ ನೆಲದ ಚಿತ್ರ ಎನ್ನಿಸುವಷ್ಟು ಸ್ವಂತಿಕೆ ಇಲ್ಲಿದೆ.

- **ರೀಲ್‌ನಲ್ಲಿ ಜೋಡಿಯಾಗಿ ಶೂಟಿಂಗ್ ಅನುಭವ ಹೇಗಿತ್ತು?**

ಇದೊಂಥರ ಖುಷಿಯ ಅನುಭವ. ಮೊದಲು ನಾವಿಬ್ಬರೂ ಸಮಯ ಹೊಂದಿಸಿಕೊಂಡು ಭೇಟಿ ಮಾಡುವುದು ಕಷ್ಟವಾಗುತ್ತಿತ್ತು. ಆದರೆ ಈ ಚಿತ್ರದಲ್ಲಿ ಇಬ್ಬರಿಗೂ ಒಟ್ಟಿಗೆ ಕಾಲ ಕಳೆಯಲು ಸಾಕಷ್ಟು ಸಮಯ ಸಿಕ್ಕಿತ್ತು. ಇಬ್ಬರಿಗೂ ಅತ್ಯಾಪ್ತತೆ ಇರುವುದರಿಂದ ಪಾತ್ರವಾಗಿ ಇಬ್ಬರ ಕೆಮಿಸ್ಟ್ರಿ ಇಲ್ಲಿ ಚೆನ್ನಾಗಿ ಕೆಲಸ ಮಾಡಿದೆ.

- **ನಿಮ್ಮ ಮುಂದಿನ ಯೋಜನೆಗಳು?**

‘ಲವ್ಲಿ’ ಸಿನಿಮಾ ಬಹುತೇಕ ಮುಗಿದಿದೆ. ಲಂಡನ್ ಚಿತ್ರೀಕರಣದ ಭಾಗವಷ್ಟೆ ಬಾಕಿಯಿದೆ. ‘ಕಾಲಚಕ್ರ’ ಸಿನಿಮಾ ಬಿಡುಗಡೆಗೆ ಸಿದ್ಧವಿದೆ. ಇನ್ನೊಂದಷ್ಟು ಸಿನಿಮಾಗಳು ಪ್ರಾರಂಭಿಕ ಹಂತದಲ್ಲಿವೆ.

- **ನಟನೆ ಜೊತೆಗೆ ಉತ್ತಮ ಗಾಯಕರು ಕೂಡ. ಗಾಯನ ಕ್ಷೇತ್ರದಲ್ಲಿನ ಕೆಲಸ ಹೇಗಿದೆ?**

ತುಂಬ ಇಷ್ಟವಾಗಿದ್ದನ್ನು ಅಥವಾ ಈ ಗೀತೆಗೆ ನನ್ನದೇ ಧ್ವನಿ ಬೇಕು ಎಂಬಂತಹ ಗೀತೆಗಳನ್ನು ಮಾತ್ರ ಹಾಡುತ್ತೇನೆ. ಇಲ್ಲವಾದಲ್ಲಿ ಹೊಸಬರಿಗೆ ಪ್ರೋತ್ಸಾಹ ನೀಡುವಂತಹ, ನನ್ನಿಂದ ಹೊಸ ತಂಡಕ್ಕೆ ಉಪಯೋಗವಾಗುವಂತಹ ಗೀತೆಗಳನ್ನು ಹಾಡುತ್ತೇನೆ. ‘ಯದಾ ಯದಾ ಹಿ’ ಟೈಟಲ್ ಟ್ರ್ಯಾಕ್ ಅನ್ನು ನಾನು ಮತ್ತು ಹರಿಪ್ರಿಯ ಒಟ್ಟಿಗೆ ಹಾಡಿದ್ದೇವೆ. ‘ರಕ್ತಾಕ್ಷ ’ ಸಿನಿಮಾದ ಟೈಟಲ್ ಟ್ರ್ಯಾಕ್ ಹಾಡಿರುವೆ.

ವಸಿಷ್ಠ ಸಿಂಹ

ಎಲ್ಲದಕ್ಕೂ ಕಾಲ ಕೂಡಿ ಬರಬೇಕು

‘ಜೀವನದಲ್ಲಿ ಎಲ್ಲದಕ್ಕೂ ಕಾಲ ಕೂಡಿಬರಬೇಕು. ‘ಭೈರತಿ ರಣಗಲ್’ಗೆ ಈಗ ಕಾಲ ಕೂಡಿ ಬಂದಿದೆ. ನನ್ನ ಚಿತ್ರರಂಗದ ವೃತ್ತಿ ಬದುಕಿನಲ್ಲಿ ನೆನಪಿಟ್ಟುಕೊಳ್ಳಬೇಕಾದ ನಾಲ್ಕು ಪ್ರಮುಖ ಪಾತ್ರಗಳಲ್ಲಿ ಈ ಪಾತ್ರ ಕೂಡ ಒಂದು’...

ಹೀಗಂದವರು ನಟ ಶಿವರಾಜ್‌ಕುಮಾರ್.

ಶಿವರಾಜ್‌ಕುಮಾರ್ ಅವರ ಈ ಮಾತಿಗೆ ವೇದಿಕೆಯಾಗಿದ್ದು ‘ಮಫ್ತಿ’ ನರ್ತನ್ ನಿರ್ದೇಶನದ ‘ಭೈರತಿ ರಣಗಲ್’ ಚಿತ್ರದ ಮುಹೂರ್ತ. ‘ಮಫ್ತಿ’ ಸಿನಿಮಾ ಆಗಿ 6 ವರ್ಷ ಅಂತರ ಏಕೆ? ಎಂದು ನರ್ತನ್‌ಗೆ ಕೇಳಿದ ಪ್ರಶ್ನೆಗೆ ಶಿವರಾಜ್‌ಕುಮಾರ್ ಉತ್ತರಿಸಿದರು. ‘ಬದುಕಿನಲ್ಲಿ ಕೆಲವೊಮ್ಮೆ ಏನೇನೋ ಆಗುತ್ತದೆ. ಯಾರಿಗೋ ಕಾಯುತ್ತೇವೆ. ಆದರೆ ಕಾಲ ಕೂಡಿ ಬಂದಾಗ ಎಲ್ಲವೂ ಅದಾಗಿಯೇ ಆಗುತ್ತದೆ. ಯಾರ ಕೈಗೆ ಸೇರಬೇಕೋ ಅವರಿಗೆ ಸೇರುತ್ತದೆ. ‘ಭೈರತಿ ರಣಗಲ್’ ನಮ್ಮ ಗೀತಾ ಪಿಕ್ಚರ್ಸ್‌ನಿಂದಲೇ ನಿರ್ಮಾಣ ಮಾಡಬೇಕು ಎಂದು ಮೊದಲೇ ನಿರ್ಧಾರ ಮಾಡಿದ್ದೆವು. ಈಗ ಸಮಯ ಬಂದಿದೆ’ ಎಂದರು.

ಗೀತಾ ಪಿಕ್ಚರ್ಸ್ ಲಾಂಛನದಲ್ಲಿ ಗೀತಾ ಶಿವರಾಜಕುಮಾರ್ ಚಿತ್ರ ನಿರ್ಮಿಸುತ್ತಿದ್ದಾರೆ. ‘ಮಫ್ತಿ’ ಚಿತ್ರದ ಶಿವರಾಜಕುಮಾರ್ ಅವರ ಭೈರತಿ ರಣಗಲ್ ಪಾತ್ರ ಇನ್ನೂ ಎಲ್ಲರ ಮನದಲ್ಲಿದೆ. ಆ ಪಾತ್ರವನ್ನು ಕೇಂದ್ರವಾಗಿಟ್ಟುಕೊಂಡು ಈ ಚಿತ್ರದ ಕಥೆ ಮಾಡಲಾಗಿದೆ. ಇದು ‘ಮಫ್ತಿ’ಯ ಹಿಂದಿನ ಕಥೆ(ಪ್ರೀಕ್ವೆಲ್). ಅಂದರೆ ಭೈರತಿ ರಣಗಲ್ ಮೊದಲು ಹೇಗಿದ್ದರು ಎಂಬ ಕಥೆ’ ಎಂದು ನಿರ್ದೇಶಕ ನರ್ತನ್ ಮಾಹಿತಿ ನೀಡಿದರು.

‘ಅಂದಹಾಗೆ ಈ ಚಿತ್ರದಲ್ಲಿ ಶಿವರಾಜ್‌ಕುಮಾರ್ ವಯಸ್ಸು ಸುಮಾರು 32 ಅಂದುಕೊಳ್ಳಿ. ಎಲ್ಲರೂ ನನ್ನ ಕೈಯಲ್ಲಿ ಲಾಂಗ್ ಹಿಡಿಸಲು ಬಯಸುತ್ತಾರೆ. ಎಲ್ಲ ನಿರ್ದೇಶಕ, ನಿರ್ಮಾಪಕರು ನನ್ನನ್ನು ಕಾಲೇಜು ಹುಡುಗ ಎಂದುಕೊಂಡು ಬಿಟ್ಟಿದ್ದಾರೆ. ನಿರ್ದೇಶಕ, ನಿರ್ಮಾಪಕರು ಹೇಳಿದಂತೆ ನಟ ಕೇಳಬೇಕು’ ಎಂದು ಗೀತಾ ಅವರ ಕಡೆಗೆ ನೋಡಿ ನಕ್ಕರು ಶಿವರಾಜ್‌ಕುಮಾರ್.

ರವಿ ಬಸ್ರೂರು ಸಂಗೀತ ನಿರ್ದೇಶನ, ನವೀನ್ ಕುಮಾರ್ ಅವರ ಛಾಯಾಚಿತ್ರಗ್ರಹಣ ಹಾಗೂ ಶಿವಕುಮಾರ್ ಅವರ ಕಲಾ ನಿರ್ದೇಶನ ಈ ಚಿತ್ರಕ್ಕಿದೆ. ‘ಇನ್ನೊಬ್ಬ ಸ್ಟಾರ್ ಇರುತ್ತಾರೆ. ಯಾರು ಎಂಬುದನ್ನು ಶೀಘ್ರದಲ್ಲಿಯೇ ಹೇಳುತ್ತೇವೆ. ನಮ್ಮ ರೇಟು, ಡೇಟಿಗೆ ಹೊಂದಿಕೆಯಾಗುವ ನಾಯಕಿ ಸಿಕ್ಕರೆ ಕನ್ನಡದ ನಾಯಕಿಯೇ ಚಿತ್ರದಲ್ಲಿ ಇರುತ್ತಾರೆ’ ಎಂದರು ನರ್ತನ್.

‘ಮಫ್ತಿ ಚಿತ್ರದಲ್ಲಿ ಶಿವರಾಜ್‌ಕುಮಾರ್ ನಟಿಸಲು ಒಪ್ಪಿಗೆ ಕೊಟ್ಟಿರಲಿಲ್ಲ. ಕಾರಣ ಚಿತ್ರದಲ್ಲಿ ಅವರ ಕಾಲಾವಧಿ ಕಡಿಮೆ ಇತ್ತು. ಆದರೆ ಕಥೆ ಕೇಳಿ, ಪಾತ್ರದ ವಿವರ ನೋಡಿದಾಗ ಶಿವರಾಜ್‌ಕುಮಾರ್ ಈ ಪಾತ್ರ ಮಾಡುವೆ ಎಂದರು. ನಂತರ ನಡೆದಿದ್ದು ಇತಿಹಾಸ. ಆ ಬಳಿಕ ಭೈರತಿ ರಣಗಲ್ ನಮ್ಮ ಸಂಸ್ಥೆಯಿಂದಲೇ ಮಾಡಬೇಕೆಂದು ನಿರ್ಧಾರ ಮಾಡಿದೆವು. ಜೂನ್‌ನಿಂದ ಚಿತ್ರೀಕರಣ ಪ್ರಾರಂಭವಾಗಲಿದೆ’ ಎಂದು ನಿರ್ಮಾಪಕಿ ಗೀತಾ ಶಿವರಾಜ್‌ಕುಮಾರ್ ಹೇಳಿದರು.

ನಿರ್ಮಾಪಕಿ ನಿವೇದಿತಾ ಶಿವರಾಜ್‌ಕುಮಾರ್, ಕೆ.ಪಿ. ಶ್ರೀಕಾಂತ್, ಛಾಯಾಚಿತ್ರಗ್ರಾಹಕ ನವೀನ್ ಕುಮಾರ್ ಹಾಗೂ ಕಲಾ ನಿರ್ದೇಶಕ ಶಿವಕುಮಾರ್ ಅವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು. ❖

‘ಭೈರತಿ ರಣಗಲ್’ ಚಿತ್ರದ ಮುಹೂರ್ತ ಕಾರ್ಯಕ್ರಮದಲ್ಲಿ ನರ್ತನ್, ಶಿವರಾಜ್‌ಕುಮಾರ್, ಗೀತಾ ಶಿವರಾಜ್‌ಕುಮಾರ್, ನಿವೇದಿತಾ



‘ಟಗರುಪಲ್ಯ’ ಸವಿಯೋಕೆ ಸಿದ್ಧ!

‘ನಟರಾಕ್ಷಸ’ ಧನಂಜಯ ತಮ್ಮದೇ ಡಾಲಿ ಪಿಕ್ಚರ್ಸ್‌ನಡಿ ನಿರ್ಮಿಸುತ್ತಿರುವ ಟಗರುಪಲ್ಯ ಸಿನಿಮಾ ಚಿತ್ರೀಕರಣ ಪೂರ್ಣಗೊಂಡಿದೆ.

ನಿರ್ದೇಶಕ ಯೋಗರಾಜ್ ಭಟ್ ಸೇರಿದಂತೆ ಹಲವು ಖ್ಯಾತ ನಿರ್ದೇಶಕರ ಜೊತೆ ನಿರ್ದೇಶನದ ವಿಭಾಗದಲ್ಲಿ ಕಾರ್ಯನಿರ್ವಹಿಸಿರುವ ಉಮೇಶ್ ಕೆ. ಕೃಪ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಕಳೆದ ನವೆಂಬರ್‌ನಲ್ಲಿ ಈ ಸಿನಿಮಾ ಸೆಟ್ಟೇರಿತ್ತು. ಮಂಡ್ಯ, ಮಳವಳ್ಳಿ, ಮುತ್ತತ್ತಿ ಹಾಗೂ ಶಿಂಶ ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆದಿದೆ. ‘ನಮ್ಮ ಮಣ್ಣಿನ ಕಥೆಯೊಂದನ್ನು ನಿರ್ಮಿಸಿದ ಹೆಮ್ಮೆಯಿದೆ. ಕನ್ನಡಕ್ಕೊಬ್ಬ ಹೊಸ ಪ್ರತಿಭಾನ್ವಿತ ನಿರ್ದೇಶಕ ಸಿಕ್ಕಿದ್ದಾನೆ. ನಾಗಭೂಷಣ, ಅಮೃತಾ ಪ್ರೇಮ್ ಮತ್ತು ಹೊಸ ಪ್ರತಿಭಾನ್ವಿತರ ದಂಡು, ಜೊತೆಗೆ ರಂಗಾಯಣ ರಘು, ತಾರ, ಬಿರಾದರ್ ಅವರಂತಹ ಮೇರು ಕಲಾವಿದರ ಹೆಗಲು ಸಿಕ್ಕಿದೆ. ಸದ್ಯದಲ್ಲೆ ನಿಮ್ಮ ಮುಂದೆ ಸಿನಿಮಾ ಬರಲಿದೆ’ ಎನ್ನುತ್ತಾರೆ ಧನಂಜಯ. ‘ನೆನಪಿರಲಿ’ ಪ್ರೇಮ್ ಪುತ್ರಿ ಅಮೃತಾ ಈ ಚಿತ್ರದ ಮೂಲಕ ಚಂದನವನಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಮಂಡ್ಯ ಹಳ್ಳಿಗಳಲ್ಲಿ ನಡೆಯುವ ಆಚರಣೆ ಸುತ್ತ ಸಿನಿಮಾವನ್ನು ಕಟ್ಟಿಕೊಡಲಾಗಿದೆ ಎಂದಿದೆ ಚಿತ್ರತಂಡ. ಚಿತ್ರತಂಡ ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ತೊಡಗಿಸಿಕೊಂಡಿದೆ. ❖

ಅಮೃತಾ ಪ್ರೇಮ್

ಸಿನಿ ಸಂಕ್ಷಿಪ್ತ

‘ಕ್ಷೇತ್ರಪತಿ’ಯಾದ ನವೀನ್ ಶಂಕರ್

‘ಗುಲ್ಟು’, ‘ಗುರುದೇವ ಹೊಯ್ಸಳ’ ಹಾಗೂ ‘ಹೊಂದಿಸಿ ಬರೆಯಿರಿ’ ಸಿನಿಮಾಗಳ ಮೂಲಕ ತನ್ನ ನಟನಾ ಸಾಮರ್ಥ್ಯವನ್ನು ಪ್ರೇಕ್ಷಕರೆದುರಿಗೆ ಇರಿಸಿರುವ ನವೀನ್ ಶಂಕರ್ ಪ್ರಸ್ತುತ ‘ಕ್ಷೇತ್ರಪತಿ’ಯಾಗಿ ಬರಲು ಸಜ್ಜಾಗಿದ್ದಾರೆ.

ನವೀನ್ ಅವರ ಜನ್ಮದಿನದಂದು ಚಿತ್ರದ ಮೋಷನ್ ಪೋಸ್ಟರ್ ಬಿಡುಗಡೆಯಾಗಿದೆ. ಈ ಮೋಷನ್ ಪೋಸ್ಟರ್ ಸಾಕಷ್ಟು ಕುತೂಹಲ ಮೂಡಿಸಿದ್ದು, ವಿಭಿನ್ನವಾದ ಲುಕ್‌ನಲ್ಲಿ ನವೀನ್ ಕಾಣಿಸಿಕೊಂಡಿದ್ದಾರೆ. ಈ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್‌ನ ಅಂತಿಮ ಹಂತದಲ್ಲಿದೆ. ಜುಲೈನಲ್ಲಿ ಈ ಸಿನಿಮಾ ತೆರೆಗೆ ಬರಲಿದೆ. ಚಿತ್ರವು ಕೆ.ಆರ್.ಜಿ. ಸ್ಟುಡಿಯೋಸ್ ಮೂಲಕ ಬಿಡುಗಡೆಯಾಗುತ್ತಿದೆ.

ಆಶ್ರಗ ಕ್ರಿಯೇಷನ್ಸ್ ಲಾಂಛನದಲ್ಲಿ ನಿರ್ಮಾಣವಾಗಿರುವ ಈ ಚಿತ್ರವನ್ನು ಶ್ರೀಕಾಂತ್ ಕಟಗಿ ನಿರ್ದೇಶಿಸಿದ್ದಾರೆ. ‘ಕ್ಷೇತ್ರಪತಿ’ ಸೋಷಿಯಲ್ ಪೊಲಿಟಿಕಲ್ ಡ್ರಾಮ ಕಥಾಹಂದರ ಹೊಂದಿದೆ ಎನ್ನುತ್ತಾರೆ ನಿರ್ದೇಶಕರು. ಇದು ಶ್ರೀಕಾಂತ್ ಅವರ ನಿರ್ದೇಶನದ ಚೊಚ್ಚಲ. ಉತ್ತರ ಕರ್ನಾಟಕ ಭಾಗದಲ್ಲಿ ನಡೆಯುವ ಕಥೆ ಇದಾಗಿದ್ದು, ಹೆಚ್ಚಿನ ಭಾಗದ ಚಿತ್ರೀಕರಣ ಉತ್ತರ ಕರ್ನಾಟಕದಲ್ಲೇ ನಡೆದಿದೆ.

ರವಿ ಬಸ್ರೂರು ಸಂಗೀತ ನಿರ್ದೇಶನವಿರುವ ಈ ಚಿತ್ರಕ್ಕೆ ವೈ.ವಿ.ಬಿ. ಶಿವಸಾಗರ್ ಛಾಯಾಚಿತ್ರಗ್ರಹಣ, ಮನು ಶೇಡ್ಗಾರ್ ಸಂಕಲನ, ನರಸಿಂಹ ಸಾಹಸ ನಿರ್ದೇಶನ ಹಾಗೂ ಜೀವನ್ ಅವರ ನೃತ್ಯ ನಿರ್ದೇಶನವಿದೆ. ‘ಹೊಂದಿಸಿ ಬರೆಯಿರಿ’ ಚಿತ್ರದಲ್ಲಿ ನಾಯಕ-ನಾಯಕಿಯಾಗಿ ನಟಿಸಿದ್ದ ನವೀನ್ ಶಂಕರ್ ಹಾಗೂ ಅರ್ಚನಾ ಜೋಯಿಸ್, ‘ಕ್ಷೇತ್ರಪತಿ’ ಚಿತ್ರದಲ್ಲೂ ಜೋಡಿಯಾಗಿದ್ದಾರೆ. ❖


ನವೀನ್ ಶಂಕರ್

‘ಪಿಂಕಿ ಎಲ್ಲಿ’ ಇಂದು ತೆರೆಗೆ

ಹಲವು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು ಪ್ರಶಸ್ತಿ ಹಾಗೂ ಪ್ರಶಂಸೆ ಪಡೆದಿರುವ ‘ಪಿಂಕಿ ಎಲ್ಲಿ?’ ಸಿನಿಮಾ ಇಂದು(ಜೂನ್ 2)ಬಿಡುಗಡೆಯಾಗುತ್ತಿದೆ.

‘ಸುಮಾರು ಮೂರು ವರ್ಷಗಳ ಹಿಂದೆ ಪ್ರಾರಂಭವಾದ ಕಥೆಯಿದು. ಬೆಂಗಳೂರಿನಲ್ಲಿ ನಡೆದ ನೈಜ ಘಟನೆಯೂ ಹೌದು. ಮಗುವೊಂದು ಕಾಣೆಯಾಗಿರುತ್ತದೆ. ಆದರೆ ಈ ಸಿನಿಮಾದಲ್ಲಿ ಕಥೆ ಮಗುವಿನ ಸುತ್ತ ಇರುವುದಿಲ್ಲ. ಮಗುವನ್ನು ಕಳೆದುಕೊಂಡವರ ಸುತ್ತ ಇರುತ್ತದೆ. ಕಥೆಯ ಒಂದೆಳೆ ಕೇಳಿ ಮೆಚ್ಚಿಕೊಂಡ ನಿರ್ಮಾಪಕ ಕೃಷ್ಣೇಗೌಡ ಅವರು ಚಿತ್ರ ನಿರ್ಮಾಣಕ್ಕೆ ಮುಂದಾದರು. ಅಕ್ಷತಾ ಪಾಂಡವಪುರ, ದೀಪಕ್ ಸುಬ್ರಹ್ಮಣ್ಯ, ಪೃಥ್ವಿ, ಗುಂಜಲಮ್ಮ, ಸಂಗಮ್ಮ ಮುಂತಾದವರು ಈ ಚಿತ್ರದಲ್ಲಿ ನಟಿಸಿದ್ದಾರೆ. ಅದರಲ್ಲೂ ಗುಂಜಲಮ್ಮ ಹಾಗೂ ಸಂಗಮ್ಮ ಇಬ್ಬರೂ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇವರಿಬ್ಬರೂ ಸ್ಲಂ ನಿವಾಸಿಗಳು. ನಟನೆ ಗೊತ್ತಿಲ್ಲದ ಇವರು ಸಹಜವಾಗಿ ಅಭಿನಯಿಸಿರುವುದು ಈ ಚಿತ್ರದ ವಿಶೇಷ’ ಎನ್ನುತ್ತಾರೆ ನಿರ್ದೇಶಕ ಪೃಥ್ವಿ ಕೋಣನೂರು.

‘ಇಲ್ಲಿ ನಿರ್ದೇಶಕರು ಕಥೆ ಹೇಳುವ ರೀತಿಯೇ ವಿಭಿನ್ನವಾಗಿದೆ. ಅದು ನನಗೂ ಆಶ್ಚರ್ಯ ತಂದಿತ್ತು. ಈ ಚಿತ್ರದಲ್ಲಿ ಮಗುವನ್ನು ಕಳೆದುಕೊಂಡಿರುವ ತಾಯಿಯ ಪಾತ್ರ ನಿರ್ವಹಿಸಿದ್ದೇನೆ’ ಎಂದರು ನಟಿ ಅಕ್ಷತಾ ಪಾಂಡವಪುರ. ❖

ಅಕ್ಷತಾ ಪಾಂಡವಪುರ

ಜೂ. 9ಕ್ಕೆ ಮನೋಹರ್ ‘ದರ್ಬಾರ್’

ಸಂಗೀತ ನಿರ್ದೇಶಕ ವಿ.ಮನೋಹರ್ ನಿರ್ದೇಶನದ ‘ದರ್ಬಾರ್’ ಚಿತ್ರ ಜೂನ್ 9ಕ್ಕೆ ತೆರೆಗೆ ಬರಲು ಸಿದ್ಧವಾಗಿದೆ.

ಚಿತ್ರದ ಕುರಿತು ಮಾಹಿತಿ ನೀಡಿದ ಮನೋಹರ್, ‘ಸುಮಾರು 23 ವರ್ಷಗಳ ನಂತರ ನಾನು ನಿರ್ದೇಶನಕ್ಕೆ ಮತ್ತೆ ಇಳಿದಿದ್ದೇನೆ. ಅದಕ್ಕೆ ಈ ಚಿತ್ರದ ನಾಯಕ, ನಿರ್ಮಾಪಕ ಸತೀಶ್ ಅವರೇ ಕಾರಣ. ನಾನು ‘ಓ ಮಲ್ಲಿಗೆ’ ಚಿತ್ರ ನಿರ್ದೇಶನ ಮಾಡಿದಾಗ ಎಲ್ಲರೂ ನನ್ನನ್ನು ಇವನ ಕೈಲೇನಾಗುತ್ತೆ ಅನ್ನೋ ರೀತಿ ನೋಡಿದ್ದರು. ನನ್ನ ಮೇಲೆ ಸಂಶಯಪಟ್ಟವರಿಗೆ ಈ ಚಿತ್ರವೇ ಉತ್ತರ. ನಾವು ಎಲ್ಲೇ ಹೋದರೂ ಇದು ಪರಿಶುದ್ಧ ಹಾಸ್ಯಚಿತ್ರನಾ ಎಂದೇ ಕೇಳುತ್ತಾರೆ. ಈಗ ಹಾಸ್ಯ ಅಂದ್ರೆ ಡಬಲ್ ಮೀನಿಂಗ್ ಅನ್ನುವಂತಾಗಿದೆ. ಮೊದಲ ಪ್ರದರ್ಶನಕ್ಕೆ ಬಂದವರು ಮೆಚ್ಚುವ ಎಲ್ಲ ಅಂಶಗಳು ಈ ಚಿತ್ರದಲ್ಲಿವೆ’ ಎಂದರು.

ಚಿತ್ರದಲ್ಲಿ ಸಾಧು ಕೋಕಿಲ, ನವೀನ್ ಡಿ. ಪಡೀಲ್ ಜೋಡಿ ಪ್ರೇಕ್ಷಕರಿಗೆ ಹಾಸ್ಯದೌತಣ ಬಡಿಸಲಿದೆ ಎನ್ನುವ ಭರವಸೆ ಚಿತ್ರತಂಡದ್ದು.

‘ಚಿತ್ರದಲ್ಲಿ ಮಂಡ್ಯ, ಮದ್ದೂರು ಭಾಗದ ರಂಗಭೂಮಿ ಕಲಾವಿದರನ್ನೇ ಹೆಚ್ಚಾಗಿ ಬಳಸಿಕೊಂಡಿದ್ದೇವೆ. ಈ ಸಿನಿಮಾದ ಬಿಡುಗಡೆ ನಂತರ ಸಾಕಷ್ಟು ಜನರು ಗುರುತಿಸಿಕೊಳ್ಳುತ್ತಾರೆ. ಉಪೇಂದ್ರ ಅವರು ಹಾಡಿದ ಎಲೆಕ್ಷನ್ ಸಾಂಗ್, ಡ್ಯುಯೆಟ್ ಸಾಂಗ್ ಜನ ಇಷ್ಟಪಟ್ಟಿದ್ದಾರೆ. ಚಂದನ್ ಶೆಟ್ಟಿ ಹಾಡಿರುವ ಹಾಡು ಇನ್ನಷ್ಟೇ ಬಿಡುಗಡೆಯಾಗಬೇಕಿದೆ’ ಎಂದು ಮನೋಹರ್ ವಿವರಿಸಿದರು. ❖



ಆಸ್ಟ್ರೇಲಿಯನ್ ಕಾನ್ಸುಲೇಟ್ ಕಚೇರಿ ಶೀಘ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದಲ್ಲಿ ಆಸ್ಟ್ರೇಲಿಯಾದ ಕಾನ್ಸಲ್ ಜನರಲ್ ಬ್ಯಾರಿ ಒ ಫಾರೆಲ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗುರುವಾರ ಭೇಟಿ ಮಾಡಿ, ಬೆಂಗಳೂರಿನಲ್ಲಿ ಆಸ್ಟ್ರೇಲಿಯನ್ ಕಾನ್ಸುಲೇಟ್ ಕಚೇರಿಯನ್ನು ಕೆಲವೇ ದಿನಗಳಲ್ಲಿ ಆರಂಭಿಸುವುದಾಗಿ ತಿಳಿಸಿದರು.

ಉಭಯ ನಾಯಕರು ಮಾಹಿತಿ ತಂತ್ರಜ್ಞಾನ, ಶಿಕ್ಷಣ ಮತ್ತಿತರ ಕ್ಷೇತ್ರಗಳಲ್ಲಿ ಕರ್ನಾಟಕ ಮತ್ತು ಆಸ್ಟ್ರೇಲಿಯ ನಡುವಿನ ಬಾಂಧವ್ಯವನ್ನು ಬಲಪಡಿಸುವ ಕುರಿತು ಚರ್ಚಿಸಿದರು.

'ದೇಶದಲ್ಲಿ ಅತ್ಯಂತ ಮುಂಚೂಣಿಯಲ್ಲಿರುವ ರಾಜ್ಯ ಕರ್ನಾಟಕ. ತಂತ್ರಜ್ಞಾನ ಹಾಗೂ ಶಿಕ್ಷಣ ಕ್ಷೇತ್ರದಲ್ಲಿಯೂ ಮುನ್ನಡೆ ಸಾಧಿಸಿದೆ. ಆಸ್ಟ್ರೇಲಿಯಾ ದೊಂದಿಗೆ ವಿವಿಧ ಕ್ಷೇತ್ರಗಳಲ್ಲಿ ಸಹಭಾಗಿತ್ವ ಹೊಂದಲು ರಾಜ್ಯ ಉತ್ಸುಕವಾಗಿದೆ' ಎಂದು ಮುಖ್ಯಮಂತ್ರಿ ತಿಳಿಸಿದರು. ಆಸ್ಟ್ರೇಲಿಯನ್ ಕಾನ್ಸಲ್ ಜನರಲ್ ಸಾರಾ ಕಿರ್ಲೆವ್, ಸ್ಥಾಪನೆಯಾಗಲಿರುವ ಆಸ್ಟ್ರೇಲಿಯನ್ ಕಾನ್ಸುಲೇಟ್ ಜನರಲ್‌ನ ನಿಯೋಜಿತ ಡೆಪ್ಯುಟಿ ಕಾನ್ಸಲ್ ಜನರಲ್ ಹ್ಯೂಂಗ್ - ಮಿನ್ ಕಿಮ್, ರಾಜ್ಯದ ಐಟಿ ಬಿಟಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ. ರಮಣ ರೆಡ್ಡಿ ಇದ್ದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ಮಾಜಿ ಮೇಯರ್‌ಗಳ ಸಲಹೆ

ನಗರ ಅಭಿವೃದ್ಧಿಗೆ 'ತಜ್ಞರ ಕಾರ್ಯಪಡೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವೈಜ್ಞಾನಿಕ ಹಾಗೂ ಕ್ರಮಬದ್ಧ ಅಭಿವೃದ್ಧಿಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ನಗರ ತಜ್ಞರು, ಉದ್ಯಮಿಗಳು, ಎನ್‌ಜಿಒ, ಕಾರ್ಪೊರೇಟ್ ಸಂಸ್ಥೆ ಪ್ರತಿನಿಧಿಗಳ ನೆರವು ಪಡೆಯಲು 'ಕಾರ್ಯಪಡೆ' ರಚಿಸಲು ಮಾಜಿ ಮೇಯರ್‌ಗಳು ಸಲಹೆ ನೀಡಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗುರುವಾರ ಆಯೋಜಿಸಿದ್ದ ಮಾಜಿ ಮೇಯರ್‌ಗಳ ಸಭೆಯಲ್ಲಿ ಎಸ್‌.ಎಂ. ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದಾಗ ಬೆಂಗಳೂರು ಅಭಿವೃದ್ಧಿ ಯೋಜನೆಗಳಿಗಾಗಿ 'ಬೆಂಗಳೂರು ಅಜೆಂಡಾ ಕಾರ್ಯಪಡೆ'ಯನ್ನು ರಚಿಸಿದ್ದರು. ಅದೇ ರೀತಿಯಲ್ಲಿ ತಜ್ಞರ ಕಾರ್ಯಪಡೆ ರಚಿಸಬೇಕು. ದೇಶ ಹಾಗೂ ವಿದೇಶಗಳಲ್ಲಿ ಆಗುತ್ತಿರುವ ನಗರಗಳಲ್ಲಿನ ಅಭಿವೃದ್ಧಿ, ಕ್ರಿಯಾಯೋಜನೆಗಳ ಬಗ್ಗೆ ಮಾಹಿತಿ ಪಡೆದು ಇಲ್ಲೂ ಅನುಷ್ಠಾನಗೊಳಿಸುವುದು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

'ವಿಧಾನಸಭೆ ಕ್ಷೇತ್ರಗಳಲ್ಲಿ ಅಗತ್ಯ ಹಾಗೂ ತುರ್ತಾಗಿ ಆಗಬೇಕಾಗಿರುವ ಕಾಮಗಾರಿಗಳ ಬಗ್ಗೆ ಮಾಹಿತಿ ನೀಡಿ. ಅವುಗಳನ್ನು ಕೂಡಲೇ ಅನುಷ್ಠಾನಕ್ಕೆ ತರಲಾಗುವುದು' ಎಂದು ಶಿವಕುಮಾರ್ ತಿಳಿಸಿದ್ದಾರೆ.

'ಬೆಂಗಳೂರು ಅಭಿವೃದ್ಧಿ ವಿಚಾರವಾಗಿ ನಗರದ ಮಾಜಿ ಮೇಯರ್‌ಗಳ ಜತೆ ಸಭೆ ಮಾಡಿ ಅವರ ಅಭಿಪ್ರಾಯ, ಸಲಹೆಗಳನ್ನು ಪಡೆದಿದ್ದೇನೆ. ಅಭಿವೃದ್ಧಿಗಾಗಿ ಹೇಗೆ ಹಣ ಸಂಗ್ರಹ ಮಾಡಬಹುದು. ಎಲ್ಲಿ ಸೂಕ್ತವಾಗಿವೆ, ತ್ಯಾಜ್ಯ ನಿರ್ವಹಣೆ, ರಸ್ತೆಗಳಲ್ಲಿ ಕಸ ಹಾಕುತ್ತಿರುವವರ ಮೇಲಿನ ದಂಡದ ಬಗ್ಗೆ ಚರ್ಚೆ ಮಾಡಿದ್ದೇವೆ' ಎಂದು ಡಿಕೆಎಂ ಸುದ್ದಿಗಾರರಿಗೆ ಮಾಹಿತಿ ನೀಡಿದರು.

'ಕಸದ ವಾಹನ ಟ್ರ್ಯಾಕ್ ಮಾಡುವುದು, ಕಸವನ್ನು ಎಲ್ಲೆಂದರಲ್ಲಿ ಎಸೆಯುವ ವಾಹನಗಳಿಗೆ ಯಾವ ರೀತಿ ದಂಡ ವಿಧಿಸಬೇಕು. ಸ್ವಚ್ಛ ನಗರವನ್ನಾಗಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಿದ್ದೇವೆ. ಬಿಬಿಎಂಪಿ ಅಧಿಕಾರಿಗಳ ಜೊತೆಗೆ ಸಭೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಹೇಳಿದರು.

'ಬೆಂಗಳೂರು ನಗರದ ಸರ್ವಪಕ್ಷ ಶಾಸಕರ ಸಭೆಯನ್ನು ಸೋಮವಾರ (ಜೂನ್ 5ರಂದು) ಕರೆದಿದ್ದು, 28 ಶಾಸಕರಿಂದಲೂ ಸಲಹೆಗಳನ್ನು ಪಡೆಯುತ್ತೇನೆ. ನಂತರ ನಮ್ಮ ಪಕ್ಷದ ಶಾಸಕರ ಜತೆ ಪ್ರತ್ಯೇಕ ಸಭೆ ಮಾಡುತ್ತೇನೆ. ನಗರದ ಸಮಗ್ರ ಅಭಿವೃದ್ಧಿ ನಮ್ಮ ಉದ್ದೇಶ' ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಶಿವಕುಮಾರ್ ತಿಳಿಸಿದರು.

ಬಿಬಿಎಂಪಿ ವಾರ್ಡ್ ಮರು ವಿಂಗಡಣೆ, ಚುನಾವಣೆಗೆ ಸಂಬಂಧಿಸಿದಂತೆ ಈಗಾಗಲೇ ಸಮಿತಿ ರಚನೆ ಮಾಡಲಾಗಿದೆ. ಆ ಸಮಿತಿ ವರದಿ ನೀಡಿದ ಮೇಲೆ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಮ್ ಅಹ್ಮದ್, ಹಿರಿಯ ಮುಖಂಡ ಬಿ.ಎಲ್. ಶಂಕರ್, ಮಾಜಿ ಮೇಯರ್‌ಗಳಾದ ಜೆ. ಹುಚ್ಚಪ್ಪ, ರಾಮಚಂದ್ರಪ್ಪ, ಪದ್ಮಾವತಿ, ಪಿ.ಆರ್. ರಮೇಶ್, ವೆಂಕಟೇಶ ಮೂರ್ತಿ, ಸಂಪತ್ ರಾಜ್, ಮಂಜುನಾಥರೆಡ್ಡಿ, ಡಿಸಿಸಿ ಅಧ್ಯಕ್ಷ ಕೃಷ್ಣಪ್ಪ, ಬಿಬಿಎಂಪಿ ವಿರೋಧ ಪಕ್ಷದ ಮಾಜಿ ನಾಯಕ ಸತ್ಯನಾರಾಯಣ ಭಾಗವಹಿಸಿದ್ದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಾಜಿ ಮೇಯರ್‌ಗಳ ಜತೆ ಕೆಪಿಸಿಸಿ ಕಚೇರಿಯಲ್ಲಿ ಗುರುವಾರ ಸಮಾಲೋಚನೆ ನಡೆಸಿದರು

ತಿಮಿಂಗಿಲ ವಾಂತಿ ಮಾರಾಟ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರ ರಾಜ್ಯದಿಂದ ತಿಮಿಂಗಿಲ ವಾಂತಿ ಸಂಗ್ರಹಿಸಿ ತಂದು ನಗರದಲ್ಲಿ ಮಾರಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ತಿರುಚಿಯ ಸೆಲ್ವರಾಜ್ (34) ಹಾಗೂ ಹರಿಹರನ್ (24) ಬಂಧಿತರು. ಇವರಿಂದ 6.5 ಕೆ.ಜಿ ತೂಕದ ತಿಮಿಂಗಿಲ ವಾಂತಿ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಸುಗಂಧ ದ್ರವ್ಯ ತಯಾರಿಕೆಯಲ್ಲಿ ಈ ವಾಂತಿ ಬಳಸುವ ಮಾಹಿತಿ ಇದೆ. ಜೊತೆಗೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಬೆಲೆಯಿದೆ. ಇದೇ ಕಾರಣಕ್ಕೆ ಆರೋಪಿಗಳು, ವಾಂತಿಯನ್ನು ನಗರಕ್ಕೆ ಬಂದು ಮಾರಲು ಯತ್ನಿಸುತ್ತಿದ್ದರು.'

'ಆರೋಪಿಗಳ ಕೃತ್ಯದ ಬಗ್ಗೆ ಮಾಹಿತಿ ಲಭ್ಯವಾಗುತ್ತಿದ್ದಂತೆ, ವಿ.ವಿ.ಪುರ ಠಾಣೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಇಬ್ಬರನ್ನೂ ಬಂಧಿಸಿ, ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ' ಎಂದರು.

ಕ್ಷೀರ ಕ್ರಾಂತಿ

ವಿಶ್ವ ಹಾಲು ದಿನಾಚರಣೆ ಅಂಗವಾಗಿ ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್) ವತಿಯಿಂದ ಇಲ್ಲಿನ ರವೀಂದ್ರ ಕಲಾಕ್ಷೇತ್ರದಲ್ಲಿ 'ಕ್ಷೀರ ಕ್ರಾಂತಿ' ನಾಟಕವನ್ನು ಗುರುವಾರ ಪ್ರದರ್ಶಿಸಲಾಯಿತು -ಪ್ರಜಾವಾಣಿ ಚಿತ್ರ

ಎಟಿಎಂ ಕಾರ್ಡ್ ಬದಲಿಸಿ ವಂಚನೆ ಚಿಕಿತ್ಸೆಗೆ ಸಂಗ್ರಹಿಸಿದ್ದ ಹಣ ಡ್ರಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿದ್ವಾಯಿ ಆಸ್ಪತ್ರೆಗೆ ಚಿಕಿತ್ಸೆಗೆಂದು ಪತಿ ಜೊತೆ ಬಂದಿದ್ದ ಮಹಿಳೆಯೊಬ್ಬರ ಎಟಿಎಂ ಕಾರ್ಡ್ ಬದಲಿಸಿ ₹ 2 ಲಕ್ಷ ಡ್ರಾ ಮಾಡಿಕೊಂಡು ವಂಚಿಸಲಾಗಿದ್ದು, ಈ ಸಂಬಂಧ ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಪಶ್ಚಿಮ ಬಂಗಾಳದ ಮೀನಾ ಜೈಸ್ವಾಲ್ ಎಂಬುವವರ ಪತಿ ರೋಜನ್ ಅನ್ಸಾರಿ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ. ಚಿಕಿತ್ಸೆ ಕೊಡಿಸುವುದಕ್ಕಾಗಿ 2023ರ ಮಾರ್ಚ್ 15ರಂದು ಪತಿಯನ್ನು ಕಿದ್ವಾಯಿ ಆಸ್ಪತ್ರೆಗೆ ಸೇರಿಸಿದ್ದರು. ಚಿಕಿತ್ಸೆಗೆಂದು ಕೆನರಾ ಬ್ಯಾಂಕ್ ಖಾತೆಯಲ್ಲಿ ₹ 2 ಲಕ್ಷ ಸಂಗ್ರಹಿಸಿಟ್ಟುಕೊಂಡಿದ್ದರು' ಎಂದು ತಿಳಿಸಿದರು.

'ಎಟಿಎಂ ಬಳಕೆ ಮಾಡುವುದು ಹೇಗೆ ಎಂಬ ಮಾಹಿತಿ ಮಹಿಳೆಗೆ ಗೊತ್ತಿರಲಿಲ್ಲ. ಹಣದ ಅವಶ್ಯಕತೆ ಇದ್ದಾಗ, ಎಟಿಎಂ ಬಳಿ ಹೋಗಿ ಸ್ಥಳ ದಲ್ಲಿರುತ್ತಿದ್ದ ಜನರ ಸಹಾಯ ಪಡೆಯುತ್ತಿದ್ದರು. ಮೇ 2ರಂದು ಹಣ ಡ್ರಾ ಮಾಡಿಕೊಳ್ಳಲು ಸೋಮೇಶ್ವರನಗರದಲ್ಲಿ ಇರುವ ಕರ್ನಾಟಕ ಬ್ಯಾಂಕ್ ಎಟಿಎಂ ಘಟಕಕ್ಕೆ ಹೋಗಿದ್ದರು. ಅಲ್ಲಿದ್ದ ಆರೋಪಿ ಕೈಗೆ ಎಟಿಎಂ ಕಾರ್ಡ್ ನೀಡಿ, ಪಾಸ್‌ವರ್ಡ್ ಸಹ ತಿಳಿಸಿದ್ದರು.'

'ಎಟಿಎಂನಲ್ಲಿ ಹಣವಿಲ್ಲ. ಬೇರೆ ಕಡೆ ನೋಡಿ' ಎಂದಿದ್ದ ಆರೋಪಿ ಮಹಿಳೆ ನೀಡಿದ್ದ ಕಾರ್ಡ್ ಬಚ್ಚಿಟ್ಟುಕೊಂಡು, ಬೇರೊಂದು ಕಾರ್ಡ್ ನೀಡಿದ್ದ' ಎಂದು ಪೊಲೀಸರು ಹೇಳಿದರು.

'ಮೇ 4ರಂದು ಔಷಧ ಮಳಿಗೆಗೆ ಹೋಗಿದ್ದ ಮೀನಾ, ಎಟಿಎಂ ಕಾರ್ಡ್ ನೀಡಿದ್ದರು. ಸ್ವೈಪಿಂಗ್ ಉಪಕರಣದಲ್ಲಿ ಪರಿಶೀಲಿಸಿದಾಗ ಹಣ ಬಂದಿರಲಿಲ್ಲ. ಬಳಿಕ, ಕೆನರಾ ಬ್ಯಾಂಕ್ ಶಾಖೆಗೆ ಹೋಗಿ ವಿಚಾರಿಸಿದ್ದರು. ಆಗ ಕಾರ್ಡ್ ಆಕೆಯದ್ದಲ್ಲ ಎಂಬುದು ಗೊತ್ತಾಗಿದೆ. ಆಕೆಯ ಖಾತೆಯಲ್ಲಿದ್ದ ₹ 2 ಲಕ್ಷ ಡ್ರಾ ಆಗಿರುವುದಾಗಿ ಸಿಬ್ಬಂದಿ ಹೇಳಿದ್ದರು. ಬಳಿಕವೇ ಮಹಿಳೆ ಠಾಣೆಗೆ ದೂರು ನೀಡಿದ್ದಾರೆ' ಎಂದು ತಿಳಿಸಿದರು.

ಒಂಟಿ ಮಹಿಳೆಯ ಬರ್ಬರ ಹತ್ಯೆ

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ಜನತಾ ಕಾಲೊನಿಯಲ್ಲಿ ಒಂಟಿ ಮಹಿಳೆಯನ್ನು ರುಂಡ ಕತ್ತರಿಸಿ ಬರ್ಬರವಾಗಿ ಹತ್ಯೆ ಮಾಡಲಾಗಿದೆ.

ಮಹಿಳೆಯನ್ನು ಕೊಂದ ಹಂತಕರು ಕೈ, ಕಾಲು ಮತ್ತು ರುಂಡವನ್ನು ಕತ್ತರಿಸಿ ತಮ್ಮೊಂದಿಗೆ ಕೊಂಡೊಯ್ದಿದ್ದಾರೆ. ನಗ್ನ ಮುಂಡವನ್ನು ಮಾತ್ರ ಗೋಣಿ ಚೀಲದಲ್ಲಿಟ್ಟು ಹೋಗಿದ್ದಾರೆ.

ಹತ್ಯೆಯಾಗಿರುವ ಮಹಿಳೆಯನ್ನು ಖಾಸಗಿ ಕಂಪನಿಯೊಂದರಲ್ಲಿ ಹೌಸ್‌ಕೀಪಿಂಗ್ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದ ಗೀತಮ್ಮ ಎಂದು ಗುರುತಿಸಲಾಗಿದೆ. ಅವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದು ಅವರಿಗೆ ಮದುವೆಯಾಗಿ ಗಂಡನ ಜೊತೆ ವಾಸವಾಗಿದ್ದಾರೆ.

ಪತಿಯ ಸಾವಿನ ನಂತರ ಈಚೆಗೆ ಗೀತಮ್ಮ ಬನ್ನೇರುಘಟ್ಟದ ಜನತಾ ಕಾಲೊನಿಯಲ್ಲಿ ಒಬ್ಬಂಟಿಯಾಗಿ ವಾಸವಾಗಿದ್ದರು. ಒಂದು ಮನೆಯಲ್ಲಿ ತಾವು ವಾಸವಿದ್ದ ಗೀತಮ್ಮ, ಉಳಿದ ಎರಡು ಮನೆಗಳನ್ನು ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ ಬಿಹಾರದ ಯುವಕರಿಗೆ ಬಾಡಿಗೆ ನೀಡಿದ್ದರು.

ಗುರುವಾರ ಬೆಳಗ್ಗೆ ಮನೆಯ ಸುತ್ತಮುತ್ತ ಕೆಟ್ಟ ವಾಸನೆ ಹರಡಿತ್ತು. ಅಕ್ಕಪಕ್ಕದ ಮನೆಯವರು ಪರಿಶೀಲಿಸಿದಾಗ ಕೈ ಕಾಲು ರುಂಡವಿಲ್ಲದ ದೇಹ ಮಾತ್ರ ಪತ್ತೆಯಾಗಿದೆ.

ಬಾಡಿಗೆಗೆ ಇದ್ದ ಬಿಹಾರ ಮೂಲದ ಯುವಕರು ಈ ಕೃತ್ಯ ಎಸಗಿರಬಹುದು ಎಂದು ಶಂಕಿಸಲಾಗಿದೆ. ಅವರ ಫೋನ್ ಸ್ವಿಚ್‌ಆಫ್ ಆಗಿರುವುದು ಅನುಮಾನ ಮೂಡಿಸಿದೆ. ಎರಡು, ಮೂರು ದಿನಗಳ ಹಿಂದೆ ಈ ಕೃತ್ಯ ನಡೆದಿರುವ ಅನುಮಾನ ಇದೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳಕ್ಕೆ ವಿಧಿ ವಿಜ್ಞಾನ ಪ್ರಯೋಗಾಲಯ, ಶ್ವಾನದಳ, ಬೆರಳಚ್ಚು ತಜ್ಞರ ತಂಡ ಭೇಟಿ ನೀಡಿ ಪರಿಶೀಲಿಸಿದೆ.

ಘಟನಾ ಸ್ಥಳಕ್ಕೆ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಭೇಟಿ ನೀಡಿದ್ದರು.

ಸಿದ್ದರಾಮಯ್ಯಗೆ ಮಾಜಿ ಮುಖ್ಯಮಂತ್ರಿ ಬೊಮ್ಮಾಯಿ ಪತ್ರ

'ಅಭಿವೃದ್ಧಿ ಯೋಜನೆ ಕೈಬಿಡಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರ ಜಾರಿ ಮಾಡಿರುವ ಅಭಿವೃದ್ಧಿ ಯೋಜನೆಗಳನ್ನು ಯಾವುದೇ ಕಾರಣಕ್ಕೂ ಕೈಬಿಡಬಾರದು ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, ಗ್ಯಾರಂಟಿ ಯೋಜನೆಗಳಿಗೆ ₹50 ಸಾವಿರ ಕೋಟಿ ಅವಶ್ಯ ಇರುವುದರಿಂದ ಆರ್ಥಿಕ ಪರಿಸ್ಥಿತಿ ಬಿಗಡಾಯಿಸದಂತೆ ಮತ್ತು ಜನತೆಯ ಮೇಲೆ ಹೆಚ್ಚಿನ ಭಾರ ಬೀಳದಂತೆ ಎಚ್ಚರವಹಿಸಬೇಕು ಎಂದಿದ್ದಾರೆ.

ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಸಂದರ್ಭದಲ್ಲಿ ಎಚ್ಚರಿಕೆ ವಹಿಸಬೇಕು. ಮುಖ್ಯವಾಗಿ ಶಿಕ್ಷಣ, ಆರೋಗ್ಯ, ಮಹಿಳಾ ಅಭಿವೃದ್ಧಿ, ಮೂಲಸೌಕರ್ಯ, ರೈತರ, ದೀನದಲಿತರ ಮತ್ತು ಹಿಂದುಳಿದ ವರ್ಗಗಳ ಹಿತ ಕಾಪಾಡಬೇಕು ಎಂದು ತಿಳಿಸಿದ್ದಾರೆ.

ರೈತರಿಗೆ ನೀಡಲಾಗುವ ಬಡ್ಡಿರಹಿತ ಅಲ್ಪಾವಧಿ ಸಾಲದ ಮಿತಿಯನ್ನು ₹3 ಲಕ್ಷದಿಂದ ₹5 ಲಕ್ಷಕ್ಕೆ ಏರಿಸಲಾಗಿದೆ. ಇದರಲ್ಲಿ ಯಾವುದೇ ಹಣಕಾಸಿನ ಕಡಿತ ಮಾಡುವುದು ಸೂಕ್ತವಲ್ಲ. ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ ಆವರ್ತ ನಿಧಿ ₹3,500 ಕೋಟಿಗೆ ಹೆಚ್ಚಿಸಲು 2023-24ರ ಬಜೆಟ್‌ನಲ್ಲಿ ₹1,500 ಕೋಟಿ ಒದಗಿಸಲಾಗಿದೆ. ಇದು ಅತ್ಯಂತ ಅಗತ್ಯವಾಗಿದ್ದು, ಇದನ್ನು ಕಡಿತಗೊಳಿಸಬಾರದು ಎಂದು ಒತ್ತಾಯಿಸಿದ್ದಾರೆ.

'ವಿವೇಕ' ಯೋಜನೆಯಡಿ 7,601 ಶಾಲಾ ಕೊಠಡಿಗಳು ಹಾಗೂ ಇತರ ಯೋಜನೆ ಅಡಿಯಲ್ಲಿ ಸೇರಿ ಒಟ್ಟು 9,556 ಶಾಲಾ ಕೊಠಡಿಗಳ ನಿರ್ಮಾಣವನ್ನು ಪ್ರಸ್ತುತ ವರ್ಷ ಪೂರ್ಣಗೊಳಿಸುವ ಉದ್ದೇಶವಿತ್ತು. ಇದರಲ್ಲಿ ಅನುದಾನ ಕಡಿತ ಮಾಡಬಾರದು ಎಂದಿದ್ದಾರೆ.

ರೈತರು, ಕಾರ್ಮಿಕರು, ಮೀನುಗಾರರು, ನೇಕಾರರು ಇತರರಿಗೆ ರೈತ ವಿದ್ಯಾನಿಧಿ ಕಾರ್ಯಕ್ರಮ ಮುಂದುವರಿಸಬೇಕು. ಇದಕ್ಕೆ ಒದಗಿಸಿರುವ ಅನುದಾನ ಕಡಿತಗೊಳಿಸಬಾರದು. ಉಚಿತ ಡಯಾಲಿಸಿಸ್ ಸೇವೆ ಒಂದು ₹1ಲಕ್ಷ ಆವರ್ತನಕ್ಕೆ ವಿಸ್ತರಣೆ ಮಾಡಲಾಗಿದೆ. ಕ್ಯಾನ್ಸರ್ ಪೀಡಿತ ರೋಗಿಗಳಿಗೆ ಕಿಮೊ ಥೆರಪಿ ಆವರ್ತನವನ್ನು ಹೆಚ್ಚಿಸಬೇಕು. ಪಿಎಚ್‌ಸಿಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳಾಗಿ ಉನ್ನತೀಕರಣ ಮಾಡುವ ಯೋಜನೆಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸಬಾರದು ಎಂದು ಬೊಮ್ಮಾಯಿ ಒತ್ತಾಯಿಸಿದ್ದಾರೆ.

ಮಹಿಳೆಯರಿಗೆ ಸ್ತ್ರೀ ಸಾಮರ್ಥ್ಯ ಯೋಜನೆ, ಮಹಿಳಾ ಮತ್ತು ಮಕ್ಕಳ ಪೌಷ್ಟಿಕ ಆಹಾರ ಕಾರ್ಯಕ್ರಮಗಳು, ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ನೀಡಿದ ಹಾಸ್ಟೆಲ್‌ಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು, ಅದಕ್ಕೆ ಅನುದಾನ ಕಡಿತಗೊಳಿಸಬಾರದು ಎಂದು ಅವರು ಆಗ್ರಹಿಸಿದ್ದಾರೆ.

ಆರೋಪಿ ಬೆನ್ನಟ್ಟಿ ಹಿಡಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿಚಕ್ರ ವಾಹನ ಸವಾರರನ್ನು ಅಡ್ಡಗಟ್ಟಿ ಮಚ್ಚು ತೋರಿಸಿ ಸುಲಿಗೆ ಮಾಡಿ ಪರಾರಿಯಾಗುತ್ತಿದ್ದ ಆರೋಪಿಯೊಬ್ಬನನ್ನು ಉಪ್ಪಾರಪೇಟೆ ಸಂಚಾರ ಠಾಣೆ ಪೊಲೀಸರು ಬೆನ್ನಟ್ಟಿ ಹಿಡಿದಿದ್ದಾರೆ.

'ಅರಮನೆ ರಸ್ತೆಯಲ್ಲಿ ಗುರುವಾರ ಬೆಳಿಗ್ಗೆ 8.15ರ ಸುಮಾರಿಗೆ ದ್ವಿಚಕ್ರ ವಾಹನ ಅಡ್ಡಗಟ್ಟಿದ್ದ ಆರೋಪಿಗಳು, ಸವಾರರನ್ನು ಬೆದರಿಸಿ ₹ 10 ಸಾವಿರ ಸುಲಿಗೆ ಮಾಡಿದ್ದರು. ಸಹಾಯಕ್ಕಾಗಿ ಸವಾರರು ಕೂಗಾಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಘಟನಾ ಸ್ಥಳದ ಸಮೀಪದಲ್ಲಿ ಕರ್ತವ್ಯದಲ್ಲಿದ್ದ ಸಹಾಯಕ ಪೊಲೀಸ್ ಇನ್‌ಸ್ಪೆಕ್ಟರ್ ಕೆ.ಎಂ. ರವೀಂದ್ರ ಹಾಗೂ ಹೆಡ್ ಕಾನ್‌ಸ್ಟೆಬಲ್ ಲಕ್ಷ್ಮಣ, ಸವಾರರ ಬಳಿ ಹೋಗಿದ್ದರು. ಪರಾರಿಯಾಗುತ್ತಿದ್ದ ಆರೋಪಿಗಳನ್ನು ಬೆನ್ನಟ್ಟಿದ್ದರು. ಸ್ಥಳೀಯರ ಸಹಾಯದಿಂದ ಆರೋಪಿಯೊಬ್ಬನನ್ನು ಅಡ್ಡಗಟ್ಟಿ ಹಿಡಿದುಕೊಂಡರು. ನಂತರ, ಆರೋಪಿಯನ್ನು ಠಾಣೆಗೆ ಒಪ್ಪಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಸಂಚಾರ ಪೊಲೀಸರ ಕೆಲಸಕ್ಕೆ ಮೆಚ್ಚುಗೆ ವ್ಯಕ್ತಪಡಿಸಿರುವ ಜಂಟಿ ಕಮಿಷನರ್ ಎಂ.ಎನ್. ಅನುಚೇತ್, ರವೀಂದ್ರ ಹಾಗೂ ಲಕ್ಷ್ಮಣ ಅವರಿಗೆ ನಗದು ಬಹುಮಾನ ಹಾಗೂ ಪ್ರಶಂಸನಾ ಪತ್ರ ನೀಡಿ ಗೌರವಿಸಿದ್ದಾರೆ.

ದ್ವಿಚಕ್ರ ವಾಹನ ಸವಾರರನ್ನು ಸುಲಿಗೆ ಮಾಡಿ ಪರಾರಿಯಾಗುತ್ತಿದ್ದ ಆರೋಪಿಯೊಬ್ಬನನ್ನು ಸಂಚಾರ ಪೊಲೀಸರು ಹಾಗೂ ಸ್ಥಳೀಯರು ಬೆನ್ನಟ್ಟಿ ಹಿಡಿದರು

ದಶಪಥ ಹೆದ್ದಾರಿ: ಬೇಲಿಯೇ ನಾಪತ್ತೆ!

• ಎಂ.ಎನ್.ಯೋಗೇಶ್

ಮಂಡ್ಯ: ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್‌ವೇಯಲ್ಲಿ ನಡೆಯುತ್ತಿರುವ ಕಳ್ಳತನ ಪ್ರಕರಣಗಳು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಹಾಗೂ ಗುತ್ತಿಗೆದಾರರನ್ನು ಕಂಗೆಡಿಸಿವೆ. ಹೆದ್ದಾರಿಯ ಎರಡೂ ಬದಿಯಲ್ಲಿ ಅಳವಡಿಸಿರುವ ಕಬ್ಬಿಣದ ಬೇಲಿ ಸೇರಿದಂತೆ ಬೆಲೆ ಬಾಳುವ ಪರಿಕರ ಕದ್ದೊಯ್ದ ಪ್ರಕರಣಗಳು ವರದಿಯಾಗಿವೆ.

ಹೆದ್ದಾರಿ ಕಾಮಗಾರಿ ಆರಂಭವಾದ ಕಾಲದಿಂದಲೂ ವಸ್ತುಗಳ ಕಳ್ಳತನ ಪ್ರಕರಣಗಳು ವರದಿಯಾಗುತ್ತಲೇ ಇದ್ದು ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ ಪೊಲೀಸ್ ಠಾಣೆಗಳಲ್ಲಿ ಹಲವು ಪ್ರಕರಣಗಳು ದಾಖಲಾಗಿವೆ. ಇಲ್ಲಿಯವರೆಗೂ ಪೈಪ್, ಸರಳು, ಕಬ್ಬಿಣದ ಕಂಬ ಸೇರಿ ಇತರ ಪರಿಕರಗಳ ಕಳ್ಳತನ ಪ್ರಕರಣಗಳು ವರದಿಯಾಗಿದ್ದವು. ಈಗ ರಸ್ತೆ ಬದಿಯ ಬೇಲಿಯನ್ನೇ ಕದ್ದೊಯ್ಯುತ್ತಿರುವುದು ಪ್ರಾಧಿಕಾರದ ಅಧಿಕಾರದ ಅಧಿಕಾರಿಗಳಿಗೆ ತಲೆ ನೋವು ತರಿಸಿದೆ.

ರಸ್ತೆಯ ವಿವಿಧೆಡೆ ಕಟ್ಟರ್ ಯಂತ್ರ ಬಳಸಿ ಬೇಲಿ ಕತ್ತರಿಸಿ ಹಾಕಲಾಗಿದೆ, ಆರಂಭದಲ್ಲಿ ರಸ್ತೆ ದಾಟುವ ಉದ್ದೇಶದಿಂದ ಸ್ಥಳೀಯರೇ ಈ ರೀತಿ ಮಾಡಿರಬಹುದು ಎಂದು ಎಣಿಸಲಾಗಿತ್ತು. ಆದರೆ ಇದು ಕಳ್ಳರ ಕರಾಮತ್ತು ಎಂಬುದು ಇತ್ತೀಚೆಗೆ ಖಾತ್ರಿಯಾಗಿದೆ. ರಸ್ತೆಯ ಅಲ್ಲಲ್ಲಿ ಐದಾರು ಅಡಿಗಳವರೆಗೆ ಬೇಲಿ ಕತ್ತರಿಸಿ ಹಾಕಲಾಗಿದೆ, ಕಳ್ಳರು ಕಬ್ಬಿಣ ಕದ್ದೊಯ್ದು ಗುಜರಿಗಳಿಗೆ ಮಾರಾಟ ಮಾಡುತ್ತಿರುವ ವಿಷಯ ಬೆಳಕಿಗೆ ಬಂದಿದ್ದು ಅಧಿಕಾರಿಗಳು ಈ ಬಗ್ಗೆ ದೂರು ದಾಖಲಿಸಿದ್ದಾರೆ.

ಬಲ್ಬ್‌ಗಳ ಕಳ್ಳತನ: ಹೆದ್ದಾರಿ ಕೆಳಸೇತುವೆಯಲ್ಲಿ ಅಳವಡಿಸಲಾಗಿರುವ ಎಲ್‌ಇಡಿ ಬಲ್ಬ್‌ಗಳನ್ನೂ ಕಳ್ಳತನ ಮಾಡಿರುವ ಪ್ರಕರಣಗಳು ಬೆಳಕಿಗೆ ಬಂದಿವೆ.

ಪಿಡಿ ವರ್ಗಾವಣೆ, ಕಚೇರಿ ಸ್ಥಳಾಂತರ

ಬೆಂಗಳೂರು– ಮೈಸೂರು ದಶಪಥ ನಿರ್ಮಾಣ ಕಾಮಗಾರಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಶ್ರೀಧರ್ ವರ್ಗಾವಣೆಗೊಂಡಿದ್ದಾರೆ. ಅವರ ಜಾಗಕ್ಕೆ ಉತ್ತರ ಭಾರತ ಮೂಲದ ರಾಹುಲ್ ಎಂಬುವವರು ನೇಮಕಗೊಂಡಿದ್ದಾರೆ, ನೂತನ ಯೋಜನಾಧಿಕಾರಿ ಇನ್ನೂ ಅಧಿಕಾರ ವಹಿಸಿಕೊಂಡಿಲ್ಲ

ಈ ನಡುವೆ ರಾಮನಗರದಲ್ಲಿ ಇದ್ದ ಹೆದ್ದಾರಿ ಪ್ರಾಧಿಕಾರದ ಕಚೇರಿ ಮೈಸೂರಿಗೆ ಸ್ಥಳಾಂತರಗೊಳಿಸುವ ನಿರ್ಧಾರ ಹೊರಬಿದ್ದಿದೆ. ಕೆಂಗೇರಿಯಲ್ಲಿ ಶಾಖಾ ಕಚೇರಿ ಇರಲಿದ್ದು ಮುಖ್ಯ ಕಚೇರಿ ಮೈಸೂರು ನಗರಕ್ಕೆ ಸ್ಥಳಾಂತರಗೊಳ್ಳಲಿದೆ ಎಂದು ಪ್ರಾಧಿಕಾರದ ಮೂಲಗಳು ತಿಳಿಸಿವೆ.

ಕ್ಯಾಂಟೀನ್ ಬಳಿಯೇ ಬೇಲಿ ಕನ್ನ

ಬೇಲಿ ಕಬ್ಬಿಣ ಕಳ್ಳತನ ಒಂದೆಡೆಯಾದರೆ ಕ್ಯಾಂಟೀನ್, ಸಣ್ಣಪುಟ್ಟ ಹೋಟೆಗಳು ಇರುವೆಡೆ ಬೇಲಿಗೆ ಕನ್ನ ಹಾಕಿರುವ ಪ್ರಕರಣಗಳೂ ಇನ್ನೊಂದೆಡೆ ಬೆಳಕಿಗೆ ಬಂದಿವೆ. ಅಂಗಡಿ ಮಾಲೀಕರು ತಮ್ಮ ವ್ಯಾಪಾರ ವೃದ್ಧಿಸಿಕೊಳ್ಳಲು ಜನರು ಬರುವಂತೆ ಮಾಡಲು ಬೇಲಿಗಳಿಗೆ ಕನ್ನ ಹಾಕಿದ್ದಾರೆ ಎಂಬ ಆರೋಪವೂ ಕೇಳಿ ಬಂದಿದೆ.

ಗುತ್ತಿಗೆದಾರರು ನೀಡಿರುವ ದೂರಿನಲ್ಲಿ ಈ ಅಂಶವನ್ನೂ ಪ್ರಸ್ತಾಪ ಮಾಡಲಾಗಿದ್ದು ಅಂತಹ ಅಂಗಡಿ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಮಾಡಲಾಗಿದೆ.

ನಮ್ಮ ನಮ್ಮಲ್ಲೇ ಕಾದಾಟ: ಭಾಗವತ್ ವಿಷಾದ

ನಾಗ್ಪುರ (ಪಿಟಿಐ): 'ದೇಶದ ಗಡಿಯಲ್ಲಿರುವ ಶತ್ರುಗಳಿಗೆ ನಮ್ಮ ಶಕ್ತಿ ತೋರಿಸುವ ಬದಲು ನಮ್ಮ ನಮ್ಮಲ್ಲೇ ಕಾದಾಡುತ್ತಿದ್ದೇವೆ' ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಗುರುವಾರ ವಿಷಾದಿಸಿದ್ದಾರೆ.

ಇಲ್ಲಿ ನಡೆದ 'ಸಂಘ ಶಿಕ್ಷಾ ವರ್ಗ್'ದ (ಆರ್‌ಎಸ್‌ಎಸ್ ಕಾರ್ಯಕರ್ತರಿಗೆ ಅಧಿಕಾರಿಗಳ ತರಬೇತಿ ಶಿಬಿರ) ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತದ ಪ್ರತಿಯೊಬ್ಬ ನಾಗರಿಕ ದೇಶದ ಏಕತೆ ಮತ್ತು ಸಮಗ್ರತೆ ಹೆಚ್ಚಿಸಲು ಪ್ರಯತ್ನಿಸಬೇಕು ಎಂದರು.

ಸಮಾಜದಲ್ಲಿ ಧರ್ಮ ಮತ್ತು ಪಂಥಕ್ಕೆ ಸಂಬಂಧಿಸಿದ ಹಲವಾರು ಭಿನ್ನಾಭಿಪ್ರಾಯಗಳಿವೆ. ನಾವು ಒಂದೇ ದೇಶ ಎಂಬುದನ್ನು ಮರೆಯುತ್ತಿದ್ದೇವೆ ಎಂದರು.

ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಕೈದಿಯೊಬ್ಬರು ಅನಾರೋಗ್ಯದಿಂದ ಗಂಭೀರ ಪರಿಸ್ಥಿತಿಯಲ್ಲಿರುವ 75 ವರ್ಷದ ತಮ್ಮ ವೃದ್ಧ ತಾಯಿಯನ್ನು ಭೇಟಿ ಮಾಡಿ ಅವರ ಜೊತೆಗಿರಲು ಅವಕಾಶ ಕಲ್ಪಿಸಿರುವ ಹೈಕೋರ್ಟ್, 3 ವಾರಗಳ ಪೆರೋಲ್ ನೀಡಿ ಆದೇಶಿಸಿದೆ.

ಪೆರೋಲ್ ನೀಡಲು ನಿರಾಕರಿಸಿದ್ದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಬಯಲು ಬಂದಿಖಾನೆ ಅಧೀಕ್ಷಕರ ಕ್ರಮವನ್ನು ಪ್ರಶ್ನಿಸಿ ಕೈದಿ ಶಿವಪ್ಪ ಬೆಲ್ಲದ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಜನನಿ ಜನ್ಮಭೂಮಿಶ್ಚ; ಸ್ವರ್ಗಾದಪಿ ಗರೀಯಸಿ' ಎಂಬ ವಾಲ್ಮೀಕಿ ರಾಮಾಯಣದ ಶ್ಲೋಕವನ್ನು ಉಲ್ಲೇಖಿಸಿರುವ ನ್ಯಾಯಪೀಠವು, 'ಮರಣಶಯ್ಯೆಯಲ್ಲಿರುವ ತಾಯಿ ತನ್ನ ಮಗನನ್ನು ನೋಡಲು ಬಯಸುವ ಹಕ್ಕುಗಳನ್ನು ಹೊಂದಿರುವಂತೆಯೇ, ತಾಯಿಯನ್ನೂ ನೋಡುವ ಹಕ್ಕನ್ನು ಮಗ ಹೊಂದಿರುತ್ತಾನೆ' ಎಂದು ನ್ಯಾಯಪೀಠ ವ್ಯಾಖ್ಯಾನಿಸಿದೆ.

'ಸಾವಿನ ಅಂಚಿನಲ್ಲಿರುವ ತಾಯಿಯನ್ನು ಕಾಣಲು ಮಕ್ಕಳ ಹಂಬಲ ಮತ್ತು ಮಕ್ಕಳನ್ನು ನೋಡಲು ತಾಯಿ ವ್ಯಕ್ತಪಡಿಸುವ ಹಂಬಲ ನ್ಯಾಯ ಸಮ್ಮತವಾಗಿರುತ್ತದೆ. ಈ ಪ್ರಕರಣದಲ್ಲಿ ಅರ್ಜಿದಾರನಿಗೆ ತಾಯಿಯನ್ನು ಕಾಣುವ ಅವಕಾಶ ನಿರಾಕರಿಸಲು ನ್ಯಾಯಾಲಯಕ್ಕೆ ಯಾವುದೇ ಕಾರಣ ಕಂಡು ಬಂದಿಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಜಾಮೀನು ರದ್ದುಪಡಿಸಿದ ಆದೇಶ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಮಿನಲ್ ಪ್ರಕರಣವೊಂದರ ಆರೋಪದಲ್ಲಿ ಜಾಮೀನು ಪಡೆದಿದ್ದ ಹಿರಿಯ ನಾಗರಿಕರೊಬ್ಬರು, 'ಪೂರ್ವಾನುಮತಿ ಪಡೆಯದೇ ಮೊಮ್ಮಗಳಿಗೆ ತುರ್ತು ಚಿಕಿತ್ಸೆ ಕೊಡಿಸಲು ಇಂಗ್ಲೆಂಡ್‌ಗೆ ತೆರಳಿದ್ದಾರೆ' ಎಂಬ ಕಾರಣಕ್ಕೆ ಜಾಮೀನು ರದ್ದುಪಡಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ವಜಾಗೊಳಿಸಿದೆ.

ವಿಚಾರಣಾ ನ್ಯಾಯಾಲಯದ ಕ್ರಮವನ್ನು ಪ್ರಶ್ನಿಸಿ ಪದ್ಮನಾಭನಗರದ ನಿವಾಸಿ ಸರಿತಾ ಶರ್ಮಾ (60) ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ವಿಚಾರಣಾ ನ್ಯಾಯಾಲಯವು ಜಾಮೀನು ಮಂಜೂರು ಮಾಡಿದ್ದ ಆದೇಶ ರದ್ದುಪಡಿಸುವ ಮುನ್ನ ಜಾಮೀನಿಗೆ ಖಾತರಿ ನೀಡಿದವರಿಗೆ ನೋಟಿಸ್ ನೀಡಬೇಕಿತ್ತು. ನಂತರ ಮುಂದಿನ ಕಾನೂನು ಕ್ರಮ ಜರುಗಿಸಬೇಕಿತ್ತು' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಅರ್ಜಿದಾರರ ವಿರುದ್ಧದ ಜಾಮೀನು ರಹಿತ ವಾರೆಂಟ್ ಅನ್ನು ಅಮಾನತ್ತಿನಲ್ಲಿರಿಸಿದ ನ್ಯಾಯಪೀಠ, 'ಅರ್ಜಿದಾರರು ವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನು ರಹಿತ ವಾರೆಂಟ್ ಹಿಂಪಡೆಯಲು ಮನವಿ ಮಾಡಬೇಕು' ಎಂದು ನಿರ್ದೇಶಿಸಿದೆ. ಚಿಟ್‌ಫಂಡ್ ಪ್ರಕರಣವೊಂದರಲ್ಲಿ ಅರ್ಜಿದಾರರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿದೆ.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಕಂಪನಿ ಕಾರ್ಯಾಲಯ, ನವನಗರ, ಹುಬ್ಬಳ್ಳಿ–580 025.
ದೂರವಾಣಿ ಸಂಖ್ಯೆ: 0836-2223867
hescom.karnataka.gov.in
Email ID: gmadmhr.hescom@gmail.com
Corporate Identity Number (CIN): U31401KA2002SGC030437
ಕ್ರಮ ಸಂಖ್ಯೆ: ಹೆಚ್.ಸಿ.ಓ.–07/ಸಿ.–81/2017–18/3740 ದಿನಾಂಕ: 30–05–2023

ಪತ್ರಿಕಾ ಪ್ರಕಟಣೆ

"ಕಿರಿಯ ಇಂಜಿನಿಯರ್(ವಿ)" ಹುದ್ದೆಗೆ ಕಾಯ್ದಿರಿಸಿದ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸುವ ಕುರಿತು.

ಉಲ್ಲೇಖ: 1. ತಾತ್ಕಾಲಿಕ ಆಯ್ಕೆ ಪಟ್ಟಿ ಪತ್ರಿಕಾ ಪ್ರಕಟಣೆ ಪತ್ರ ಸಂಖ್ಯೆ: ಹೆಚ್.ಸಿ.ಓ.–07/ಸಿ–81/2017–18 ದಿನಾಂಕ: 23.03.2023
2. ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠದ ದಾವೇ ಸಂಖ್ಯೆ: 100972/2022ರ ಆದೇಶ ದಿನಾಂಕ: 01.02.2023
3. ಕವಿಪ್ರನಿನಿಯ ನೇಮಕಾತಿ ಅಧಿಸೂಚನೆ ಸಂಖ್ಯೆ: KPTCL/ B–16/ 40360/ 2016–17, ದಿನಾಂಕ: 08.09.2016

ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠದ ಸಂಖ್ಯೆ: 100972/2022ರ ಆದೇಶ ದಿನಾಂಕ: 01.02.2023ದಲ್ಲಿ, ದಿನಾಂಕ: 08.09.2016 ರ ನೇಮಕಾತಿ ಅಧಿಸೂಚನೆ ಸಂಖ್ಯೆ: KPTCL/ B-16/ 40360/ 2016–17 ರಲ್ಲಿ ಹುವಿಸಕಂನಿಯ ಕಿರಿಯ ಇಂಜಿನೀಯರ್(ವಿ) ಹುದ್ದೆಗೆ ಸಂಬಂಧಿಸಿದಂತೆ, ಕಾಯ್ದಿರಿಸಿದ ಅಂತಿಮ ಆಯ್ಕೆ ಪಟ್ಟಿಯನ್ನು ಹುವಿಸಕಂನಿಯ ಅಂತರ್ಜಾಲ https://hescom.karnataka.gov.in ನಲ್ಲಿ ಪ್ರಕಟಿಸಲಾಗಿದೆ. Contact No.: 0836–2223865, 2223867. (Only during Office hours) [ಕಛೇರಿ ವೇಳೆಯಲ್ಲಿ ಮಾತ್ರ 10:00 AM to 05:30 PM]

ಸಹಿ/–
ಪ್ರಧಾನ ವ್ಯವಸ್ಥಾಪಕರು
ವಾ.ಸಾ.ಇ/ಧಾ/35/2023–24/ದೇಶಪಾಂಡೆಪಬ್ಲಿಸಿಟಿ (ಆಡಳಿತ ಮತ್ತು ಮಾಸಂಅ) ಹುವಿಸಕಂನಿ, ಹುಬ್ಬಳ್ಳಿ.

I/1347846/2023
NATION TAX MARKET

Government of India
Ministry of Finance
Department of Revenue
OFFICE OF THE PRINCIPAL CHIEF COMMISSIONER OF CENTRAL TAX, BENGALURU ZONE P.B.NO.5400, C.R. BUILDING, QUEEN'S ROAD, BENGALURU-560001
Phone No.: 080-22867093 e-mail: bzpcco-legal@gov.in
C. No. GCCO/LGL/MISC/2/2020-LEGAL Dated: 01 /06/2023

Applications are invited from advocates practicing in the High Court for constitution of regular panel of counsels, consisting of Senior Standing Counsels and Junior Standing Counsels, to defend the cases relating to indirect taxation before the Hon'ble High Court of Karnataka (Bengaluru, Dharwad and Kalaburagi Benches) and for other judicial bodies. Qualification & experience required for each category of counsel, terms & conditions and format of application should be as per the guidelines issued by CBIC in D.O.F. No.278A/43/2007-Legal Dt.05.12.2007 which can be downloaded from www.cbic.gov.in or can be obtained from any GST or Customs Commissionerate of Bengaluru Zone including the office of the Pr.Chief Commissioner of Central Tax / Customs ,Bengaluru Zone, Bengaluru (**https://gstkarnataka.gov.in**).

Duly filled in application (Three copies) in Proforma A or A-1 (as applicable) along with requisite enclosures should be received in this office **within 3 weeks** of publication of this advertisement. Applications with incomplete/insufficient data or erroneous data are liable to be rejected and no further grievance/ correspondence would be entertained.

The envelope containing the application may be superscribed with the words **"Application for Renewal/ fresh appointment of Senior Standing Counsel /Junior Standing Counsel / Both"** and addressed to the Deputy/Assistant Commissioner (Legal), Office of the Pr.Chief Commissioner of Central Tax, C.R.Buildings, Queen's Road, Bengaluru-560 001. (Name of the co-ordinating Officer: Shri. D.Bhaskar, Superintendent, Legal Cell, PCCO, Central Tax Zone, Bengaluru)

Nadig Vishwas H S
Joint Commissioner (PCCO)
BENGALURU

Signed by
Nadig Vishwas H S
Date: 01-06-2023 12:08:34

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್,
ಬೆಂಗಳೂರು–560 001. ಕರ್ನಾಟಕ ರಾಜ್ಯ, ಭಾರತ.
ಫೋನ್: 25581383, 25589112, 25589113, ಫ್ಯಾಕ್ಸ್: 080–25586321
ಈ–ಮೇಲ್: ho@kspcb.gov.in ವೆಬ್‌ಸೈಟ್: https://kspcb.karnataka.gov.in
ಸಂಖ್ಯೆ: ಮಾನಿಮಂ/223/ಹಿಪಅ/ಗಣೆ/ಪಸಾಸ/2023–24/1042 ದಿನಾಂಕ: 01.06.2023

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಮೆ.ಶ್ರೀ ಸಾಯಿ ಸಪ್ತಗಿರಿ ಸ್ಪಾಂಜ್ ಪ್ರೈವೇಟ್ ಲಿಮಿಟೆಡ್, ರವರು ಸರ್ವೆ ನಂ. 83ಎ & 76, ಬೆಳಗಲ್ಲು ಗ್ರಾಮ, ಬಳ್ಳಾರಿ ತಾಲ್ಲೂಕು & ಜಿಲ್ಲೆಯಲ್ಲಿ ಒಟ್ಟು 32 ಎಕರೆ (12.95 ಹೆಕ್ಟೇರ್) (12 ಎಕರೆ (ಅಸ್ತಿತ್ವದಲ್ಲಿರುವ) + 20 ಎಕರೆ (ಹೆಚ್ಚುವರಿ) ಪ್ರದೇಶದಲ್ಲಿ ಸ್ಪಾಂಜ್ ಐರನ್ ಪ್ಲಾಂಟ್ 90,000 TPA (3 x 100 TPD), ಇಂಡಕ್ಷನ್ ಫರ್ನೇಸ್ 60,000 TPA (200 TPD), ರೋಲಿಂಗ್ ಮಿಲ್ 60,000 TPA (200 TPD) ಮತ್ತು 6 MW ಕ್ಯಾಪ್ಟಿವ್ ಪವರ್ ಪ್ಲಾಂಟ್ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ.
ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ: 14.09.2006ರ(ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಿಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರ Terms of Reference ಪತ್ರ ಸಂಖ್ಯೆ: F. No. J-11011/43/2014-IA.II (I) ದಿನಾಂಕ: 08.12.2020 ಮತ್ತು ಉದ್ದಿಮೆಯವರು ನೀಡಿದ ನಿವೇದನೆಯ ಪತ್ರದ ದಿನಾಂಕ: 13.03.2023 ಹಾಗೂ ಪ್ರಾದೇಶಿಕ ಅಧಿಕಾರಿ, ಬಳ್ಳಾರಿ, ಇವರ ಪತ್ರ ದಿನಾಂಕ: 20.05.2023 ದಲ್ಲಿ ಸೂಚಿಸಿದ ದಿನಾಂಕದಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕೆಳಕಂಡಂತಿವೆ.

1. ಕಂಪನಿಯ ಹೆಸರು ಮತ್ತು ವಿಳಾಸ: ಶ್ರೀ ರಾಮ ಕೃಷ್ಣ ಚೌದ್ರಿ, ನಿರ್ವಹಣೆ ನಿರ್ದೇಶಕರು ಮೆ. ಶ್ರೀ ಸಾಯಿ ಸಪ್ತಗಿರಿ ಸ್ಪಾಂಜ್ ಪ್ರೈವೇಟ್ ಲಿಮಿಟೆಡ್, 83ಎ & 76, ಬೆಳಗಲ್ಲು ಗ್ರಾಮ, ಬಳ್ಳಾರಿ ತಾಲ್ಲೂಕು & ಜಿಲ್ಲೆ, ಕರ್ನಾಟಕ.

2. ಉದ್ದೇಶಿತ ಯೋಜನೆಯ ಸ್ಥಳ : ಸರ್ವೆ ನಂ. 83ಎ & 76, ಬೆಳಗಲ್ಲು ಗ್ರಾಮ, ಬಳ್ಳಾರಿ ತಾಲ್ಲೂಕು & ಜಿಲ್ಲೆ, ಕರ್ನಾಟಕ.

3. ಉದ್ದೇಶಿತ ಯೋಜನೆಯ ವಿವರ: ಸ್ಪಾಂಜ್ ಐರನ್ ಪ್ಲಾಂಟ್ 90,000 TPA (3 x 100 TPD), ಇಂಡಕ್ಷನ್ ಫರ್ನೇಸ್ 60,000 TPA (200 TPD), ರೋಲಿಂಗ್ ಮಿಲ್ 60,000 TPA (200 TPD) ಮತ್ತು 6 MW ಕ್ಯಾಪ್ಟಿವ್ ಪವರ್ ಪ್ಲಾಂಟ್ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ.

4. ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ದಿನಾಂಕ : 03.07.2023 (ಸೋಮವಾರ), ಸಮಯ : ಬೆಳಗ್ಗೆ 11.00 ಗಂಟೆ. ಸ್ಥಳ : ಉದ್ದೇಶಿತ ಯೋಜನೆಯ ಸ್ಥಳ, ಬೆಳಗಲ್ಲು ಗ್ರಾಮ, ಬಳ್ಳಾರಿ ತಾಲ್ಲೂಕು & ಜಿಲ್ಲೆ, ಕರ್ನಾಟಕ.

5. ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ: ಅ) ಜಿಲ್ಲಾಧಿಕಾರಿಗಳ ಕಛೇರಿ, ಬಳ್ಳಾರಿ ಜಿಲ್ಲೆ, ಬಳ್ಳಾರಿ. ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಜಿಲ್ಲೆ, ಬಳ್ಳಾರಿ. ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ ಜಿಲ್ಲೆ, ಬಳ್ಳಾರಿ. ಈ) ತಹಶೀಲ್ದಾರರ ಕಾರ್ಯಾಲಯ, ಬಳ್ಳಾರಿ ತಾಲ್ಲೂಕು. ಉ) ಗ್ರಾಮ ಪಂಚಾಯತ್ ಕಾರ್ಯಾಲಯ, ಬೆಳಗಲ್ಲು. ಊ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ. ಋ) ಕೇಂದ್ರ ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560 034. ಎ) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಅಂತಸ್ತು, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು–560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್ : kspcb.gov.in ನಲ್ಲಿ ಪಡೆಯಬಹುದು.**

ಸಹಿ/–
ಸದಸ್ಯ ಕಾರ್ಯದರ್ಶಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನಕಾರಾತ್ಮಕ ಧೋರಣೆಯುಳ್ಳ ವ್ಯಕ್ತಿಗಳನ್ನು ನನ್ನ ಜೀವನದಿಂದ ಹೊರಗಿಡುತ್ತೇನೆ ಅಂದರೆ ಅವರನ್ನು ನಾನು ದ್ವೇಷಿಸುತ್ತೇನೆ ಎಂದರ್ಥವಲ್ಲ, ನನ್ನನ್ನು ನಾನು ಗೌರವಿಸುತ್ತೇನೆ ಎಂದರ್ಥ. **-ಮರ್ಲಿನ್ ಮನ್ರೊ**

ಜಿಡಿಪಿ ಬೆಳವಣಿಗೆ: ಎದ್ದುಕಾಣುವ ಸಾಧನೆ ಮುಂದಿದೆ ಬೇಡಿಕೆ ಹೆಚ್ಚಿಸುವ ಸವಾಲು

ಈ ವರ್ಷದ ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರವು ಶೇಕಡ 6.1ರಷ್ಟು ಆಗಿದೆ. 2022ರ ಡಿಸೆಂಬರ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ದರವು ಶೇ 4.5ರಷ್ಟು ಇತ್ತು. ಮಾರ್ಚ್ ತ್ರೈಮಾಸಿಕದಲ್ಲಿನ ಬೆಳವಣಿಗೆ ಪ್ರಮಾಣವು ನಿರೀಕ್ಷೆಗಿಂತ ಬಹಳ ಹೆಚ್ಚಿದೆ. ಅಲ್ಲದೆ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಅರ್ಥ ವ್ಯವಸ್ಥೆಯು ಉತ್ತಮ ಪ್ರಮಾಣದಲ್ಲಿ ಬೆಳವಣಿಗೆ ಕಾಣಲಿದೆ ಎಂಬ ಆಶಾಭಾವನೆಯನ್ನು ಮೂಡಿಸಿದೆ. 2022–23ನೆಯ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಪ್ರಮಾಣವು ಶೇ 7.2ರಷ್ಟು ಆಗಿದೆ ಎಂಬುದನ್ನು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಅಂಕಿ-ಅಂಶಗಳು ಹೇಳುತ್ತಿವೆ. ಇದು ಕೂಡ ನಿರೀಕ್ಷೆಗಿಂತ ತುಸು ಹೆಚ್ಚು. ಈ ಬೆಳವಣಿಗೆಯ ಕಾರಣದಿಂದಾಗಿ ಆರ್ಥಿಕ ಬೆಳವಣಿಗೆಯ ವಿಚಾರದಲ್ಲಿ ಭಾರತವು ಜಾಗತಿಕವಾಗಿ ಎದ್ದುಕಾಣುವಂತಹ ಸಾಧನೆ ತೋರಿದಂತಾಗಿದೆ. 2022–23ರ ಕೊನೆಯ ತ್ರೈಮಾಸಿಕದಲ್ಲಿ ದೇಶವು ಕಂಡ ಬೆಳವಣಿಗೆಯು ಇಡೀ ವರ್ಷದ ಜಿಡಿಪಿ ಬೆಳವಣಿಗೆಯನ್ನು ಹೆಚ್ಚಿನ ಮಟ್ಟಕ್ಕೆ ಒಯ್ದಿದೆ. ಅರ್ಥ ವ್ಯವಸ್ಥೆಯ ಬಹುತೇಕ ವಲಯಗಳಲ್ಲಿ ಏರಿಕೆ ದಾಖಲಾಗಿರುವುದನ್ನು ಅಂಕಿ-ಅಂಶಗಳು ತೋರಿಸುತ್ತಿವೆ. ಕೃಷಿ ವಲಯದಲ್ಲಿ ಶೇಕಡ 5.5ರಷ್ಟು ಬೆಳವಣಿಗೆ ದಾಖಲಾಗಿದೆ. ತಯಾರಿಕಾ ವಲಯದಲ್ಲಿ ಶೇ 4.5ರಷ್ಟು ಬೆಳವಣಿಗೆ ಕಂಡುಬಂದಿದೆ. ಈ ವಲಯದಲ್ಲಿ ಎರಡನೆಯ ಹಾಗೂ ಮೂರನೆಯ ತ್ರೈಮಾಸಿಕಗಳಲ್ಲಿ ಕುಸಿತ ದಾಖಲಾಗಿತ್ತು. ವ್ಯಾಪಾರ, ಹೋಟೆಲ್, ಸಾರಿಗೆ, ಸಂವಹನ ವಲಯದಲ್ಲಿ ಹೆಚ್ಚಿನ ಬೆಳವಣಿಗೆ ಆಗಿರುವುದು ಎದ್ದು ಕಾಣುವಂತೆ ಇದೆ. ನಿರ್ಮಾಣ ವಲಯ ಕೂಡ ದೊಡ್ಡ ಮಟ್ಟದಲ್ಲಿ ಬೆಳವಣಿಗೆ ಸಾಧಿಸಿದೆ.

ಈಗಿನ ಬೆಳವಣಿಗೆಯು ಪ್ರಸಕ್ತ ಆರ್ಥಿಕ ವರ್ಷದಲ್ಲಿಯೂ ಆಗುತ್ತದೆ ಎಂದು ನಿರೀಕ್ಷಿಸುವುದು, ರಾಜಕೀಯ ಲೆಕ್ಕಾಚಾರಗಳ ಆಧಾರದಲ್ಲಿ ಹೆಗ್ಗಳಿಕೆ ಪಡೆದುಕೊಳ್ಳಲು ಮುಂದಾಗುವುದು ಸರಿಯಲ್ಲ

2022–23ರಲ್ಲಿ ಆಗಿರುವಂತಹ ಬೆಳವಣಿಗೆಯು ಪ್ರಸಕ್ತ ಆರ್ಥಿಕ ವರ್ಷದಲ್ಲಿಯೂ (2023–24) ಆಗುತ್ತದೆ ಎಂದು ನಿರೀಕ್ಷಿಸುವುದು ಈ ಹಂತದಲ್ಲಿ ಸರಿಯಾಗಲಿಕ್ಕಿಲ್ಲ. ಅಲ್ಲದೆ, ಈಗ ದಾಖಲಾಗಿರುವ ಬೆಳವಣಿಗೆಗೆ ರಾಜಕೀಯ ಲೆಕ್ಕಾಚಾರಗಳ ಆಧಾರದಲ್ಲಿ ಹೆಗ್ಗಳಿಕೆ ಪಡೆದುಕೊಳ್ಳಲು ಮುಂದಾಗುವುದು ಕೂಡ ಈ ಹಂತದಲ್ಲಿ ಸರಿಯಲ್ಲ. ಇಡೀ ವರ್ಷದ ಬೆಳವಣಿಗೆ ಪ್ರಮಾಣದ ಮೇಲೆ ಮೊದಲ ಎರಡು ತ್ರೈಮಾಸಿಕಗಳಲ್ಲಿ ಆಗಿದ್ದ ಹೆಚ್ಚಿನ ಪ್ರಮಾಣದ ಬೆಳವಣಿಗೆಯ ಪ್ರಭಾವ ಜಾಸ್ತಿ ಇದೆ. ಮೊದಲ ಎರಡು ತ್ರೈಮಾಸಿಕಗಳಲ್ಲಿ ಬೆಳವಣಿಗೆ ಪ್ರಮಾಣವು ಹೆಚ್ಚಾಗಿದ್ದುದಕ್ಕೆ, ಆ ಎರಡು ತ್ರೈಮಾಸಿಕಗಳನ್ನು ಹೋಲಿಸಿ ನೋಡುವ ಮಟ್ಟ ಕಡಿಮೆ ಇದ್ದುದೂ ಒಂದು ಕಾರಣ ಎಂಬುದನ್ನು ಕಡೆಗಣಿಸಲಾಗದು. 2022–23ರ ದ್ವಿತೀಯಾರ್ಧದಲ್ಲಿ ಆಗಿರುವ ಜಿಡಿಪಿ ಬೆಳವಣಿಗೆಯು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಬೆಳವಣಿಗೆ ಯಾವ ಮಟ್ಟದಲ್ಲಿ ಆಗಬಹುದು ಎಂಬ ಬಗ್ಗೆ ಹೆಚ್ಚು ಸ್ಪಷ್ಟವಾದ ನೋಟವೊಂದನ್ನು ಕೊಡಬಲ್ಲದು. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಜಿಡಿಪಿ ಶೇ 6.5ರಷ್ಟು ಬೆಳವಣಿಗೆ ಕಾಣಬಹುದು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಂದಾಜು ಮಾಡಿದೆ. ಆದರೆ, ಹಲವು ಕಾರಣಗಳಿಂದಾಗಿ ಈ ಮಟ್ಟದ ಬೆಳವಣಿಗೆ ಕೂಡ ಕಷ್ಟಸಾಧ್ಯವಾಗಬಹುದು.

ಮಾರುಕಟ್ಟೆಯಲ್ಲಿ ಜನಸಾಮಾನ್ಯರಿಂದ ಬರುವ ಬೇಡಿಕೆಯ ಪ್ರಮಾಣವು ದೊಡ್ಡಮಟ್ಟದ ಬೆಳವಣಿಗೆ ಕಾಣದೇ ಇರುವುದು ಒಳ್ಳೆಯ ಸೂಚನೆ ಅಲ್ಲ. ನಾಲ್ಕನೆಯ ತ್ರೈಮಾಸಿಕದಲ್ಲಿ ಇದು ಶೇ 2.8ರಷ್ಟು ಮಾತ್ರ ಬೆಳವಣಿಗೆ ಕಂಡಿದೆ. ಇದು ಮೂರನೆಯ ತ್ರೈಮಾಸಿಕದಲ್ಲಿ ಶೇ 2.2ರಷ್ಟು ಏರಿಕೆ ದಾಖಲಿಸಿತ್ತು. ಹೆಚ್ಚಿನ ಬೆಳವಣಿಗೆ ಸಾಧ್ಯವಾಗಬೇಕು ಎಂದಾದರೆ ಬೇಡಿಕೆ ಹೆಚ್ಚಬೇಕಿರುವುದು ಅನಿವಾರ್ಯ. ಆದರೆ ಚಿಲ್ಲರೆ ಹಣದುಬ್ಬರವು ಆರ್‌ಬಿಐ ನಿಗದಿ ಮಾಡಿಕೊಂಡಿರುವ ಮಟ್ಟಕ್ಕೆ ಇನ್ನೂ ಇಳಿಕೆ ಆಗದಿರುವ ಕಾರಣ ಬೇಡಿಕೆಯು ಹೆಚ್ಚಾಗುತ್ತದೆ ಎಂದು ಖಚಿತವಾಗಿ ಹೇಳಲಾಗದು. ಚಿಲ್ಲರೆ ಹಣದುಬ್ಬರವು ಶೇ 5.2ರಷ್ಟು ಆಗಬಹುದು ಎಂದು ಆರ್‌ಬಿಐ ಅಂದಾಜಿಸಿದೆ. ಆದರೆ ಇದು ಸ್ವತಃ ಆರ್‌ಬಿಐ ನಿಗದಿ ಮಾಡಿಕೊಂಡಿರುವ ಶೇ 4ಕ್ಕಿಂತ ಹೆಚ್ಚು. ಹೀಗಾಗಿ, ಬಡ್ಡಿ ದರವನ್ನು ಕಡಿಮೆ ಮಾಡಿ, ಬೇಡಿಕೆ ಹೆಚ್ಚಿಸುವುದಕ್ಕೆ ಹೆಚ್ಚು ಅವಕಾಶಗಳು ಇದ್ದಂತಿಲ್ಲ. ಬಡ್ಡಿ ದರವು ಹೆಚ್ಚಿನ ಮಟ್ಟದಲ್ಲಿಯೇ ಉಳಿಯುವ ಸಾಧ್ಯತೆ ಇದೆ. ಆಗ ಸಾಲ ನೀಡಿಕೆ ಪ್ರಮಾಣ ಹೆಚ್ಚಾಗುವುದಕ್ಕೆ ಅವಕಾಶಗಳು ಕಡಿಮೆಯಾಗಿರುತ್ತವೆ. ಹೂಡಿಕೆಗಳು ಹಿಂದಿನ ವರ್ಷದಲ್ಲಿ ಏರಿಕೆ ಕಂಡಿದ್ದರೂ, ಅವು ಈ ವರ್ಷದಲ್ಲಿಯೂ ಅದೇ ಮಟ್ಟದಲ್ಲಿರುತ್ತವೆ ಎನ್ನಲಾಗದು. ಜಾಗತಿಕ ಅರ್ಥ ವ್ಯವಸ್ಥೆಯಲ್ಲಿನ ಮಂದಗತಿ ಮತ್ತು ಬಿಗಿ ಹಣಕಾಸಿನ ನಿಲುವು ವ್ಯಾಪಾರ ವಹಿವಾಟಿನ ಮೇಲೆ ಪರಿಣಾಮ ಬೀರಬಹುದು. ಮುಂಗಾರು ಮಳೆಯು ವಾಡಿಕೆಯಂತೆ ಸುರಿದರೆ ಗ್ರಾಮೀಣ ಪ್ರದೇಶಗಳಲ್ಲಿ ಚಟುವಟಿಕೆಗಳು ಗರಿಗೆದರುತ್ತವೆ. ಆದರೆ, ಮುಂಗಾರಿನಲ್ಲಿ ವ್ಯತ್ಯಾಸವಾದರೆ ಅದರ ಅಡ್ಡಪರಿಣಾಮಗಳು ಆರ್ಥಿಕತೆಗೆ ಪೆಟ್ಟು ಕೊಡುತ್ತವೆ.

ದಿನದ ಟ್ವೀಟ್

ಹೀಗಿದ್ದವು ಆ ದಿನಗಳು...

ಅಮ್ಮ ಹೊಲಿಗೆ ಬಿಚ್ಚಿ ಉದ್ದ ಮಾಡಿದ, ಅಪ್ಪ ಇಸ್ತ್ರಿ ಮಾಡಿಕೊಟ್ಟ ಉಡುಪು, ಅದೇ ಹಳೆಯ ಚೀಲದೊಳಗೆ ಹೊಸ ಅಂಗಿ ಹಾಕಿದ ಯಾರದೋ ಪುಸ್ತಕ, ಹಿಂದಿನ ದಿನವೇ ಉಜ್ಜಿ ಫಳಫಳಿಸುತ್ತಿರುವ ಗಂಬೂಟು, ಡಕ್‌ಬ್ಯಾಕ್ ರೈನ್‌ಕೋಟು, ಕಡ್ಡಿ ಸರಿ ಮಾಡಿದ ಕೊಡೆ, ಇಂದು ತಪ್ಪದೇ ಬರುತ್ತಿದ್ದ ಮಳೆ... ಕೊಡೆ ಇದ್ದರೂ ನೆನೆದೇ ಬರುತ್ತಿದ್ದ ನಾವು... #ಜೂನ್ 1 #ನೆನಪಾದ ನೆನಪುಗಳು.

ನಿವೇದಿತಾ ಪಾಂಡನ

ಕಿಡಿನುಡಿ

ಇದು ಒಂದು ಜೋಕ್ ಅಲ್ಲವೇ? ಸರ್ಕಾರಿ ಅಧಿಕಾರಿಗಳು ದರ್ಪಿಷ್ಟರಾಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಜಲಾಶಯದಿಂದ ನೀರನ್ನು ಹೊರ ತೆಗೆಯುವುದಕ್ಕೆ ಇನ್ನೂ ಹೆಚ್ಚಿನ ಹಣ ಖರ್ಚಾಗುತ್ತದೆ! ಛತ್ತೀಸಗಢದ ಜಲಾಶಯದಲ್ಲಿ ಬಿದ್ದುಹೋಗಿದ್ದ ತಮ್ಮ ಮೊಬೈಲ್ ಫೋನ್ ಅನ್ನು ಹೊರತೆಗೆಯುವ ಸಲುವಾಗಿ 41 ಲಕ್ಷ ಲೀಟರ್ ನೀರನ್ನು ಖಾಲಿ ಮಾಡಿದ ಅಧಿಕಾರಿಗೆ 53 ಸಾವಿರ ರೂಪಾಯಿ ದಂಡ ವಿಧಿಸಲಾಗಿದೆ.

ಸುಚೇತಾ ದಲಾಲ್, ಪತ್ರಕರ್ತೆ, ಲೇಖಕಿ

25 ವರ್ಷಗಳ ಹಿಂದೆ

ಮಂಗಳವಾರ, 2-6-1998

- **ಆದಾಯ ತೆರಿಗೆ ಮಿತಿ ಏರಿಕೆ: ಪೆಟ್ರೋಲ್ ದುಬಾರಿ**

ನವದೆಹಲಿ, ಜೂನ್ 1 (ಪಿಟಿಐ, ಯುಎನ್‌ಐ)– ಪೆಟ್ರೋಲ್, ಅಂಚೆಪತ್ರ, ಪಾರ್ಸೆಲ್ ಹಾಗೂ ಸಿಗರೇಟು ಇನ್ನಷ್ಟು ತುಟ್ಟಿ, ವೈಯಕ್ತಿಕ ವರಮಾನ ತೆರಿಗೆ ವಿನಾಯಿತಿ ಮಿತಿ ಅಲ್ಪ ಏರಿಕೆ, ಫ್ಲಾಪಿ, ಸಿ.ಡಿ. ರಾಂ ಹಾಗೂ ಡಿಸ್ಕ್‌ಗಳು ಅಗ್ಗ– ಇವುಗಳು ಹಣಕಾಸು ಸಚಿವ ಯಶವಂತ ಸಿನ್ಹಾ ಅವರು ಮಂಡಿಸಿದ ಪೂರ್ಣಾವಧಿ ಬಜೆಟ್‌ನ ಮುಖ್ಯಾಂಶಗಳು.

ಸಿನ್ಹಾ ಅವರು ಇಂದು ಮಂಡಿಸಿದ 1998–99ನೇ ಸಾಲಿನ ತಮ್ಮ ಪೂರ್ಣಾವಧಿ ಬಜೆಟ್‌ನಲ್ಲಿ ಸಂಪನ್ಮೂಲ ಖೋತಾ ತುಂಬಿಸಿಕೊಳ್ಳಲು ಪೆಟ್ರೋಲಿನ ಬೆಲೆಯನ್ನು ಲೀಟರಿಗೆ ಒಂದು ರೂಪಾಯಿ ಏರಿಸಿದ್ದಾರೆ. ವರಮಾನ ತೆರಿಗೆಯ ವಿನಾಯಿತಿ ಮಿತಿಯನ್ನು 40 ಸಾವಿರ ರೂ.ಗಳಿಂದ 50 ಸಾವಿರ ರೂ.ಗಳಿಗೆ ಏರಿಸಿದ್ದಲ್ಲದೆ ಸ್ಟ್ಯಾಂಡರ್ಡ್ ಡಿಡಕ್ಷನ್ ಮೊತ್ತವನ್ನು ಒಂದು ಲಕ್ಷದೊಳಗೆ ಸಂಬಳ ಪಡೆಯುತ್ತಿರುವವರಿಗೆ 20 ಸಾವಿರ ರೂ.ಗಳಿಂದ 25 ಸಾವಿರ ರೂ.ಗಳಿಗೆ ಏರಿಸಿದರು.

ಸಿಗರೇಟಿನ ತೆರಿಗೆಯನ್ನು ಏರಿಸಲಾಗಿದ್ದರೂ ಬೆಂಕಿಪೊಟ್ಟಣ ಅಗ್ಗವಾಗಲಿದೆ. ಸಿನಿಮಾ ಉದ್ಯಮ, ವೃತ್ತಪತ್ರಿಕೆಗಳಿಗೆ ಪರಿಹಾರ ನೀಡಲಾಗಿದೆ. ವರಮಾನ ಮಾಹಿತಿ ಸಲ್ಲಿಸುವ ವಿಧಾನವನ್ನು ಸರಳಗೊಳಿಸಿರುವುದು, ಪ್ರಾಮಾಣಿಕ ತೆರಿಗೆದಾರರಿಗೆ ಮನ್ನಣೆ ಹೊಸ ಬಜೆಟ್‌ನ ಇತರ ಮಹತ್ವದ ಅಂಶಗಳು.

50 ವರ್ಷಗಳ ಹಿಂದೆ

ಶನಿವಾರ, 2-6-1973

- **ಗದುಗಿನ ಗಿರಣಿಗೆ ಹಣ ಹೂಡಿಕೆ: ಕೃಷಿ ಸಚಿವರ ಸ್ಥಾನ ಪ್ರಭಾವ ಪ್ರಯೋಗ**

ಬೆಂಗಳೂರು, ಜೂನ್ 1– ಗದುಗಿನ ಸಹಕಾರಿ ಜವಳಿ ಗಿರಣಿಗೆ ಕೃಷಿ ಕೈಗಾರಿಕೆ ಕಾರ್ಪೊರೇಷನ್ನಿನಿಂದ ಬಂಡವಾಳ ಕೊಡಿಸಲು ಕೃಷಿ ಸಚಿವರು ತಮ್ಮ ಸ್ಥಾನ ಮತ್ತು ಅಧಿಕಾರದ ಪ್ರಭಾವ ಬಳಸಿದ್ದಾರೆಂದು, ಅದರ ಬಗ್ಗೆ ತನಿಖೆ ಮಾಡಿದ, ಸರ್ಕಾರಿ ಉದ್ಯಮಗಳಿಗೆ ಸಂಬಂಧಪಟ್ಟ ಸಮಿತಿ ತೀವ್ರ ಸ್ವರೂಪದ ಸ್ಪಷ್ಟ ತೀರ್ಮಾನ ನೀಡಿದೆ.

ಸಚಿವರು ಕಾರ್ಪೊರೇಷನ್ನಿನ ವಿವಿಧ ಅಧಿಕಾರಿಗಳ ಮೇಲೆ ಪ್ರಭಾವ ಬೀರಿರುವರೆಂಬುದು ಸಮಿತಿಯ ಅಭಿಪ್ರಾಯ.

ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಶ್ರೀ ಎಚ್.ಡಿ.ದೇವೇಗೌಡ ಮತ್ತು ಶ್ರೀ ಸಿ.ಎಂ.ಆರ್ಮುಗಂ ಅವರು ಕೃಷಿ ಸಚಿವ ಶ್ರೀ ಕೆ.ಎಚ್.ಪಾಟೀಲರ ಮೇಲೆ ಆಪಾದನೆ ಮಾಡಿದ ನಂತರ ಅಧ್ಯಕ್ಷರ ಸೂಚನೆ ಮೇರೆಗೆ ಸಮಿತಿಯು ಕೃಷಿ ಕೈಗಾರಿಕಾ ಕಾರ್ಪೊರೇಷನ್ನಿನ ವ್ಯವಹಾರ ತನಿಖೆ ಮಾಡಿತು.

- **ಸಕಲ ಗೌರವಗಳೊಡನೆ ಕುಮಾರ ಮಂಗಳಂ ಅವರ ಅಂತ್ಯಕ್ರಿಯೆ**

ನವದೆಹಲಿ, ಜೂನ್ 1– ಗುರುವಾರ ರಾತ್ರಿ ದೆಹಲಿ ಬಳಿ ವಿಮಾನ ದುರಂತದಲ್ಲಿ ಸಾವಿಗೀಡಾದ ಕೇಂದ್ರ ಉಕ್ಕು ಮತ್ತು ಗಣಿಗಳ ಸಚಿವ ಮೋಹನ ಕುಮಾರ ಮಂಗಳಂ ಅವರ ಪಾರ್ಥಿವ ದೇಹಕ್ಕೆ ಇಂದು ಸಂಜೆ ಯಮುನೆಯ ದಡದ ಮೇಲಿರುವ ವಿದ್ಯುತ್ ಚಿತಾಗಾರದಲ್ಲಿ ಸಕಲ ರಾಷ್ಟ್ರ ಗೌರವಗಳೊಡನೆ ಅಂತ್ಯಕ್ರಿಯೆ ನಡೆಸಲಾಯಿತು.

ದುರಹಂಕಾರದ ವಿರುದ್ಧ ಕೆಳ ವರ್ಗಗಳ ನಿಶ್ಶಬ್ದ ಸಮರವಾಗಿತ್ತು ಈ ಬಾರಿಯ ಚುನಾವಣೆ

ಕನ್ನಡಿಗರ ಆರ್ಥಿಕ ಸ್ಥಿತಿ ಹೇಗಿದೆ?

ವಿಶ್ಲೇಷಣೆ

ಕೃಷ್ಣ ಪ್ರಸಾದ್

ಕರ್ನಾಟಕದ ನಿಗದಿತ ಚುನಾವಣಾ ದಿನಾಂಕಕ್ಕೆ 10 ದಿನಗಳ ಹಿಂದಿನ ಮಾತು. ಅದು ಬೆಂಗಳೂರಿನಿಂದ ದೂರದಲ್ಲಿರುವ ವಿಧಾನಸಭಾ ಕ್ಷೇತ್ರ. ಅಭ್ಯರ್ಥಿಯೊಬ್ಬರು ನೇರವಾಗಿ ವಿಷಯಕ್ಕೆ ಬಂದರು: 'ಈ ಚುನಾವಣೆ ನಡೆಯುತ್ತಿರುವುದು ಜಾತಿ ಅಥವಾ ಧರ್ಮದ ಕುರಿತಾಗಿ ಅಲ್ಲ, ಬಡತನದ ಕುರಿತಾಗಿ. ಏರುತ್ತಿರುವ ದಿನಬಳಕೆ ವಸ್ತುಗಳ ಬೆಲೆಯಿಂದ ಕುಟುಂಬಗಳು ತತ್ತರಿಸುತ್ತಿವೆ. ಮನೆಯ ಹೆಂಗಸರು ವಾರಕ್ಕೆ ಎರಡು– ಮೂರು ಬಾರಿ ಉಪವಾಸ ಮಾಡುತ್ತಿದ್ದಾರೆ. ಕುಟುಂಬಗಳು ಸಾಲದ ಬಲೆಯಲ್ಲಿ ಸಿಕ್ಕಿಬಿದ್ದಿವೆ. ಬಡತನ ನಮ್ಮ ಮನೆಗಳನ್ನು ಮರುಪ್ರವೇಶಿಸುತ್ತಿದೆ'.

ಬರೀ 10 ವರ್ಷಗಳ ಹಿಂದೆ ಹಣದ ಹೊಳೆ ಹರಿಯುತ್ತಿದ್ದ ಆ ಕ್ಷೇತ್ರದಲ್ಲಿನ ಈ ಕರಾಳ ಕಥೆಯನ್ನು ಕೇಳಿದವರಿಗೆ, ಈ ಮಾತುಗಳಲ್ಲಿ ಕೊಂಚ ಅತಿಶಯೋಕ್ತಿ ಇದೆ ಅನ್ನಿಸಬಹುದು. ಆದರೆ 2023ರ ಚುನಾವಣೆಯ ಫಲಿತಾಂಶವನ್ನು ನೋಡಿದಾಗ, ಅದರ ಎಳೆಗಳನ್ನು ಬಿಚ್ಚಿ ನಿಕಷಕ್ಕೆ ಒಡ್ಡಿದಾಗ, ಆ ಜಯಶಾಲಿ ಅಭ್ಯರ್ಥಿಯ ಮಾತುಗಳನ್ನು ನೆನೆದಾಗ, ಹಾಗಿದ್ದರೆ ಕನ್ನಡಿಗರ ಆರ್ಥಿಕ ಸ್ಥಿತಿ ಹೇಗಿರಬಹುದು ಎಂಬ ದೊಡ್ಡ ಪ್ರಶ್ನೆ ಮೂಡುತ್ತದೆ. ಅಂದರೆ, ಈ ಪ್ರಶ್ನೆ ರಾಜ್ಯದ ಆರ್ಥಿಕ ಸ್ಥಿತಿಗೆ ಸಂಬಂಧಿಸಿದ್ದಲ್ಲ, ಅದರ ಪ್ರಜೆಗಳಿಗೆ, ಸಾಮಾನ್ಯ ಜನರಿಗೆ ಸಂಬಂಧಿಸಿದ್ದು.

ದೇಶದ 28 ರಾಜ್ಯಗಳ ಪೈಕಿ ಕರ್ನಾಟಕ ಉನ್ನತ ಸ್ಥಾನದಲ್ಲಿದೆ ಎಂದು ಅಂಕಿಅಂಶಗಳು ಹೇಳುತ್ತವೆ. ಮಹಾರಾಷ್ಟ್ರ, ಗುಜರಾತ್, ತಮಿಳುನಾಡಿನ ನಂತರ ದೇಶದ ನಾಲ್ಕನೇ ಶ್ರೀಮಂತ ರಾಜ್ಯವಾಗಿದ್ದು, ಅದರ ಬಜೆಟ್‌ನ ಗಾತ್ರ ₹ 3.10 ಲಕ್ಷ ಕೋಟಿ.

ದಕ್ಷಿಣ ಭಾರತದ ಐದು ರಾಜ್ಯಗಳ ಪೈಕಿ ಅದು ಹೊಂದಿರುವ (2021- 22) ತಲಾವಾರು ಅತಿ ಹೆಚ್ಚು ನೈಜ ಆದಾಯ ₹ 1,68,050. ದೇಶದ ಜಿಡಿಪಿಗೆ, ಅಂದರೆ ಒಟ್ಟು ಆಂತರಿಕ ಉತ್ಪನ್ನಕ್ಕೆ ಗುಜರಾತಿಗಿಂತ ಹೆಚ್ಚು ಕೊಡುಗೆ: ಶೇ 8.1ರಷ್ಟು. ಯಾವ ರಾಜ್ಯಕ್ಕೂ ಬರದಷ್ಟು ವಿದೇಶಿ ನೇರ ಹೂಡಿಕೆ (ಎಫ್‌ಡಿಐ): 22.07 ಬಿಲಿಯನ್ ಡಾಲರ್. ಅಂದರೆ ಅಂದಾಜು ₹ 1.81 ಲಕ್ಷ ಕೋಟಿ. ಮಹಾರಾಷ್ಟ್ರ ಹಾಗೂ ದೆಹಲಿಯ ನಂತರ ಅತಿ ಹೆಚ್ಚು ತೆರಿಗೆ ಪಾವತಿಸುವ ರಾಜ್ಯ: ಶೇ 12.

ಮೇಲ್ನೋಟಕ್ಕೆ ಸಿಹಿಯಾಗಿ ಕಾಣುವ ಅಂಕಿ ಅಂಶಗಳನ್ನು ಒಳಗೊಂಡ ಈ ಸಾಗರದಲ್ಲಿ ಬಡತನದ ದ್ವೀಪಗಳು- ಹಸಿವು, ಅಪೌಷ್ಟಿಕತೆ, ರೋಗ, ನಿರುದ್ಯೋಗ, ಋಣಭಾರ- ಹೇಗೆ ಅಡಗಿವೆ ಎಂಬುದಕ್ಕೆ ಈ ಬಾರಿಯ ಚುನಾವಣಾ ತೀರ್ಪೇ ಒಂದು ಪುಟ್ಟ ನಿದರ್ಶನ. ರಾಜ್ಯದಾದ್ಯಂತ ಮತಗಳು ಚಲಾವಣೆಯಾಗಿರುವ ರೀತಿಯನ್ನು ಗಮನಿಸಿದರೆ, ಈ ಚುನಾವಣೆ ನಡೆದದ್ದು ಬರೀ ಭ್ರಷ್ಟಾಚಾರ, ದುರಾಡಳಿತ, ಜಾತಿ, ಕೋಮುವಾದ, ಬೆಲೆ ಏರಿಕೆಯ ವಿರುದ್ಧ ಮಾತ್ರವಲ್ಲ, ಅದು ಒಂದು ರೀತಿಯಲ್ಲಿ ದುರಹಂಕಾರದ ವಿರುದ್ಧ ಕೆಳ ವರ್ಗಗಳ ನಿಶ್ಶಬ್ದ ಸಮರವಾಗಿತ್ತು ಎಂಬುದು ತಿಳಿದುಬರುತ್ತದೆ.

ಎರಡು ಪ್ರತಿಷ್ಠಿತ ಸಂಸ್ಥೆಗಳ ಸಮೀಕ್ಷೆಗಳಿಂದ ಇದು ನಮಗೆ ಹೆಚ್ಚು ಸ್ಪಷ್ಟವಾಗುತ್ತದೆ. ಸೆಂಟರ್ ಫಾರ್ ದಿ ಸ್ಟಡಿ ಆಫ್ ಡೆವಲಪಿಂಗ್ ಸೊಸೈಟೀಸ್ (ಸಿಎಸ್‌ಡಿಎಸ್) ನಡೆಸಿದ ಚುನಾವಣಾಪೂರ್ವ ಸಮೀಕ್ಷೆಯಲ್ಲಿ, ನಿರುದ್ಯೋಗದ (ಶೇ 28) ನಂತರ ಬಡತನ (ಶೇ 25) ಅತಿ ದೊಡ್ಡ ವಿಷಯವಾಗಿತ್ತು. ಇದಕ್ಕೆ ಪುರಾವೆ ಎಂಬಂತೆ, ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ಬಡವರಲ್ಲಿ ಅತಿ ಹೆಚ್ಚು ಅತೃಪ್ತಿ ಕಂಡುಬಂದಿತ್ತು (ಶೇ 67). ಶ್ರೀಮಂತರಲ್ಲಿ ಇದ್ದ ಅತೃಪ್ತಿಯ ಪ್ರಮಾಣ ಶೇ 49.

ಇದರ ಪರಿಣಾಮವು ಫಲಿತಾಂಶದಲ್ಲಿ ಗೋಚರಿಸುತ್ತದೆ. ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ) ಪ್ರಕಾರ, ವಾರ್ಷಿಕ ಆದಾಯ ₹ 1.4 ಲಕ್ಷಕ್ಕಿಂತ ಕೆಳಗಿರುವವರನ್ನು ಒಳಗೊಂಡ ಪ್ರದೇಶಗಳಲ್ಲಿ ಕಾಂಗ್ರೆಸ್ಸಿಗೆ ಹೆಚ್ಚು ಮತಗಳು ದೊರಕಿವೆ. ಇದಕ್ಕೆ ತದ್ವಿರುದ್ಧವಾಗಿ ಬಿಜೆಪಿಗೆ ಅಧಿಕ ಸಮರ್ಥನೆ ಸಿಕ್ಕಿರುವುದು ₹ 2.5 ಲಕ್ಷದಿಂದ ₹ 4 ಲಕ್ಷ ವಾರ್ಷಿಕ ಆದಾಯವಿರುವ ಭಾಗಗಳಿಂದ.

'ನಂ. 1' ರಾಜ್ಯದಲ್ಲಿ ಇಂತಹ ಇಬ್ಭಾಗವು ಹೇಗೆ ಸಾಧ್ಯವಾಯಿತು? ಅದು ಹೇಗೆ ಮೊದಲೇ ನಮ್ಮ ಕಣ್ಣು, ಕಿವಿಯನ್ನು ತಲುಪಲಿಲ್ಲ? ಮೂರೇ ಪದಗಳಲ್ಲಿ ಉತ್ತರ ಹೇಳಬೇಕೆಂದರೆ, ಬೆಂಗಳೂರು ನಗರವೊಂದೇ ಕರ್ನಾಟಕವಲ್ಲ. ರಾಜ್ಯವು ಮೇಲ್ನೋಟಕ್ಕೆ ಅಭಿವೃದ್ಧಿಯೆಡೆಗೆ ದೈತ್ಯಾಕಾರದ ದಾಪುಗಾಲುಗಳನ್ನು ಹಾಕುತ್ತಿದ್ದರೂ, ಇದು ಬಹುಪಾಲು ರಾಜಧಾನಿಗೆ ಸೀಮಿತ. ರಾಜ್ಯದಲ್ಲಿ ಬೆಳವಣಿಗೆ ಏಕರೂಪವಾಗಿಲ್ಲ. ಉತ್ತರ- ದಕ್ಷಿಣ ಎಂಬ ವಿಭಜನೆ ಇದೆ. ಕೆಲವು ಜಿಲ್ಲೆಗಳಲ್ಲಿನ ಬಡತನದ ಪ್ರಮಾಣವು ಉತ್ತರ ಮತ್ತು ಪೂರ್ವ ಭಾರತದ ಬಡ ರಾಜ್ಯಗಳಲ್ಲಿನ ಬಡತನದಷ್ಟೇ ಇದೆ.

ಇದು ಹಳೆಯ ಕಥೆಯಾದರೆ, ಹೊಸ ವಿಷಯ ಬೇರೆಯದೇ ಇದೆ. ಕೇಂದ್ರ ಸರ್ಕಾರದ ಯಾವುದೇ ಕಾರ್ಯಕ್ರಮಗಳಿಗೆ ನರೇಂದ್ರ ಮೋದಿ ಅವರು 'ಪ್ರಧಾನಮಂತ್ರಿ' ಹಣೆಪಟ್ಟಿ ಕಟ್ಟಿದರೂ ಜನರ ಸ್ಥಿತಿ ಹದಗೆಟ್ಟಿರುವುದು ಸುಳ್ಳಲ್ಲ. ಉದಾಹರಣೆಗೆ, 2022ರ ಒಳಗೆ ರೈತರ ಆದಾಯವನ್ನು ದ್ವಿಗುಣ ಮಾಡುವುದಾಗಿ ಮೋದಿ 2017ರಲ್ಲಿ ಘೋಷಿಸಿದ್ದರು. ಆದರೆ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಜಾನ್ ಡ್ರೆಜ್ ಅವರ ಪ್ರಕಾರ, ಹಿಂದಿನ 8 ವರ್ಷಗಳಲ್ಲಿ ಕೃಷಿ ಕಾರ್ಮಿಕರ ವೇತನ ಮೂಲದ ಆದಾಯ ಬರೀ ಶೇ 0.9ರಷ್ಟು ಹೆಚ್ಚಾಗಿದೆ. ಕೃಷಿಯೇತರ ಕಾರ್ಮಿಕರದು ಇನ್ನೂ ಕಡಿಮೆ, ಅಂದರೆ ಶೇ 0.2ರಷ್ಟು.



ಇನ್ನೊಂದೆಡೆ, ಉದ್ಯೋಗ ಅವಕಾಶಗಳ ಕೊರತೆ. ಮೋದಿ ಅವರು ಅಧಿಕಾರಕ್ಕೆ ಬಂದ ನಂತರ, ವರ್ಷಕ್ಕೆ ಎರಡು ಕೋಟಿ ಉದ್ಯೋಗಗಳನ್ನು ಸೃಷ್ಟಿಸುವ ಭರವಸೆಯನ್ನು ಕೊಟ್ಟರು. ಮಾಜಿ ಸಂಸದ ಪ್ರೊ. ರಾಜೀವ ಗೌಡ ಅವರ ಪ್ರಕಾರ, ಹಿಂದಿನ ಏಳು ವರ್ಷಗಳಲ್ಲಿ ಕರ್ನಾಟಕದ ಶೇ 21ರಷ್ಟು ಯುವಕರು ಉದ್ಯೋಗ ಕಳೆದುಕೊಂಡಿದ್ದಾರೆ. ಯುವಕರಲ್ಲಿ ನಿರುದ್ಯೋಗದ ಪ್ರಮಾಣ ಶೇ 22 ಮುಟ್ಟಿದೆ. ಅಂದರೆ ನಾಲ್ಕು ಮಂದಿಯಲ್ಲಿ ಒಬ್ಬರಿಗೆ ಉದ್ಯೋಗವಿಲ್ಲ. ಕನ್ನಡಿಗರ ದುಃಸ್ಥಿತಿಗೆ ಕನ್ನಡಿ ಹಿಡಿಯುವುದಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಬೇರೊಂದಿಲ್ಲ.

ವಸ್ತುಸ್ಥಿತಿ ಹೀಗಿರುವಾಗ, ಆಡಳಿತ ಪಕ್ಷದ ವಿರುದ್ಧ ಆಕ್ರೋಶದ ಅಲೆ ಏಳದೇ ಇರುತ್ತದೆಯೇ? ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಬಿಜೆಪಿಗೆ ಸಿಕ್ಕ ಬೆಂಬಲ ಐದು ವರ್ಷಗಳ ಹಿಂದೆ ಇದ್ದ ಶೇ 55ರಿಂದ ಶೇ 25ಕ್ಕೆ ಕುಸಿದಿತ್ತು. ಅಂದರೆ ಶೇ 30ರಷ್ಟು ಕಡಿಮೆಯಾಗಿತ್ತು. ನಗರ ಪ್ರದೇಶಗಳಲ್ಲಿ ಇಂತಹ ಕುಸಿತದ ಪ್ರಮಾಣ ಶೇ 7. ಸೆಂಟರ್ ಫಾರ್ ಪಾಲಿಸಿ ರಿಸರ್ಚ್ (ಸಿಪಿಆರ್) ತನ್ನ ಚುನಾವಣೋತ್ತರ ಸಮೀಕ್ಷೆಯಲ್ಲಿ ಉಪಗ್ರಹ ಚಿತ್ರಗಳನ್ನು ಬಳಸಿ ತೋರಿಸಿದ್ದು ಇದನ್ನೇ.

ಇಂತಹ ಸಮಸ್ಯೆಗಳಿಗೆ ಸಂಬಂಧಿಸಿ ಜನರಿಗೆ ಸಾಂತ್ವನ ನೀಡುವಂತಹ ಕಾರ್ಯಕ್ರಮಗಳನ್ನು ಆಯೋಜಿಸುವ ಬದಲು, ನಿರ್ಗತಿಕರು ಪಡೆಯುತ್ತಿದ್ದ ಸಣ್ಣಪುಟ್ಟ ಸೌಲಭ್ಯಗಳನ್ನೂ ಕಿತ್ತುಕೊಳ್ಳಲಾಯಿತು. ಕೊಡುತ್ತಿದ್ದ ಅಕ್ಕಿಯ ಪ್ರಮಾಣವನ್ನು ಕಡಿಮೆ ಮಾಡಿದ ಬಿಜೆಪಿ ರಾಜಕಾರಣಿಗಳು ಏನೋ ದೊಡ್ಡ ಸಾಧನೆ ಮಾಡಿದಂತೆ ಬೀಗಿದರು. ರಾಜ್ಯಕ್ಕೆ ಪ್ರಧಾನಿಯವರ ಒಂದು ದಿನದ ಭೇಟಿಗಾಗಿ 37 ಕೋಟಿ ರೂಪಾಯಿ ವೆಚ್ಚ ಮಾಡಿದ ಸರ್ಕಾರದ ಬಳಿ, ಇಂದಿರಾ ಕ್ಯಾಂಟೀನ್‌ಗಳನ್ನು ನಡೆಸಲು ಹಣ ಇರಲಿಲ್ಲ. 'ಅಸಮಾನತೆಗೆ ಕಾರಣ ಆರ್ಥಿಕ ಸ್ಥಿತಿಯಲ್ಲ, ಬದಲಾಗಿ ರಾಜಕೀಯ ಮತ್ತು ಸಿದ್ಧಾಂತ' ಎಂದು ಹೇಳುತ್ತಾರೆ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಥಾಮಸ್ ಪಿಕೆಟ್ಟಿ. ಈ ವಿಷಯದಲ್ಲಿ ಅವರ ಮಾತು ನೂರಕ್ಕೆ ನೂರು ಸತ್ಯವಾಗಿದೆ.

2004ರಲ್ಲಿ ವಾಜಪೇಯಿ ನೇತೃತ್ವದ ಸರ್ಕಾರವು ಸ್ವಯಂ ಸೃಷ್ಟಿಸಿದ ಸುಳ್ಳುಗಳನ್ನು ನಂಬಿ, 'ಇಂಡಿಯಾ ಶೈನಿಂಗ್' ಎಂಬ ಘೋಷವಾಕ್ಯವನ್ನು ಮುಂದಿಟ್ಟುಕೊಂಡು ಲೋಕಸಭಾ ಚುನಾವಣೆ ಎದುರಿಸಿತು. ಆದರೆ ಆ ಚುನಾವಣೆಯಲ್ಲಿ ಪಕ್ಷ ಸೋಲನುಭವಿಸಿತು. 2023ರಲ್ಲಿ 'ಕರ್ನಾಟಕ ಶೈನಿಂಗ್' ಎಂಬ ಘೋಷವಾಕ್ಯವು ರಾಜ್ಯದಲ್ಲಿ ಬಿಜೆಪಿಯನ್ನು ಅದೇ ಸ್ಥಿತಿಗೆ ತಲುಪಿಸಿದೆ. ಹೊಟ್ಟೆಗೆ ಹಿಟ್ಟಿಲ್ಲದಿದ್ದಾಗ ಹಿಜಾಬ್, ಹಲಾಲ್, ಎಕ್ಸ್‌ಪ್ರೆಸ್‌ವೇ, ಡಬಲ್ ಎಂಜಿನ್‌ನಂತಹ ವಿಷಯಗಳಿಂದ ಏನು ಪ್ರಯೋಜನ ಎಂಬ ಸಂದೇಶವನ್ನು ಬಡ ಕನ್ನಡಿಗರು ರವಾನಿಸಿದ್ದಾರೆ.

ಕರ್ನಾಟಕವೊಂದೇ ಅಲ್ಲ, ಇದಕ್ಕೂ ಮುನ್ನ ಪಶ್ಚಿಮ ಬಂಗಾಳ, ತಮಿಳುನಾಡು, ಮಹಾರಾಷ್ಟ್ರ, ಬಿಹಾರ, ದೆಹಲಿ... ಈ ಎಲ್ಲಾ ರಾಜ್ಯಗಳಲ್ಲಿ ಮೇಲ್ವರ್ಗದ ವಿದ್ಯಾವಂತ, ಶ್ರೀಮಂತರು ಟೊಳ್ಳು ಪ್ರಚಾರಕ್ಕೆ ಬಲಿಯಾದರೆ, ಕೆಳ ವರ್ಗದ ಮತದಾರರು ವಾಟ್ಸ್‌ಆ್ಯಪ್‌ನಿಂದ ದೂರ ಇದ್ದು, ದ್ವೇಷಭಕ್ತಿಯನ್ನು ತಿರಸ್ಕರಿಸಿ, ತಮ್ಮ ಹಕ್ಕಿಗಾಗಿ ಶ್ರಮಿಸಿದ್ದಾರೆ. 2023ರ ಫಲಿತಾಂಶವನ್ನು ನೋಡಿದಾಗ, ಕರ್ನಾಟಕದ ಪ್ರಜಾಪ್ರಭುತ್ವವನ್ನು ಯಾರು ಎತ್ತಿ ಹಿಡಿದಿದ್ದಾರೆ ಎಂಬುದು ನಿಸ್ಸಂಶಯವಾಗಿ ಸ್ಪಷ್ಟವಾಗುತ್ತದೆ.

ಚುರುಮುರಿ



ಟಿಕೆಟ್ ಮಾತ್ರ ಫ್ರೀ!

• ಗುರು ಪಿ.ಎಸ್.

'ರೀ... ಹೇಗಿದ್ರೂ ನನಗೀಗ ಬಸ್ ಜರ್ನಿ ಫ್ರೀ ಆಗ್ತಾ ಇದೆ ಅಲ್ವಾ, ತವರೂರಿಗೆ ಹೋಗಿ ಬರ್ತೀನಿ' ನಯವಾಗಿ ಅರ್ಜಿ ಹಾಕಿದಳು ಹೆಂಡತಿ.

ನನಗೂ ಒಳಗೊಳಗೆ ಖುಷಿ ಆಯ್ತು! 'ಹೋಗ್ ಬಾ, ನೀನೂ ಅಪ್ಪ, ಅಮ್ಮನ್ನ ನೋಡಿ ತುಂಬಾ ದಿನ ಆಯ್ತಲ್ಲ' ಕರುಣಾರಸದಲ್ಲಿ ಹೇಳಿದೆ.

'ಓಕೆ, ದುಡ್ಡು ಕೊಡಿ'.

'ದುಡ್ಡೇತಕ್ಕೆ, ಫ್ರೀ ಅಲ್ವಾ?'

'ಊರಿಂದ ಊರಿಗೆ ಹೋಗೋಕೆ ಫ್ರೀ... ಬಸ್‌ನಲ್ಲಿ ಏನಾದರೂ ತಿನ್ನಬೇಕಲ್ವ, ಜೊತೆಗೆ ಮಕ್ಕಳನ್ನೂ ಕರ್ಕೊಂಡು ಹೋಗ್ತೀನಿ, ಅವರಿಗೂ ಏನಾದರೂ ಕೊಡಿಸೋದು ಇರಲ್ವ...' ಹೇಳತೊಡಗಿದಳು ಪತ್ನಿ.

ಪಟ್ಟಿ ಇನ್ನೂ ಉದ್ದ ಆಗುವ ಭಯದಲ್ಲಿ, 'ಸಾಕ್ ಸಾಕು, ತಗೋ 500 ರೂಪಾಯಿ ಇಟ್ಕೊ' ಎಂದೆ.

'ಅಯ್ಯ, 500 ರೂಪಾಯಿ ಎಲ್ಲಿ ಸಾಕಾಗುತ್ತೆ, ತವರು ಮನೆಗೆ ಹೋಗುವಾಗ ಏನಾದರೂ ಸ್ವೀಟು, ಹಣ್ಣು ಹಂಪಲು ತಗೊಂಡು ಹೋಗೋದ್ ಬೇಡ್ವಾ?'

'ಆಯ್ತು, ಇನ್ನೊಂದು 500 ಇಟ್ಕೊ'.

'ನಮ್ಮ ಸಂಬಂಧಿಕರೆಲ್ಲ ಅಪ್ಪನ ಮನೆಗೆ ಬಂದಿರ್ತಾರೆ. ಅಲ್ಲಿ ಹಾಕ್ಕೊಳ್ಳೋಕೆ ಒಂದೊಳ್ಳೆ ಡ್ರೆಸ್ ಇಲ್ಲ ನಂಗೆ. ಹೊಸ ಡ್ರೆಸ್ ತಗೊಳ್ಳೋಕೆ ಎರಡು ಸಾವಿರ ರೂಪಾಯಿ ಆದ್ರೂ ಕೊಡ್ರೀ...'

300 ರೂಪಾಯಿ ಬಸ್ ಟಿಕೆಟ್ ಫ್ರೀ ಆಗಿ ತಗೊಂಡು 3 ಸಾವಿರ ರೂಪಾಯಿ ಟ್ಯಾಕ್ಸ್ ಹಾಕ್ತಿದಾಳಲ್ಲ ಎಂದು ಮನಸಲ್ಲೇ ಅಂದ್ಕೊಂಡು, 'ನೀನು ಊರಿಗೆ ಹೋಗೋದೇನ್ ಬೇಡ ಬಿಡು. ಉಚಿತ ಸೌಲಭ್ಯ ಇದೆ ಅಂತ ದುರುಪಯೋಗ ಮಾಡ್ಕೊಬಾರದು' ಎಂದು ಬೋಧಿಸಿದೆ.

'ಸರ್ಕಾರವೇ ಕೊಟ್ರೂ, ನೀವ್ ಓಡಾಡೋಕೆ ಬಿಡಲ್ವಲ್ರೀ. ಆಯ್ತು ಬಿಡಿ, ನಮ್ಮಮ್ಮ, ಅಕ್ಕ, ತಂಗೀನ ಇಲ್ಲಿಗೇ ಬರೋಕೆ ಹೇಳ್ತೀನಿ' ಬಾಣ ಬಿಟ್ಟಳು ಹೆಂಡತಿ.

'ತಗೋ, ಈ ಐದು ಸಾವಿರ ರೂಪಾಯಿ ಇಟ್ಕೊ. ನೀನೇ ಹೋಗಿ ಬಂದ್ಬಿಡು' ದುಡ್ಡು ಕೈಯಲ್ಲಿಟ್ಟು ಜಾಗ ಖಾಲಿ ಮಾಡಿದೆ.

ಸಂಗತ

ಧೂಮಪಾನ: ಮುದ್ದು ಪ್ರಾಣಿ ಒದ್ದಾಡೀತು

ತಂಬಾಕಿನಿಂದಾಗುವ ಹಾನಿಯ ಬಗ್ಗೆ ಬೆಳೆಗಾರರು ಮತ್ತು ಬಳಕೆದಾರರಲ್ಲಿ ನಿರಂತರವಾಗಿ ಅರಿವು ಮೂಡಿಸಬೇಕು

• ಡಾ. ಮುರಳೀಧರ ಕಿರಣಕೆರೆ

'ಡಾಕ್ಟ್ರೇ, ನಾಯಿಗೆ ಸಿಗರೇಟಿಂದ ತೊಂದ್ರೆ ಉಂಟಾ?' ಆ ಮಹಿಳೆಯ ಪ್ರಶ್ನೆ ಅರ್ಥವಾಗದೆ ಸುಮ್ಮನೆ ದಿಟ್ಟಿಸಿದೆ. 'ನಮ್ ಯಜಮಾನ್ರು ಸಿಕ್ಕಾಬಟ್ಟೆ ಸಿಗರೇಟ್ ಸೇದ್ತಾರೆ. ನಾಯಿ ಜೊತೆ ಆಡ್ತಾ ಆಡ್ತಾ ಧಮ್ ಎಳೆಯೋ ಚಾಳಿ. ಎಷ್ಟೇ ಹೇಳಿದ್ರೂ ಈ ದುರಭ್ಯಾಸ ಬಿಡಿಸೋಕೆ ಆಗ್ತಿಲ್ಲ. ಅವರ ಆರೋಗ್ಯವಂತೂ ಹಾಳಾಗುತ್ತೆ, ನಾಯಿಗೂ ಸಮಸ್ಯೆ ಆಗುತ್ತಾ?' ಆತಂಕದಿಂದ ಕೇಳಿದಳು.

ಪಶುವೈದ್ಯಕೀಯ ವೃತ್ತಿಯಲ್ಲಿ ಈ ತರಹದ ವಿಚಾರಣೆ ತುಂಬಾ ಅಪರೂಪ. 'ನಿಮ್ ನಾಯಿಗೆ ಕೆಮ್ಮು, ಉಬ್ಬಸದಂತಹ ಸಮಸ್ಯೆ ಕಾಣಿಸಿಕೊಳ್ತಿದ್ಯಾ?' ತಿರುಗಿ ಪ್ರಶ್ನಿಸಿದೆ. 'ಕೆಮ್ಮು ಅಂತ ಇಲ್ಲ, ಆದ್ರೆ ಇತ್ತೀಚೆಗೆ ಸ್ವಲ್ಪ ಓಡಾಡಿದ್ರೂ ಉಬ್ಬಸ ಬರುತ್ತೆ. ಆ ಟೈಮಲ್ಲಿ ಉಸಿರಾಡಕ್ಕೆ ಸ್ವಲ್ಪ ಒದ್ದಾಡುತ್ತೆ. ಅದಕ್ಕಿನ್ನೂ ಆರು ತಿಂಗಳು. ಇಷ್ಟು ಬೇಗ್ನೆ ಇಂಥದ್ದೊಂದು ಪ್ರಾಬ್ಲಂ ಶುರುವಾಗಿದೆ. ಇದಕ್ಕೂ ಸಿಗರೇಟಿಗೂ ಸಂಬಂಧ ಉಂಟಾ?' ಆಕೆಯ ಪ್ರಶ್ನೆಗೆ ಹೌದೆಂದು ತಲೆಯಾಡಿಸಿದೆ. ತಂಬಾಕು, ತಂಬಾಕಿನ ಹೊಗೆಯಿಂದ ಮುದ್ದು ಪ್ರಾಣಿಗಳ ಮೇಲಾಗುವ ದುಷ್ಪರಿಣಾಮಗಳನ್ನು ವಿವರಿಸಿದಾಗ, ಆ ಮಹಿಳೆಯ ಮೊಗದಲ್ಲಿ ಆತಂಕ, ಗಾಬರಿ ಎದ್ದು ಕಾಣಿಸುತ್ತಿತ್ತು!

ಧೂಮಪಾನದಿಂದ ಮಾನವನಿಗಷ್ಟೇ ಅಲ್ಲ, ಸಂಪರ್ಕಕ್ಕೆ ಬರುವ ಪ್ರಾಣಿಗಳಿಗೂ ಸಮಸ್ಯೆಯಾಗುತ್ತದೆ. ಬೀಡಿ, ಸಿಗರೇಟು, ಹುಕ್ಕಾಗಳ ಹೊಗೆ ಪಶುಗಳ ಆರೋಗ್ಯಕ್ಕೂ ಅನಾಹುತಕಾರಿ. ಧೂಮ ಸೇವನೆಯಿಂದ ಅಲರ್ಜಿ, ಕೆಮ್ಮು, ದಮ್ಮು, ಉಸಿರಾಟಕ್ಕೆ ತೊಂದರೆಯಾಗುವುದು, ಗಾಬರಿಗೊಳ್ಳುವುದು, ವರ್ತನೆಯಲ್ಲಿ ಬದಲಾವಣೆ, ಹಸಿವು ಮಂದವಾಗುವಂತಹ ಸಮಸ್ಯೆಗಳ ಜೊತೆಗೆ ದೀರ್ಘಕಾಲ ತಂಬಾಕಿನ ಹೊಗೆಗೆ ತೆರೆದುಕೊಂಡಾಗ ಶ್ವಾಸನಾಳದ ಉರಿಯೂತ, ಶ್ವಾಸಕೋಶದಲ್ಲಿ ತೀವ್ರ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಮುಂದೆ ಕ್ಯಾನ್ಸರ್‌ಗೂ ತಿರುಗುವ ಅಪಾಯವುಂಟು!

ಇನ್ನು ಬಳಸಿ ಎಸೆದ ಸಿಗರೇಟ್, ಬೀಡಿಯ ತುಂಡುಗಳು, ಬೂದಿ, ತಂಬಾಕಿನ ಉತ್ಪನ್ನಗಳನ್ನು ಪ್ರಾಣಿಗಳು ತಿಂದಾಗ ನಿಕೋಟಿನ್ ವಿಷಬಾಧೆ ಕಾಣಿಸಬಹುದು. ವಾಂತಿ, ಭೇದಿ, ಸೆಳೆತ, ಅಪಸ್ಮಾರದಂತಹ ಸಮಸ್ಯೆಗಳಲ್ಲದೆ ಸೂಕ್ಷ್ಮ ಪ್ರಾಣಿಗಳ ಜೀವಕ್ಕೂ ಅಪಾಯವಾಗಬಹುದು! ಹಾಗಾಗಿ ನಾಯಿ, ಬೆಕ್ಕಿನಂತಹ ಮುದ್ದು ಪ್ರಾಣಿಗಳು, ಪಕ್ಷಿಗಳು ತಂಬಾಕಿನ ಸಂಪರ್ಕಕ್ಕೆ ಬರದಂತೆ ನೋಡಿಕೊಳ್ಳುವುದು ಮಾಲೀಕರ ಜವಾಬ್ದಾರಿ. ಅದರಲ್ಲೂ ಧೂಮಪಾನಿಗಳು ತಮ್ಮ ಸಾಕುಪ್ರಾಣಿಗಳು ಈ ಹೊಗೆ ಸೇವಿಸದಂತೆ ಎಚ್ಚರ ವಹಿಸಬೇಕು.

ಒಳಾಂಗಣದಲ್ಲಿ ಧೂಮಪಾನ ಮಾಡಿದಾಗ ಬಹಳ ಹೊತ್ತಿನವರೆಗೂ ಹೊಗೆಯ ಕಣಗಳು ಗಾಳಿಯಲ್ಲಿ ತೇಲುತ್ತಿರುತ್ತವೆ. ಇವು ಮಕ್ಕಳು, ಮನೆಯ ಇತರ ಸದಸ್ಯರು, ಮುದ್ದು ಪ್ರಾಣಿಗಳ ಮೇಲೆ ಪರೋಕ್ಷ ಧೂಮಪಾನದ ರೂಪದಲ್ಲಿ ದುಷ್ಪರಿಣಾಮ ಬೀರುವುದರಿಂದ ಜಾಗ್ರತೆ ವಹಿಸುವುದು ಅತ್ಯಗತ್ಯ.

ಹೌದು, ಗುಟ್ಕಾ, ಖೈನಿ, ಕಡ್ಡಿಪುಡಿ, ಹೊಗೆಸೊಪ್ಪು, ನಶ್ಯ, ಬೀಡಿ, ಸಿಗರೇಟ್, ಸಿಗಾರ್, ಪೈಪ್, ಚುಟ್ಟಾ, ಹುಕ್ಕಾ ಎಂದೆಲ್ಲಾ ವಿವಿಧ ರೂಪದಲ್ಲಿರುವ ತಂಬಾಕು ಸೇವನೆ ಆ ವ್ಯಕ್ತಿಯ ಆರೋಗ್ಯಕ್ಕಷ್ಟೇ ಅಲ್ಲ, ಸಂಪರ್ಕಕ್ಕೆ ಬರುವ ಎಲ್ಲ ಜೀವಿಗಳಿಗೂ ಅಪಾಯಕಾರಿ. ಕೆಮ್ಮು, ಉಬ್ಬಸದಂತಹ ತೊಂದರೆಗಳಲ್ಲದೆ ತುಟಿ, ಬಾಯಿ, ಗಂಟಲು, ಅನ್ನನಾಳ, ಉದರ, ಶ್ವಾಸಕೋಶದ ಕ್ಯಾನ್ಸರ್, ರಕ್ತನಾಳಗಳಲ್ಲಿ ತಡೆ, ಹೃದಯಾಘಾತ, ಲಕ್ವ, ಮೂಳೆ ಸವೆತ, ದೃಷ್ಟಿ ಸಮಸ್ಯೆ, ಲೈಂಗಿಕ ದೌರ್ಬಲ್ಯ, ಕುಂಠಿತ ಫಲವತ್ತತೆ, ಗರ್ಭಪಾತ, ಕಡಿಮೆ ತೂಕದ ಶಿಶುಗಳ ಜನನ... ಕೆಡುಕುಗಳ ಪಟ್ಟಿ ತುಂಬಾ ಉದ್ದವಿದೆ.

ನಮ್ಮ ದೇಶವೊಂದರಲ್ಲೇ 30 ಕೋಟಿಗೂ ಅಧಿಕ ಜನ ಒಂದಲ್ಲ ಒಂದು ರೂಪದಲ್ಲಿ ತಂಬಾಕು ಬಳಸುತ್ತಿದ್ದಾರೆ. ಇದರ ಪ್ರತ್ಯಕ್ಷ, ಪರೋಕ್ಷ ಪರಿಣಾಮದಿಂದಾಗಿ ವರ್ಷಕ್ಕೆ 15 ಲಕ್ಷದಷ್ಟು ಸಾವುಗಳು ಸಂಭವಿಸುತ್ತಿವೆ ಎನ್ನುತ್ತಿದೆ ಅಂಕಿಅಂಶ. ಅಸಾಂಕ್ರಾಮಿಕ ಕಾಯಿಲೆಗಳು ಮತ್ತು ತತ್ಸಂಬಂಧದ ಸಾವುಗಳಲ್ಲಿ ಸಿಂಹಪಾಲು ಈ ಸೊಪ್ಪಿನ ಖಾತೆಯದ್ದೇ! ಹೊಗೆಸೊಪ್ಪಿನ ನಾಗಾಲೋಟದ ನಡುವೆಯೇ 'ನಮಗೆ ಆಹಾರ ಬೇಕು, ತಂಬಾಕು ಅಲ್ಲ' ಎಂಬ ಘೋಷಣೆಯೊಂದಿಗೆ 'ವಿಶ್ವ ತಂಬಾಕುರಹಿತ ದಿನ' (ಮೇ 31) ಆಚರಿಸಿದ್ದೇವೆ.

ತಂಬಾಕು ಕೃಷಿ ಕುರಿತಾದ ಕೃಷಿಕರ ಮನಃಸ್ಥಿತಿಯನ್ನು ಬದಲಾಯಿಸುವುದು ಪ್ರಮುಖ ಉದ್ದೇಶ. ನಮ್ಮಲ್ಲಿ ಅಂದಾಜು 4.5 ಲಕ್ಷ ಹೆಕ್ಟೇರ್‌ನಷ್ಟು ಕೃಷಿ ಭೂಮಿಯನ್ನು ಹೊಗೆಸೊಪ್ಪು ಬೆಳೆಯಲು ಬಳಸಲಾಗುತ್ತಿದೆ. ಆಹಾರ ಉತ್ಪಾದನೆಯ ಪ್ರದೇಶ ಕುಗ್ಗುತ್ತಿರುವ ಈ ಹೊತ್ತಿನಲ್ಲಿ, ತಂಬಾಕು ಬೆಳೆಗಾರರ ಮನವೊಲಿಸಿ ಅನ್ನದ ಬೆಳೆಗಳಿಗೆ ಹೊರಳಿಸುವತ್ತ ಪ್ರಯತ್ನಗಳು ಸಾಗಬೇಕಿದೆ.

ತಂಬಾಕು ಬೆಳೆಗೆ ಉಪಯೋಗಿಸುತ್ತಿರುವ ರಸಗೊಬ್ಬರ, ಕೀಟನಾಶಕಗಳಿಂದ ಪರಿಸರ ಕಲುಷಿತವಾಗುತ್ತಿದೆ. ದೊಡ್ಡ ಪ್ರಮಾಣದಲ್ಲಿ ನೀರೂ ಅಪವ್ಯಯವಾಗುತ್ತಿದೆ. ಬೆಳೆಯ ವಿಸ್ತರಣೆಗೆ ಅರಣ್ಯ ನಾಶವೂ ನಡೆದಿದೆ. ಇದಕ್ಕೆಲ್ಲಾ ತಡೆ ಹಾಕಿ ಆಹಾರಧಾನ್ಯಗಳ ಉತ್ಪಾದನೆಗೆ ಉತ್ತೇಜನ ನೀಡುವುದು ಸರ್ಕಾರದ ಆದ್ಯತೆಯಾಗಬೇಕು.

ತಂಬಾಕು ಉತ್ಪನ್ನಗಳ ಮೇಲಿನ ತೆರಿಗೆ ಆದಾಯಕ್ಕಿಂತಲೂ ಆರೋಗ್ಯಕ್ಕಾಗಿ ಖರ್ಚು ಮಾಡಬೇಕಾದ ಹಣದ ಹಿಸ್ಸೆಯೇ ದೊಡ್ಡದಿದೆ. ಅಕಾಲಿಕ ಸಾವು, ಅಂಗವೈಕಲ್ಯದಂತಹ ಮಾನವ ಸಂಪನ್ಮೂಲದ ನಷ್ಟವನ್ನು ಪರಿಗಣಿಸಿದಾಗ, ಆರೋಗ್ಯದ ಜೊತೆಗೆ ಆರ್ಥಿಕತೆಯ ಮೇಲಾಗುತ್ತಿರುವ ದುಷ್ಪರಿಣಾಮಗಳು ಢಾಳಾಗಿ ಕಾಣಿಸುತ್ತವೆ. ತಂಬಾಕಿನಿಂದಾಗುವ ಹಾನಿಯ ಬಗ್ಗೆ ಬೆಳೆಗಾರರು ಮತ್ತು ಬಳಕೆದಾರರಲ್ಲಿ ನಿರಂತರವಾಗಿ ಅರಿವು ಮೂಡಿಸುವುದು ಅಗತ್ಯ.

ವಾಚಕರ ವಾಣಿ

ಗ್ಯಾರಂಟಿ ಸೂತ್ರ: ವೈರುಧ್ಯದ ಹೇಳಿಕೆ

ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅನುಸರಿಸುತ್ತಿರುವ ಗ್ಯಾರಂಟಿ ಸೂತ್ರಗಳಿಂದಾಗಿ ಆರ್ಥಿಕತೆಗೆ ಪೆಟ್ಟು ಬೀಳಲಿದ್ದು, ದೇಶ ದಿವಾಳಿಯಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಎಚ್ಚರಿಸಿದ್ದಾರೆ. ವಿಪರ್ಯಾಸವೆಂದರೆ, ಕರ್ನಾಟಕದಲ್ಲಿ ಕಾಂಗ್ರೆಸ್ ನೀಡಿದ ಇಂತಹ ಗ್ಯಾರಂಟಿಗಳನ್ನು ತಕ್ಷಣ ಜಾರಿಗೊಳಿಸಬೇಕೆಂದು ರಾಜ್ಯ ಬಿಜೆಪಿ ನಾಯಕರೇ ಸರ್ಕಾರದ ಮೇಲೆ ಒತ್ತಡ ಹಾಕುತ್ತಿದ್ದಾರೆ! ಹಾಗಿದ್ದರೆ, ದೇಶ ದಿವಾಳಿಯಾಗಲಿ ಎಂಬುದು ಈ ನಾಯಕರ ಬಯಕೆಯೇ?

ಪಿ.ಜೆ.ರಾಘವೇಂದ್ರ, ಮೈಸೂರು

ಕೃಷಿ ಇಲಾಖೆ: ಖಾಲಿ ಹುದ್ದೆ ಶೀಘ್ರ ಭರ್ತಿಯಾಗಲಿ

ಕೃಷಿ ಇಲಾಖೆಯಲ್ಲಿ ಖಾಲಿ ಇರುವ ಶೇ 57ರಷ್ಟು ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಂಡಿರುವುದು (ಪ್ರ.ವಾ., ಮೇ 31) ಸ್ವಾಗತಾರ್ಹ. ಆದರೆ, ಇಷ್ಟು ದೊಡ್ಡ ಪ್ರಮಾಣದಲ್ಲಿ ಹುದ್ದೆಗಳು ಖಾಲಿ ಇದ್ದರೂ ಇದುವರೆಗೆ ಇಲಾಖೆಯನ್ನು ನಿಭಾಯಿಸಿಕೊಂಡು ಬಂದಿದ್ದಾದರೂ ಹೇಗೆ ಎಂಬುದೇ ಆಶ್ಚರ್ಯಕರ. ನಮ್ಮದು ಕೃಷಿ ಪ್ರಧಾನ ದೇಶ. ಕೃಷಿ ತಂತ್ರಜ್ಞಾನ ಮತ್ತು ಸರ್ಕಾರದ ಇತರ ಸೌಲಭ್ಯಗಳನ್ನು ಸಕಾಲದಲ್ಲಿ ಒದಗಿಸದೇ ರೈತನಿಗಾಗಿರುವ ನಷ್ಟವನ್ನು ತುಂಬುವುದು ಹೇಗೆ? ಇದರಿಂದ ಪರೋಕ್ಷವಾಗಿ ಬೆಳೆ ಉತ್ಪಾದನೆ ಕುಂಠಿತವಾದಂತಾಗಿ ಗ್ರಾಹಕರು ದುಬಾರಿ ಬೆಲೆ ತೆರುವಂಥ ಸ್ಥಿತಿ ನಿರ್ಮಾಣವಾಯಿತಲ್ಲವೇ?

ಕೃಷಿ ತಂತ್ರಜ್ಞಾನವನ್ನು ರೈತರ ಬಳಿಗೆ ತೆಗೆದುಕೊಂಡು ಹೋಗುವುದು ಕೃಷಿ ಇಲಾಖೆಯ ಜವಾಬ್ದಾರಿ. ಪ್ರತಿವರ್ಷ ಕೃಷಿ ಪದವೀಧರರು ಮತ್ತು ಸ್ನಾತಕೋತ್ತರ ಪದವೀಧರರು ಉದ್ಯೋಗ ಅರಸಿ ಕೃಷಿ ಇಲಾಖೆಗೆ ಅರ್ಜಿ ಸಲ್ಲಿಸಿ ವರ್ಷಾನುಗಟ್ಟಲೆ ಕಾಯುತ್ತಾರೆ. ಆದ್ದರಿಂದ, ಸರ್ಕಾರ ಮತ್ತಷ್ಟು ತಡ ಮಾಡದೆ, ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಶೀಘ್ರದಲ್ಲಿ ಭರ್ತಿ ಮಾಡಿಕೊಳ್ಳುವುದರ ಮೂಲಕ ಉತ್ತಮ ಮುಂಗಾರು ಬೆಳೆಗೆ ಸಜ್ಜಾಗುತ್ತಿರುವ ರೈತರ ಸಹಾಯಕ್ಕೆ ನಿಲ್ಲಬೇಕು. ಆಗ ಕೃಷಿ ಉತ್ಪಾದನೆಯೂ ಹೆಚ್ಚುತ್ತದೆ, ಗ್ರಾಹಕರಿಗೆ ಉತ್ಪನ್ನಗಳು ಕಡಿಮೆ ದರದಲ್ಲೂ ಲಭ್ಯವಾಗುತ್ತವೆ.

ಡಾ. ಡಿ.ರಾಜಗೋಪಾಲ್, ಬೆಂಗಳೂರು

'ಗ್ಯಾರಂಟಿ'ಗೆ ಬಳಕೆಯಾಗಲಿ ಭ್ರಷ್ಟರ ಹಣ!

ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳ ಜಾರಿಗೆ ಸಂಪನ್ಮೂಲ ಕ್ರೋಡೀಕರಿಸಲು ಬಹಳ ತಲೆ ಕೆಡಿಸಿಕೊಳ್ಳುತ್ತಿರುವುದು ಪತ್ರಿಕಾ ವರದಿಯಿಂದ (ಪ್ರ.ವಾ., ಜೂನ್ 1) ತಿಳಿದುಬರುತ್ತದೆ. ಅದೇ ರೀತಿ, ನಮ್ಮೆಲ್ಲರ ಸಂಪನ್ಮೂಲ ಎಲ್ಲಿ ಕ್ರೋಡೀಕರಣ ಆಗುತ್ತಿದೆ ಅನ್ನುವುದನ್ನು ಲೋಕಾಯುಕ್ತ ಬಲೆಗೆ ಬಿದ್ದ ಭ್ರಷ್ಟ ಅಧಿಕಾರಿಗಳಿಗೆ ಸಂಬಂಧಿಸಿದ, ಅದೇ ದಿನ ಪ್ರಕಟವಾಗಿರುವ ವರದಿ ನಮಗೆ ತಿಳಿಸುತ್ತದೆ.

ಭ್ರಷ್ಟರನ್ನು ಹಿಡಿದು ಅವರ ಎಲ್ಲಾ ಅಕ್ರಮ ಆಸ್ತಿಪಾಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಮಾರಿದರೆ, ಬರೀ ನಮ್ಮ ರಾಜ್ಯವೇನು, ರಾಷ್ಟ್ರಪೂರ್ತಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಬಹುದೇನೊ. ಈ ಬಗ್ಗೆ ಸುಗ್ರೀವಾಜ್ಞೆ ಜಾರಿಗೆ ತಂದು, ಭ್ರಷ್ಟರು ಕಾನೂನು ಕ್ರಮಗಳಿಂದ ತಪ್ಪಿಸಿಕೊಳ್ಳುವ ಅವಕಾಶ ಇಲ್ಲದಂತೆ ಮಾಡಬಹುದು.

ಶಾಂತವೀರ ಎಸ್., ಚಿತ್ರದುರ್ಗ

ಹವಾನಿಯಂತ್ರಿತ ಬಸ್: ಸಿಗಲಿ ರಿಯಾಯಿತಿ

ರಾಜ್ಯ ರಸ್ತೆ ಸಾರಿಗೆ ನಿಗಮಗಳ ಬಸ್ಸುಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಲು ಸರ್ಕಾರ ಮುಂದಾಗಿದೆ. ಆದರೆ, ಈ ಸೌಲಭ್ಯವು ಸಾಮಾನ್ಯ ಬಸ್‌ಗಳಲ್ಲಿ ಮಾತ್ರ ಲಭ್ಯವಿದ್ದು, ಹವಾನಿಯಂತ್ರಿತ ಬಸ್‌ಗಳಲ್ಲಿ ಇಲ್ಲ ಎಂಬ ವರದಿಗಳಿವೆ.

ಹವಾನಿಯಂತ್ರಿತ ಬಸ್ಸುಗಳು ಅನೇಕ ಕಡೆ ಖಾಲಿಯಾಗೇ ಓಡಾಡುತ್ತಾ ಸಾರಿಗೆ ನಿಗಮಗಳಿಗೆ ಬಿಳಿಯಾನೆಗಳಾಗಿರುವುದು ಗಮನಾರ್ಹ. ಹಾಗಾಗಿ, ಉಚಿತ ಪ್ರಯಾಣ ಯೋಜನೆಯಡಿ ಮಹಿಳೆಯರಿಗೆ ಹವಾನಿಯಂತ್ರಿತ ಬಸ್ಸುಗಳಲ್ಲಿ ಅರ್ಧ ಚಾರ್ಜು ಪಡೆದು ಪ್ರಯಾಣಕ್ಕೆ ಅನುವು ಮಾಡಿಕೊಡುವುದು ಒಳಿತು. ಇದರಿಂದ ನಿಗಮಗಳಿಗೆ ಒಂದಷ್ಟು ವರಮಾನವೂ ಬರುತ್ತದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಉಚಿತ ವಿದ್ಯುತ್ ವೈಜ್ಞಾನಿಕವೇ?

ಕಾಂಗ್ರೆಸ್ ಪಕ್ಷವು ಪ್ರತಿ ಮನೆಗೂ 200 ಯೂನಿಟ್ ವಿದ್ಯುತ್ ಉಚಿತವಾಗಿ ಕೊಡುವ ಸೌಲಭ್ಯವನ್ನು ವೈಜ್ಞಾನಿಕವಾಗಿ ಚಿಂತನೆ ನಡೆಸಿ ಘೋಷಿಸಿದೆಯೇ? ಕರ್ನಾಟಕದಲ್ಲಿ ಮಧ್ಯಮ ವರ್ಗದ ಕುಟುಂಬಗಳೇ ಹೆಚ್ಚಾಗಿದ್ದು, ಅಂತಹ ಮನೆಗಳಲ್ಲಿ ಒಂದಾದ ನಮ್ಮ ಮನೆಯ ವಿದ್ಯುತ್ ಬಳಕೆಯು ಬೇಸಿಗೆ ಕಾಲದ ತಿಂಗಳುಗಳೂ ಸೇರಿದಂತೆ ಈ ರೀತಿ ಇದೆ: ಐದು ಜನರಿರುವ ನಮ್ಮ ಮನೆಯಲ್ಲಿ ಟಿ.ವಿ, ಫ್ರಿಜ್, ಮೂರು ಫ್ಯಾನ್, ವಾಷಿಂಗ್ ಮಷೀನ್, 6 ಬಲ್ಬುಗಳು, ಚಾರ್ಜರ್ ಸ್ಕೂಟಿ, ಮಿಕ್ಸರ್, ಒಮ್ಮೊಮ್ಮೆ ಗ್ರೈಂಡರ್, ಮನೆ ಬಳಕೆಗಾಗಿ ಜೆರಾಕ್ಸ್ ಮಷೀನ್, ಇಸ್ತ್ರಿ ಪೆಟ್ಟಿಗೆ, ಮೂರು ಮೊಬೈಲ್‌ಗಳ ಚಾರ್ಜಿಂಗ್ ಮಾಡಲಾಗುತ್ತಿದೆ. ಇಷ್ಟಿದ್ದರೂ ನಮ್ಮ ಮನೆಯಲ್ಲಿ ಬಳಕೆಯಾದ ಯೂನಿಟ್‌ಗಳು ಡಿಸೆಂಬರ್‌ನಲ್ಲಿ 67, ಜನವರಿ 69, ಫೆಬ್ರುವರಿ 78, ಮಾರ್ಚ್ 85 ಹಾಗೂ ಏಪ್ರಿಲ್‌ನಲ್ಲಿ 97 ಯೂನಿಟ್.

ಅಕ್ಕಪಕ್ಕದ ರೈತ ಕುಟುಂಬದ ಮನೆಗಳ ವಿದ್ಯುತ್ ಬಿಲ್ ಪರಿಶೀಲಿಸಿದಾಗ, ಆ ಬಳಕೆಯು 60-70 ಯೂನಿಟ್‌ಗಳನ್ನು ಮೀರಿಲ್ಲದಿರುವುದು ಕಂಡುಬಂತು. ಹೀಗಿರುವಾಗ, ಉಚಿತವಾಗಿ 200 ಯೂನಿಟ್ ವಿದ್ಯುತ್ ಸಿಕ್ಕರೆ ಬೇಕಾಬಿಟ್ಟಿ ಬಳಸಲು ಶುರುವಿಟ್ಟುಕೊಳ್ಳಲಾಗುತ್ತದೆ. ಆಗ ವಿದ್ಯುತ್ ಉತ್ಪಾದನಾ ಘಟಕಗಳ ಮೇಲೆ ಒತ್ತಡ ಉಂಟಾಗುವುದಿಲ್ಲವೇ? 200ರ ಬದಲಿಗೆ 100 ಯೂನಿಟ್ ವಿದ್ಯುತ್ ಉಚಿತವಾಗಿ ನೀಡುವುದು ಸೂಕ್ತವಲ್ಲವೇ? ಈ ಕೊಡುಗೆ ಅವೈಜ್ಞಾನಿಕವಾಗಿದ್ದರೂ ಜವಾಬ್ದಾರಿಯುತ, ರಚನಾತ್ಮಕ ವಿರೋಧ ಪಕ್ಷಗಳೆಂದು ಹೇಳಿಕೊಳ್ಳುತ್ತಾ, ತಿದ್ದುವ ಕೆಲಸವನ್ನು ಮಾಡದೆ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡಿ, ಕೊಟ್ಟ ಮಾತಿನಂತೆ ನಡೆದುಕೊಳ್ಳಿ ಎಂದು ಸರ್ಕಾರವನ್ನು ಒತ್ತಾಯಿಸುತ್ತಿರುವುದರಲ್ಲಿ ರಾಜ್ಯದ ಹಿತದೃಷ್ಟಿ ಕಾಣುತ್ತಿಲ್ಲ!

ದಾಸೇಗೌಡ ಎಂ.ಆರ್., ಚಿತ್ರದುರ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೇಂದ್ರದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ

ವಿದ್ಯಾರ್ಥಿಗಳ ಆತ್ಮಹತ್ಯೆಗೆ ಕಾರಣವೇ ಗೊತ್ತಿಲ್ಲ

ಕೇಂದ್ರ ಸರ್ಕಾರದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ ನಿಯಂತ್ರಣಕ್ಕೆ ಬರುತ್ತಿಲ್ಲ. ಈ ವರ್ಷದ ಮೊದಲ ಮೂರು ತಿಂಗಳಲ್ಲೇ ಇಂತಹ ಶಿಕ್ಷಣ ಸಂಸ್ಥೆಗಳಲ್ಲಿ 15 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ, ವಿದ್ಯಾರ್ಥಿಗಳ ಆತ್ಮಹತ್ಯೆಗೆ ಕಾರಣಗಳೇನು ಎಂಬುದರ ಬಗ್ಗೆ ಸರ್ಕಾರದ ಬಳಿ ಮಾಹಿತಿ ಇಲ್ಲ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಆತ್ಮಹತ್ಯೆಗೂ ಕಾರಣ ಏನು ಎಂಬುದರ ಬಗ್ಗೆ ಸರ್ಕಾರದ ಬಳಿ ಮಾಹಿತಿ ಇಲ್ಲ

ಪ್ರಜಾವಾಣಿ ವಾರ್ತೆ

‘ನನ್ನ ಜಾತಿಯ ಬಗ್ಗೆ ಗೊತ್ತಾದ ನಂತರ ಸಹಪಾಠಿಗಳು ನನ್ನೊಂದಿಗೆ ವರ್ತಿಸುವ ರೀತಿ ಬದಲಾಯಿತು’ ಎಂದು ಮಗ ತಮ್ಮ ಬಳಿ ಹೇಳಿಕೊಂಡಿದ್ದ ಎಂದು ಆತನ ತಾಯಿ ಹೇಳಿದ್ದಾರೆ’.

ಐಐಟಿ ಬಾಂಬೆಯ ಮೊದಲ ವರ್ಷ ಬಿ.ಟೆಕ್ ಪದವಿ ವಿದ್ಯಾರ್ಥಿಯಾಗಿದ್ದ ದರ್ಶನ್ ಸೋಲಂಕಿ ಇದೇ ಫೆಬ್ರುವರಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಬೈ ಪೊಲೀಸರು ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿರುವ ಆರೋಪಪಟ್ಟಿಯಲ್ಲಿ ಇರುವ ಮಾಹಿತಿ ಇದು. ದರ್ಶನ್ ಸೋಲಂಕಿಯ ಸೋದರಿ ಮತ್ತು ಸಂಬಂಧಿಕರೂ ಪೊಲೀಸರಿಗೆ ಇದೇ ರೀತಿಯ ಮಾಹಿತಿ ಕೊಟ್ಟಿದ್ದಾರೆ. ಆರೋಪಪಟ್ಟಿಯಲ್ಲಿ ಅದನ್ನೂ ಉಲ್ಲೇಖಿಸಲಾಗಿದೆ.

ದರ್ಶನ್ ಸೋಲಂಕಿ ಆತ್ಮಹತ್ಯೆ ಮಾಡಿಕೊಂಡಾಗ ಅದು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿತ್ತು. ಈ ಸಂಬಂಧ ದೂರು ದಾಖಲಾಗಿತ್ತು. ಜಾತಿ ಆಧಾರಿತ ತಾರತಮ್ಯದ ಕಾರಣದಿಂದಲೇ ದರ್ಶನ್ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ದೂರಿನಲ್ಲಿ ವಿವರಿಸಲಾಗಿತ್ತು. ಈ ಸಂಬಂಧ ಒಬ್ಬ ವಿದ್ಯಾರ್ಥಿಯನ್ನು ಬಂಧಿಸಲಾಗಿತ್ತು ಮತ್ತು ಆತ ಈಗ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾನೆ. ದರ್ಶನ್ ಪ್ರಕರಣದ ಕಾರಣಕ್ಕೆ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳು ಚರ್ಚೆಯ ಮುನ್ನೆಲೆಗೆ ಬಂದಿದ್ದವು. ಹೀಗಾಗಿ ಕೆಲವು ಸಂಸದರು ಈ ಬಗ್ಗೆ ಸರ್ಕಾರವನ್ನು ಸಂಸತ್ತಿನಲ್ಲಿ ಪ್ರಶ್ನಿಸಿದ್ದರು.

ಕನ್ನಡಿಗ, ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ ಅವರು ಈ ಬಗ್ಗೆ ಪ್ರಶ್ನೆ ಕೇಳಿದ್ದರು. ಆಗ ಶಿಕ್ಷಣ ಸಚಿವಾಲಯದ ರಾಜ್ಯಖಾತೆ ಸಚಿವ ಸುಭಾಷ್ ಸರ್ಕಾರ್ ಮಾಹಿತಿ ನೀಡಿದ್ದರು. ಅವರು ನೀಡಿದ ಮಾಹಿತಿಯಲ್ಲಿ, 2018ರಿಂದ 2023ರ ಮಾರ್ಚ್‌ವರೆಗೆ ಎಷ್ಟು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ವಿವರವಷ್ಟೇ ಇತ್ತು. ಹೀಗೆ ಆತ್ಮಹತ್ಯೆ ಮಾಡಿಕೊಂಡವರಲ್ಲಿ ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಎಂಬುದರ ಮಾಹಿತಿ ಇರಲಿಲ್ಲ.

ಲೋಕಸಭೆಯಲ್ಲೂ ಈ ಬಗ್ಗೆ ಒಡಿಶಾ ಸಂಸದ ಬೆನ್ನಿ ಬೆಹ್ನಾನ್ ಪ್ರಶ್ನಿಸಿದ್ದರು. ಬೆಹ್ನಾನ್ ತಮ್ಮ ಪ್ರಶ್ನೆಯಲ್ಲಿ, ‘ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಬಗ್ಗೆ ಸರ್ಕಾರಕ್ಕೆ ಅರಿವಿದೆಯೇ’ ಎಂದು ಕೇಳಿದ್ದರು. ಇದಕ್ಕೆ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಲಿಖಿತ ಉತ್ತರ ನೀಡಿದ್ದರು. 2018ರಿಂದ 2023ರ ಮಾರ್ಚ್ ಅಂತ್ಯದವರೆಗೆ ಎಷ್ಟು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಉತ್ತರವನ್ನಷ್ಟೇ ನೀಡಿದ್ದರು. ಆದರೆ, ವಿದ್ಯಾರ್ಥಿಗಳ ಆತ್ಮಹತ್ಯೆಗೆ ನಿಖರ ಕಾರಣಗಳೇನು ಎಂಬುದರ ಬಗ್ಗೆ ಆ ಉತ್ತರದಲ್ಲಿ ಮಾಹಿತಿ ಇಲ್ಲ. ಜತೆಗೆ ಆತ್ಮಹತ್ಯೆ ಮಾಡಿಕೊಂಡವರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಎಂಬುದರ ಮಾಹಿತಿಯೂ ಆ ಉತ್ತರದಲ್ಲಿ ಇರಲಿಲ್ಲ (2021ರಲ್ಲಿ ಧರ್ಮೇಂದ್ರ ಪ್ರಧಾನ್ ಅವರೇ ನೀಡಿದ್ದ ಉತ್ತರದಲ್ಲಿ ಈ ಮಾಹಿತಿ ಇತ್ತು).

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ಸಿದ್ಧಪಡಿಸುವ ‘ಭಾರತದಲ್ಲಿ ಅಪಘಾತ ಮತ್ತು ಆತ್ಮಹತ್ಯಾ ಸಾವುಗಳು’ ವರದಿಯಲ್ಲೂ ಈ ಬಗೆಯ ವರ್ಗೀಕರಣ ಇಲ್ಲ. ದರ್ಶನ್ ಸೋಲಂಕಿ ಆತ್ಮಹತ್ಯೆ ಪ್ರಕರಣದಲ್ಲಿ ಬಂಧಿಸಲಾಗಿದ್ದ ವಿದ್ಯಾರ್ಥಿಯ ಮೇಲೆ ಆರಂಭದಲ್ಲಿ, ‘ಆತ್ಮಹತ್ಯೆಗೆ ಪ್ರಚೋದನೆ’ ನೀಡಿದ ಸೆಕ್ಷನ್‌ನ ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿ ಪ್ರಕರಣ ದಾಖಲಾಗಿರಲಿಲ್ಲ. ಈಗಷ್ಟೇ ಆರೋಪ ಪಟ್ಟಿಯಲ್ಲಿ ಜಾತಿ ತಾರತಮ್ಯದ ಬಗ್ಗೆ ಉಲ್ಲೇಖಿಸಲಾಗಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ ಸಂಬಂಧ ಚರ್ಚೆ ಆರಂಭವಾದದ್ದು ರೋಹಿತ್ ವೇಮುಲ ಪ್ರಕರಣದ ನಂತರ. ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿದ್ದ ರೋಹಿತ್ 2016ರ ಜನವರಿ 17ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ದಲಿತ ಸಮುದಾಯದ ರೋಹಿತ್ ಆತ್ಮಹತ್ಯೆಗೂ ಮುನ್ನ ಬರೆದಿದ್ದ ಪತ್ರದಲ್ಲಿ, ‘ನನ್ನ ಹುಟ್ಟೇ ನನ್ನ ಸಾವಿಗೆ ಕಾರಣ’ ಎಂದು ಹೇಳಿಕೊಂಡಿದ್ದರು.

ಅಂಬೇಡ್ಕರ್ ಅವರ ಹೆಸರಿನ ಸಂಘಟನೆ ಅಡಿಯಲ್ಲಿ ಪ್ರತಿಭಟನೆ ನಡೆಸಿದ ಕಾರಣಕ್ಕೆ ರೋಹಿತ್ ಸೇರಿ ಐವರು ದಲಿತ ವಿದ್ಯಾರ್ಥಿಗಳ ವಿರುದ್ಧ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ದೂರು ನೀಡಿತ್ತು. ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವೆಯಾಗಿದ್ದ ಸ್ಮೃತಿ ಇರಾನಿ ಅವರವರೆಗೂ ಈ ದೂರು ಹೋಗಿತ್ತು. ಸಚಿವರ ಸೂಚನೆಯನ್ವಯ ಐವರ ವಿದ್ಯಾರ್ಥಿವೇತನವನ್ನೂ ತಡೆ ಹಿಡಿಯಲಾಗಿತ್ತು. ಆನಂತರವೇ ರೋಹಿತ್ ಆತ್ಮಹತ್ಯೆ ಮಾಡಿಕೊಂಡಿದ್ದು. ಭಾರಿ ಪ್ರತಿಭಟನೆಯ ಹೊರತಾಗಿಯೂ ಒತ್ತಡದ ಕಾರಣಗಳಿಗೆ ನಡೆದ ಆತ್ಮಹತ್ಯೆ ಎಂದು ದಾಖಲೆಗಳಲ್ಲಿ ನಮೂದಿಸಲಾಯಿತು.

ಈ ಎಲ್ಲಾ ಪ್ರಕರಣಗಳಲ್ಲಿ ಜಾತಿ ಆಧಾರಿತ ದೌರ್ಜನ್ಯ ಅಥವಾ ತಾರತಮ್ಯದ ಉಲ್ಲೇಖ ಇಲ್ಲ. ಒಟ್ಟಾರೆ ಈ ಪ್ರಕರಣಗಳನ್ನು ಸಾಮಾನ್ಯ ಪ್ರಕರಣಗಳು ಎಂದಷ್ಟೇ ಪರಿಗಣಿಸಲಾಗಿದೆ ಎಂಬುದನ್ನು ಸರ್ಕಾರದ ದಾಖಲೆಗಳು ಹೇಳುತ್ತವೆ.

ಹೆಚ್ಚುತ್ತಲೇ ಇದೆ...

ಕೇಂದ್ರ ಸರ್ಕಾರದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆಗೆ ತಡೆಗೆ ಹಲವು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಆದರೆ, ಆತ್ಮಹತ್ಯೆ ಮಾತ್ರ ನಿಯಂತ್ರಣಕ್ಕೆ ಬಂದಿಲ್ಲ. 2021ರಲ್ಲಿ ದೇಶದಾದ್ಯಂತ ಕೇಂದ್ರ ಸರ್ಕಾರದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಒಟ್ಟು 10 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದರು. 2022ರಲ್ಲಿ ಈ ಸಂಖ್ಯೆ 25ಕ್ಕೆ ಏರಿಕೆಯಾಗಿದೆ. 2023ರ ಮೊದಲ ಮೂರು ತಿಂಗಳಲ್ಲೇ ಈ 15 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ



ಆಧಾರ: ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಕೇಂದ್ರ ಶಿಕ್ಷಣ ಸಚಿವರು ನೀಡಿದ ಲಿಖಿತ ಉತ್ತರ, ಪಿಟಿಐ ವರದಿಗಳು

ಪರಿಹಾರಕ್ಕೆ ‘ಮನೋದರ್ಪಣ’

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ ತಡೆಗೆ ‘ಮನೋದರ್ಪಣ’ ಎಂಬ ಕಾರ್ಯಕ್ರಮವನ್ನು ಆರಂಭಿಸಲಾಗಿದೆ. ಈ ಕಾರ್ಯಕ್ರಮದ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಆಪ್ತ ಸಮಾಲೋಚನೆ ನೀಡಲಾಗುತ್ತದೆ. ವಿದ್ಯಾರ್ಥಿಗಳ ಒತ್ತಡ ಕಡಿಮೆ ಮಾಡಲು, ಅವರನ್ನು ಬೇರೆ ಚಟುವಟಿಕೆಗಳಲ್ಲಿ ತೊಡಗಿಸಲಾಗುತ್ತದೆ ಎಂದು ಕೇಂದ್ರ ಸರ್ಕಾರವು ಲೋಕಸಭೆಗೆ ನೀಡಿದ ಮಾಹಿತಿಯಲ್ಲಿ ವಿವರಿಸಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಮೇಲೆ ದೌರ್ಜನ್ಯ ಮತ್ತು ತಾರತಮ್ಯವನ್ನು ತಡೆಯಲು ಈ ಶಿಕ್ಷಣ ಸಂಸ್ಥೆಗಳಲ್ಲಿ ಪ್ರತ್ಯೇಕ ಘಟಕಗಳನ್ನು ಆರಂಭಿಸಲಾಗಿದೆ ಎಂದೂ ಸರ್ಕಾರ ಮಾಹಿತಿ ನೀಡಿದೆ.

ಐಐಟಿಗಳಲ್ಲೇ ಆತ್ಮಹತ್ಯೆ ಹೆಚ್ಚು

ಕೇಂದ್ರ ಸರ್ಕಾರದ ಅಧೀನದಲ್ಲಿ ಬರುವ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅತಿ ಹೆಚ್ಚು ಆತ್ಮಹತ್ಯೆಗಳು ನಡೆದಿರುವುದು ಐಐಟಿಗಳಲ್ಲಿ. ಈ ಐದು ವರ್ಷಗಳಲ್ಲಿ ನಡೆದಿರುವ ಒಟ್ಟು ಆತ್ಮಹತ್ಯೆಗಳಲ್ಲಿ ಶೇ 34.8ರಷ್ಟು ಪ್ರಕರಣಗಳು ಐಐಟಿಗಳಲ್ಲೇ ನಡೆದಿವೆ. ನಂತರ ಹೆಚ್ಚು ಆತ್ಮಹತ್ಯೆ ನಡೆದದ್ದು ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ.



ಇದು ಅಕ್ಕಿಕಳ್ಳನ ಕಥೆ!

● ಸುಕೃತ ಎಸ್.

ಇವನು ಅಕ್ಕಿಕಳ್ಳ! ಇವನ ಊರು ಕೇರಳದ ಇಡುಕ್ಕಿ ಜಿಲ್ಲೆಯ ದೇವಿಕುಳಂ ಅರಣ್ಯ ಪ್ರದೇಶ. ಇವನಿಗೆ ಅಮ್ಮ ಇಲ್ಲ. ಕಾಲಿಗೆ ಗಾಯ ಆಗಿ, ಅದು ವಾಸಿಯಾಗದೆ ತೀರಿಹೋದಳು. ಇದೆಲ್ಲಾ 1987ರ ಸುಮಾರಿಗೆ ನಡೆದ ಕಥೆ. ಅಂದಹಾಗೆ, ಇವನ ಹೆಸರು ಅರಿಕೊಂಬನ್ (ಅರಿ ಎಂದರೆ ಅಕ್ಕಿ, ಕೊಂಬನ್ ಎಂದರೆ ದೊಡ್ಡ ಗ್ರಾತದ ಆನೆ).

ತಾಯಿ ತೀರಿಹೋದಾಗ ಇವನಿಗೆ ಒಂದೂವರೆ ವರ್ಷ. ದೇವಿಕುಳಂ ಅರಣ್ಯ ಪ್ರದೇಶದ ಚಿನ್ನಕನಲ್‌ನಲ್ಲಿ ಇರುವ ಮುತ್ತುಕಂಡ್ ಏಲಕ್ಕಿ ಎಸ್ಟೇಟ್‌ನ ಬಳಿ ಮೊದಲು ಇವನು ಇವನ ತಾಯಿಯ ಜೊತೆ ಕಾಣಿಸಿಕೊಂಡ. ಆಗ ಆತನ ತಾಯಿಯ ಕಾಲಿಗೆ ಗಾಯವಾಗಿತ್ತು. ಈ ಎಸ್ಟೇಟ್‌ನಲ್ಲಿ ಕೆಲಸ ಮಾಡುತ್ತಿದ್ದವರು, ಬುಡಕಟ್ಟು ಜನರು ಸೇರಿ ಇವನ ತಾಯಿಯ ಆರೈಕೆ ಮಾಡಿದರು. ಮೂರು ತಿಂಗಳ ಆರೈಕೆಯ ಬಳಿಕವೂ ತಾಯಿ ಬದುಕುಳಿಯಲಿಲ್ಲ. ನಂತರ ಇವನ ಓಡಾಟ ಚಿನ್ನಕನಲ್ ಪ್ರದೇಶಕ್ಕೆ ಸೀಮಿತವಾಯಿತು.

ಆಗಿಂದ ಇವನನ್ನು ಈ ಪ್ರದೇಶದ ಸುತ್ತಮುತ್ತಲಿನ ಬುಡಕಟ್ಟು ಜನರೇ ನೋಡಿಕೊಳ್ಳುತ್ತಿದ್ದರು ಎನ್ನಬಹುದು. ಇವನಿಗೆ ಅಕ್ಕಿಆನೆ ಎಂದು ಹೆಸರಿಟ್ಟಿದ್ದೂ ಇವರೇ. ಅಂದಹಾಗೆ ಇದು ಅವನಿಗೆ ಇಟ್ಟಿರುವ ಎರಡನೇ ಹೆಸರು. ಮೊದಲು ಇವನನ್ನು ಕಳ್ಳಕೊಂಬನ್ (ಕಳ್ಳಆನೆ) ಎನ್ನುತ್ತಿದ್ದರು. ಈ ಹೆಸರು ಬಂದ ಕಥೆಯೂ ಕುತೂಹಲಕಾರಿಯೇ ಸರಿ.

ಇವನು ಸಣ್ಣವನಿದ್ದಾಗ ಈ ಪ್ರದೇಶದಲ್ಲಿ ಅಷ್ಟೇನು ಜನವಸತಿ ಇರಲಿಲ್ಲ. ಭಾರಿ ವಿರಳ ಮನೆಗಳು. ಅದು ಯಾವ ತರದ್ದು ಎಂದರೆ ಬಿದಿರು ಮತ್ತು ಹುಲ್ಲಿನಿಂದ ಕಟ್ಟಿದವು. ಇವನಿಗೊ ಅಕ್ಕಿ ಕದಿಯುವ ಚಟ. ತನ್ನ ಸೊಂಡಿಲು ಹಾಕಿ ಅಕ್ಕಿ ಕದಿಯುತ್ತಿದ್ದ. ಅದಕ್ಕೆ ಕಳ್ಳಾನೆ ಎಂದು ಹೆಸರು ಬಂದದ್ದು.

ಅರಣ್ಯದ ತುಂಬೆಲ್ಲಾ ಇದ್ದ ಬುಡಕಟ್ಟು ಜನರನ್ನು ಸೇರಿಸಿ ಸರ್ಕಾರ ಒಂದು ಕಾಲೊನಿ ಮಾಡಿತು. ಇವು ಕಾಂಕ್ರಿಟ್ ಮನೆಗಳು. ಅಲ್ಲಿ ಇಲ್ಲಿ ಓಡಾಡುತ್ತಾ,ಅಕ್ಕಿ ಕದಿಯುತ್ತಿದ್ದ ಅವನಿಗೆ ಅಕ್ಕಿ ಹುಚ್ಚು ಎಷ್ಟು ಹತ್ತಿತೆಂದರೆ, ಅದನ್ನೇ ಚಾಳಿ ಮಾಡಿಕೊಂಡ. ಪಡಿತರ ಅಂಗಡಿಗೆ ನುಗ್ಗಿದ, ಜನರನ್ನು ಪೀಡಿಸಲು ಆರಂಭಿಸಿದ. ಅಲ್ಲಿವರೆಗೆ ಜನರೊಂದಿಗೆ ಹೊಂದಿಕೊಂಡಿದ್ದ ಇವನು, ಒಮ್ಮೆಲೆ ರೋಷಭರಿತನಾದ.

ಇವನ ದಾಳಿಗೆ ಸುಮಾರು 10 ಜನರು ಪ್ರಾಣತೆತ್ತರು. ಸುಮಾರು 300 ಮನೆಗಳು ಧ್ವಂಸಗೊಂಡವು. ಜನರೂ ಈಗ ಆಕ್ರೋಶಗೊಂಡರು. ದಿನ ಬೆಳಗಾದರೆ, ಇವನ ಮುಖ ನೋಡುತ್ತಿದ್ದ ಜನರು, ಈಗ ಇವನು ಕಾಣಿಸಿಕೊಂಡರೆ ಸಂಕಟಪಡುವ ಹಂತ ತಲುಪಿದರು. ಇವನು ನಮಗೆ ಬೇಡ, ಬೇರೆ ಎಲ್ಲಾದರೂ ಕಳುಹಿಸಿ ಎಂದು ಜನರು ಪ್ರತಿಭಟನೆ ಶುರುವಿಟ್ಟರು.



ಈಗ ಇವನ ಲಗ್ಗೆ ಸಿನಿಮಾ ಕಡೆ: ಬಾದುಶಾ ಸಿನಿಮಾ ಮತ್ತು ಪೆನ್ ಆ್ಯಂಡ್ ಪೇಪರ್ ಕ್ರಿಯೇಷನ್ಸ್ ಅನ್ನುವ ಬ್ಯಾನರ್ ಅಡಿ ‘ಅರಿಕೊಂಬನ್’ ಎನ್ನುವ ಸಿನಿಮಾ ಸಿದ್ಧವಾಗುತ್ತಿದೆ. ಸಾಜಿದ್ ಯಾಹಿಯಾ ಅವರು ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ

ಇದು ಕೇರಳ ಹೈಕೋರ್ಟ್‌ವರೆಗೂ ತಲುಪಿತು. ನಂತರ ಸರ್ಕಾರ ಇವನ ಹುಡುಕಾಟಕ್ಕೆ ತಂಡ ನೇಮಿಸಿತು. ಇವನನ್ನು ಹಿಡಿದು, ಪಾಲಕ್ಕಾಡ್ ಜಿಲ್ಲೆಯ ಪರಂಬಿಕುಳಂ ಹುಲಿ ಸಂರಕ್ಷಿತ ಅರಣ್ಯಕ್ಕೆ ಬಿಡುವುದಕ್ಕೆ ನಿರ್ಧರಿಸಿದರು. ಇಷ್ಟರಲ್ಲಾಗಲೇ ಇವನು ಕೇರಳದಲ್ಲೆಲ್ಲ ಪ್ರಸಿದ್ಧನಾಗಿದ್ದ. ಪರಂಬಿಕುಳಂ ಸುತ್ತಮುತ್ತಲಿನ ಜನರು ಇವನು ನಮಗೂ ಬೇಡ ಎಂದು ಕೂಗಿಟ್ಟರು. ಕೊನೆಗೆ ಇವನನ್ನು ಕೇರಳ–ತಮಿಳುನಾಡು ಗಡಿಯಲ್ಲಿರುವ ತಮಿಳುನಾಡಿಗೆ ಸೇರಿದ ಪೆರಿಯಾರ್ ಹುಲಿ ಸಂರಕ್ಷಿತಾರಣ್ಯಕ್ಕೆ ಬಿಡುವುದಕ್ಕೆ ನಿರ್ಧಾರವಾಯಿತು. ಹೈಕೋರ್ಟ್ ಇವನ ಸ್ಥಳಾಂತರಕ್ಕೆ ಸಮ್ಮತಿಯನ್ನೂ ನೀಡಿತು. ಗಡಿ ಪ್ರದೇಶವಾದ್ದರಿಂದ ತಮಿಳುನಾಡಿನಲ್ಲಿಯೂ ಪರಿಚಿತನಾಗಿದ್ದ ಇವನ ಆಗಮವನ್ನು ಅಲ್ಲಿನ ಜನ ವಿರೋಧಿಸಿದರು. ಆದರೂ, ಇವನ ಆಗಮನದ ದಿನ ಅಕ್ಕಿಕೊಟ್ಟೇ ಆತನನ್ನು ಸಂಭ್ರಮದಿಂದ ಸ್ವಾಗತಿಸಿದರು. ಇದು ಆಗಿದ್ದು ಏಪ್ರಿಲ್ ಕೊನೇ ವಾರದಲ್ಲಿ.

ಇವನಿಗೊ ಕಾಡಿನೊಳಗೆ ಇದ್ದು ಅಭ್ಯಾಸ ಇಲ್ಲ. ಏನು ಮಾಡುವುದು ಮತ್ತೆ, ಮೇ 27ರ ಹೊತ್ತಿಗೆ ಇವನು ಕುಂಬಂ ಪ್ರದೇಶದಲ್ಲಿ ಕಾಣಿಸಿಕೊಂಡ. ಸುತ್ತಮುತ್ತಲಿನ ಜನರನ್ನು ಬೆದರಿಸಿದ. ಒಬ್ಬರನ್ನು ಗಾಯಗೊಳಿಸಿದ್ದ, ನಂತರ ಇವರು ಮೃತಪಟ್ಟರು. ಇಲ್ಲಿಂದಲೂ ಇವನನ್ನು ಬೇರೆಡೆ ಕಳುಹಿಸಬೇಕು ಎಂಬ ಕೂಗು ಈಗ ಎದ್ದಿದೆ. ಕುಂಬಂನಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ಇನ್ನಷ್ಟು ಜನರನ್ನು ಹಿಂಸಿಸದಂತೆ ತಡೆಯಲು 35 ವರ್ಷದ ಇವನ್ನು ಹಿಡಿಯಲು ತಮಿಳುನಾಡು ಸರ್ಕಾರ ಕಾರ್ಯಾಚರಣೆ ಆರಂಭಿಸಿದೆ.

ಆಮೇಲೆ ಇವನಿಗೆ ಕೇರಳದಲ್ಲಿ ಹಲವಾರು ಅಭಿಮಾನಿ ಸಂಘಗಳೂ ಇವೆ. ಕೇರಳದ ಬೀದಿಗಳಲ್ಲಿ ಇವನ ಫೋಟೊ ಹಾಕಿಕೊಂಡ ಹಲವು ಕಟ್‌ಔಟ್‌ಗಳು ಕಾಣಸಿಗುತ್ತವೆ.

ಆಧಾರ: ಬಿಬಿಸಿ, ಮಾತೃಭೂಮಿ, ಪಿಟಿಐ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಉತ್ತರ ಪ್ರದೇಶದ ಶಾಲೆಯೊಂದರಲ್ಲಿ ಮಕ್ಕಳಿಗೆ ನಮಾಜ್ ಮಾಡುವುದು ಹೇಗೆ ಎಂಬುದನ್ನು ಹೇಳಿಕೊಡಲಾಗುತ್ತಿದೆ. ಮುಸ್ಲಿಂ ಶಿಕ್ಷಕಿಯೊಬ್ಬರು ತಮ್ಮ ವಿದ್ಯಾರ್ಥಿನಿಯರಿಗೆ ನಮಾಜ್ ಅಭ್ಯಾಸ ಮಾಡಿಸುತ್ತಿದ್ದಾರೆ. ನಮಾಜ್ ಅಭ್ಯಾಸ ಮಾಡುತ್ತಿರುವವರಲ್ಲಿ ಹಿಂದೂ ವಿದ್ಯಾರ್ಥಿನಿಯರೂ ಇದ್ದಾರೆ. ಇದು ಉತ್ತರ ಪ್ರದೇಶದ ನಿಜವಾದ ‘ದಿ ಕೇರಳ ಸ್ಟೋರಿ’, ‘ಇದು ಲವ್ ಜಿಹಾದ್’ ಎಂಬ ವಿವರ ಇರುವ ಪೋಸ್ಟ್‌ಗಳು ಫೇಸ್‌ಬುಕ್‌ನಲ್ಲಿ ಹರಿದಾಡುತ್ತಿವೆ. ಇದರ ಜತೆಯಲ್ಲಿ ಒಂದು ವಿಡಿಯೊವನ್ನೂ ಹಂಚಿಕೊಳ್ಳಲಾಗಿದೆ. ಮಕ್ಕಳು ಮಂಡಿಯೂರಿ ಕುಳಿತು, ನೆಲಕ್ಕೆ ನಮಸ್ಕರಿಸುತ್ತಿರುವ ದೃಶ್ಯವು ಆ ವಿಡಿಯೊದಲ್ಲಿ ಇದೆ. ಈ ವಿಡಿಯೊ ಟ್ವಿಟರ್, ಫೇಸ್‌ಬುಕ್ ಮತ್ತು ವಾಟ್ಸ್‌ಆ್ಯಪ್‌ಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಂಚಿಕೆಯಾಗಿದೆ. ಆದರೆ, ಇದು ತಿರುಚಲಾದ ವಿಡಿಯೊ ಮತ್ತು ತಪ್ಪು ಮಾಹಿತಿ.

‘ಇದು ತಿರುಚಲಾದ ಮಾಹಿತಿ. ಇದು ಉತ್ತರ ಪ್ರದೇಶದ ಬಾಗ್‌ಪತ್‌ನ ಶಾಲೆಯೊಂದರಲ್ಲಿ ಚಿತ್ರೀಕರಿಸಲಾದ ವಿಡಿಯೊ. ಹಿಂದೂ ವಿದ್ಯಾರ್ಥಿನಿಯರಿಗೆ ಶಾಲೆಯಲ್ಲಿ ನಮಾಜ್ ಹೇಳಿಕೊಡಲಾಗುತ್ತದೆ ಎಂದು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಅದಕ್ಕೆ ಸಂಬಂಧಿಸಿದಂತೆ ಅಮರ್ ಉಜಾಲ, ದೈನಿಕ್ ಭಾಸ್ಕರ್ ವರದಿ ಪ್ರಕಟಿಸಿವೆ. ಶಾಲೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಕ್ಕಾಗಿ ಸರ್ವಧರ್ಮ ಸಮನ್ವಯ ಗೀತನೃತ್ಯವನ್ನು ನಡೆಸಲು ಉದ್ದೇಶಿಸಲಾಗಿತ್ತು. ಅದರಲ್ಲಿ ಎಲ್ಲಾ ಧರ್ಮಗಳ ಪ್ರಾರ್ಥನಾ ವಿಧಾನಗಳನ್ನು ತೋರಿಸಲಾಗಿತ್ತು. ಆ ನೃತ್ಯದ ಅಭ್ಯಾಸದ ವಿಡಿಯೊ ಅದು. ವಿದ್ಯಾರ್ಥಿನಿಯರು ಎಲ್ಲಾ ಸ್ವರೂಪದ ಪ್ರಾರ್ಥನೆಗಳನ್ನು ಮಾಡುತ್ತಿರುವ ದೃಶ್ಯಗಳು ಪೂರ್ಣ ವಿಡಿಯೊದಲ್ಲಿ ಇವೆ. ಈ ಬಗ್ಗೆ ದೂರು ದಾಖಲಾದ ನಂತರ ಶಾಲಾ ಆಡಳಿತ ಮಂಡಳಿಯು, ಗೀತನೃತ್ಯವನ್ನು ರದ್ದು ಮಾಡಿತ್ತು. ಆದರೆ ಕೆಲವರು ವಿಡಿಯೊವನ್ನು ಕತ್ತರಿಸಿ, ನಮಾಜ್ ಹೇಳಿಕೊಡಲಾಗುತ್ತಿದೆ ಎಂದು ಸುಳ್ಳುಸುದ್ದಿ ಹರಡಿದ್ದಾರೆ ಎಂದು ಆ ವರದಿಗಳಲ್ಲಿ ವಿವರಿಸಲಾಗಿದೆ’ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಚಿನ್ಮಯವೆ ಸತ್ಯ

ಶೂನ್ಯವೆಲ್ಲವುಮೆಂಬೊಡಂತೆನಿಸುವುದೇನು ? |
ಅನ್ಯವಿಲ್ಲೆನುವರಿವದೊಂದಿರ್ಪುದಲ್ತೆ ? ||
ಚಿನ್ಮಯವನದನೆ ನೀಂ ಸತ್ಯವೆಂದಾಶ್ರಯಿಸು |
ಶೂನ್ಯವಾದವೆ ಶೂನ್ಯ – ಮಂಕುತಿಮ್ಮ || 897 ||

ಪದ-ಅರ್ಥ: ಶೂನ್ಯವೆಲ್ಲವುಮೆಂಬೊಡಂತೆನಿಸುವುದೇನು = ಶೂನ್ಯ + ಎಲ್ಲವೂ + ಎಂಬೊಡಂತೆ(ಎನ್ನುವಂತೆ) + ಎನಿಸುವುದೇನು, ಅನ್ಯವಿಲ್ಲೆನುವರಿವದೊಂದಿರ್ಪುದಲ್ತೆ = ಅನ್ಯವಿಲ್ಲ + ಎನುವ + ಅರಿವು + ಅದೊಂದು + ಇರ್ಪುದು (ಇರುವುದು) + ಅಲ್ತೆ, ಚಿನ್ಮಯವನದನೆ = ಚಿನ್ಮಯವನ್ + ಅದನೆ, ಸತ್ಯವೆಂದಾಶ್ರಯಿಸು = ಸತ್ಯವೆಂದು + ಆಶ್ರಯಿಸು.

ವಾಚ್ಯಾರ್ಥ: ಎಲ್ಲವೂ ಶೂನ್ಯ ಎಂದು ಅನ್ನಿಸುವುದೇನು? ಏನೂ ಇಲ್ಲ ಎಂಬ ಅರಿವಾದರೂ ಇದೆಯಲ್ಲವೆ? ಅದಕ್ಕೆ ಜ್ಞಾನಸ್ವರೂಪವಾದ ಚಿನ್ಮಯನನ್ನೇ ಸತ್ಯ ಎಂದು ಆಶ್ರಯಿಸು. ಆದ್ದರಿಂದ ಶೂನ್ಯವಾದವೇ ಶೂನ್ಯ.

ವಿವರಣೆ: ಬೌದ್ಧದರ್ಶನದ ನಾಲ್ಕು ಸಂಪ್ರದಾಯಗಳಲ್ಲಿ ಕೊನೆಯದು ಮಾಧ್ಯಮಿಕ ಪಂಥ. ಇದನ್ನು ಶೂನ್ಯವಾದ ಎಂದೂ ಕರೆಯುತ್ತಾರೆ. ಇದನ್ನು ವಿಶೇಷವಾಗಿ ವಿವರಿಸಿದವನು ನಾಗಾರ್ಜುನ. ಅವನು ನಾಲ್ಕುನೂರು ಕಾರಿಕೆಗಳಲ್ಲಿ ಇದನ್ನು ವರ್ಣಿಸಿದ್ದಾನೆ. ಮಾಧ್ಯಮಿಕ ಪಂಥವನ್ನು ನಾಸ್ತಿಕವಾದವೆಂದು ವೈದಿಕವಾದಿಗಳು ದೂಷಿಸಿದರು. ಆದರೆ ಅದು ನಾಸ್ತಿಕವಾದವಾಗಲೀ, ಚಾರ್ವಾಕವಾದವಾಗಲಿ ಅಲ್ಲವೆಂದು ನಾಗಾರ್ಜುನನ ಶಿಷ್ಯ ಚಂದ್ರಕೀರ್ತಿ ಸಾಧಿಸಿದ್ದಾನೆ. ಶೂನ್ಯತೆಯಲ್ಲಿ ಎರಡು ನೆಲೆಗಳು. ಒಂದು ಸಂಸಾರದಲ್ಲಿ, ವ್ಯವಹಾರದಲ್ಲಿ ಪ್ರಕಟವಾಗುವ ಶೂನ್ಯತೆ. ಇನ್ನೊಂದು ಪರಮಾರ್ಥದ ನೆಲೆಯಲ್ಲಿ ಅಭಿವ್ಯಕ್ತವಾಗುವ ಶೂನ್ಯತೆ. ವ್ಯವಹಾರದಲ್ಲಿ ಬರುವ ಪ್ರತಿಯೊಂದು ವಸ್ತುವು ಬರುವ ಮೊದಲು ಏನೂ ಆಗಿರಲಿಲ್ಲ. ಬಂದು, ಮರೆಯಾಗಿ ಹೋದ ಮೇಲೆ ಏನೂ ಉಳಿಯಲಿಲ್ಲ. ಆದ್ದರಿಂದ ಅದೆಲ್ಲ ಶೂನ್ಯವೇ. ಆದರೆ ಪರಮಾರ್ಥದಲ್ಲಿ ರೂಪ, ಆಕಾರಗಳಿಲ್ಲದಿದ್ದರೂ, ಯಾರ ಕಣ್ಣಿಗೂ ಕಾಣದಿದ್ದರೂ, ಎಲ್ಲವನ್ನು ನಿಯಾಮಕ ಮಾಡಿರುವ ಶುದ್ಧಸತ್ವವೊಂದಿದೆ. ಸ್ಥೂಲ ರೂಪದಲ್ಲಿ ಅದು ಶೂನ್ಯ ಆದರೆ ಅಂತರ್‌ದೃಷ್ಟಿಗೆ ಅದು ಅನಂತ, ಅಪಾರ. ಈ ಮಾಧ್ಯಮಿಕ ಪಂಥದ ನ್ಯಾಯ, ತರ್ಕಗಳ ಪ್ರಭಾವ ವೇದಾಂತದ ಮೇಲೆ ಸ್ಪಷ್ಟವಾಗಿ ಬಿದ್ದಿತು. ಅದ್ವೈತವಾದದ ವ್ಯವಹಾರ-ಸತ್ತಾ, ಪರಮಾರ್ಥ-ಸತ್ತಾಗಳು ನಾಗರ್ಜುನನ ಸಂವೃತಿ ಸತ್ಯ ಮತ್ತು ಪರಮಾರ್ಥ ಸತ್ಯಗಳನ್ನೇ ಅನುಸರಿಸಿದವು. ಮಾಧ್ಯಮಿಕರ ಶೂನ್ಯವೇ ವೇದಾಂತದ ಪ್ರಜ್ಞಾನಘನ, ಅವರ ಬುದ್ಧಿಕಾಯವೇ ಇವರ ಬ್ರಹ್ಮ, ಆ ಶೂನ್ಯವೇ ವಚನಕಾರರ ಬಯಲು. ಕಗ್ಗ ಕೇಳುತ್ತದೆ, ನಿಮಗೆ ಎಲ್ಲವೂ ಶೂನ್ಯ ಎಂದು ಎನ್ನಿಸುತ್ತಿದೆಯೆ? ಎಲ್ಲಿಯೂ ಏನೂ ಇಲ್ಲ ಎಂದು ಎನ್ನಿಸುವುದಾದರೆ, ಏನೂ ಇಲ್ಲ ಎಂಬ ಅರಿವಾದರೂ ಇದೆಯಲ್ಲವೆ? ಆ ಅರಿವು ಇದೆಯಲ್ಲ, ಅದೇ ಚಿನ್ಮಯವಾದದ್ದು. ಚಿನ್ಮಯವೆಂದರೆ ಜ್ಞಾನವನ್ನು, ಅರಿವನ್ನು ಹೊಂದಿರುವ, ಜಡವಲ್ಲದ, ಅಚೇತನವಲ್ಲದ ಶಾಶ್ವತ ಸತ್ಯ. ಅದನ್ನೇ ನಾವು ಆಶ್ರಯಿಸಬೇಕು. ಎಲ್ಲವೂ ಈ ಪರಸತ್ವವೇ ಆಗಿರುವಾಗ ಶೂನ್ಯ ಹೇಗಾದೀತು. ಅದಕ್ಕೇ ಶೂನ್ಯವಾದವೆ ಶೂನ್ಯ ಎನ್ನುತ್ತದೆ ಕಗ್ಗ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜೂನ್ 2, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ತ್ರಯೋದಶಿ ಗಂ. 12-49 ನಕ್ಷತ್ರ: ಸ್ವಾತಿ ಗಂ. 6-53 ಯೋಗ: ಪರಿಘ ಗಂ. 17-09, ಕರಣ: ತೈತಿಲ ಗಂ. 12-49, ವೃಷಭ ಮಾಸದ 18 ನೇ ದಿನ,
ಮಳೆನಕ್ಷತ್ರ: ರೋಹಿಣಿ 3. ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-06 ಸೂರ್ಯಾಸ್ತ : 06-51
ಮುಸ್ಲಿಂ ದಿನಾಂಕ : 13 ಜುಲ್ಖಾಯದ್
ಅದೃಷ್ಟ ಸಂಖ್ಯೆ : 6, 9

ಮೇಷ: ಕೆಲವರ ದುಷ್ಟಬುದ್ಧಿಯ ಅನಾವರಣ ಆಗಲಿದೆ. ಹೆಚ್ಚಿನ ಗಮನ ನಿಮ್ಮ ಸಹೋದ್ಯೋಗಿಗಳಲ್ಲಿ ಇಡುವುದರಿಂದ ತಪ್ಪುಗಳನ್ನು ಸರಿ ಪಡಿಸಿಕೊಳ್ಳುವ ಮಾರ್ಗ ದೊರೆಯುತ್ತದೆ. ಸಾಂಕ್ರಾಮಿಕ ರೋಗ ಬರಬಹುದು.

ವೃಷಭ: ಮೃಗದ ಚರ್ಮದಿಂದ ವಸ್ತುಗಳನ್ನು ತಯಾರಿಸುವವರಿಗೆ ಹೆಚ್ಚಿನ ಬೇಡಿಕೆ ಬರಲಿದೆ. ಮನೆಯ ಕೆಲಸಗಳನ್ನು ನಿಭಾಯಿಸುವುದರಲ್ಲಿ ಹೆಚ್ಚಿನ ಸಮಯ ಕಳೆಯುವಿರಿ. ಸಂಬಂಧಿಗಳ ಆಗಮನವಾಗಬಹುದು.

ಮಿಥುನ: ಮಕ್ಕಳ ಭವಿಷ್ಯದ ಮೇಲಿನ ಚಿಂತೆ ಅವರ ಕೆಲವು ನಡವಳಿಕೆಯಿಂದ-ಹೆಚ್ಚಾಗುವುದು. ಸಮಸ್ಯೆಗಳ ಸರಮಾಲೆಗಳು ಒಂದೊಂದಾಗಿ ನಿವಾರಣೆಯಾಗುತ್ತದೆ. ಅಧಿಕಾರವನ್ನು ಎಲ್ಲೆಂದರೆ ಅಲ್ಲಿ ಚಲಾಯಿಸಬೇಡಿ.

ಕರ್ಕಾಟಕ: ಸಮಾಜದಲ್ಲಿ ಬದಲಾವಣೆ ತರುವ ವಿಚಾರವಾಗಿ ಕ್ರಾಂತಿಕಾರಿ ನಡೆಯೊಂದನ್ನು ಕೈಗೊಳ್ಳುವಿರಿ. ಭೋಜನ ಸಮಯವು ಹೆಚ್ಚು ಕಡಿಮೆ ಆಗುತ್ತದೆ. ಸಣ್ಣ ಮಕ್ಕಳಿಂದ ಮರ್ಯಾದೆಯು ಹೋಗಬಹುದು.

ಸಿಂಹ: ಆಯಾ ಋತುವಿನಲ್ಲಿ ಸಿಗುವ ಆಹಾರ ಪದಾರ್ಥಗಳನ್ನು ಸಿದ್ಧಪಡಿಸಿ ಮಾರಾಟ ಮಾಡುವವರು ಉದ್ಯೋಗ ಶುರು ಮಾಡುವಿರಿ. ಹೊಸ ವಿನ್ಯಾಸದ ಉಡುಪುಗಳುವ ಸ್ಥಳಕ್ಕೆ ಸರಿಯಾಗದಿರಬಹುದು.

ಕನ್ಯಾ: ಮಿತ್ರನ ಮನೆಯ ಸಮಾರಂಭದಲ್ಲಿ ಭಾಗವಹಿಸುವುದರಿಂದ ಹಳೆಯ ಮಿತ್ರರನ್ನು ಭೇಟಿಯಾದ ಸಂಭ್ರಮ ನಿಮ್ಮದಾಗುತ್ತದೆ. ಯಾವ ಜಾಗದಲ್ಲಿ ವೃತ್ತಿಯನ್ನು ಮಾಡುವುದೆಂದು ಚಿಂತಿಸುವಿರಿ.

ತುಲಾ: ಹಲವು ಪ್ರಯತ್ನದ ನಂತರ ನಿಮ್ಮ ಪ್ರವಾಸದ ಯೋಜನೆಯು ಕಾರ್ಯ ರೂಪಕ್ಕೆ ಬರಲಿದೆ. ಸವಾಲು ನಿಮ್ಮ ಸಾಮರ್ಥ್ಯದ ಬಗ್ಗೆ ಬಂದಾಗ ಎಂಥ ಕೆಲಸವನ್ನಾದರೂ ಮಾಡಲು ಮುಂದಾಗುತ್ತೀರಿ. ಅಶ್ವತ್ಥ ವೃಕ್ಷದ ಪ್ರದಕ್ಷಿಣೆ ಬನ್ನಿ.

ವೃಶ್ಚಿಕ: ಉಪಕಾರವನ್ನು ಮಾಡುವವರೆಲ್ಲರೂ ಹಿತಚಿಂತಕರೆಂದು ತಿಳಿಯಬೇಡಿ ಏಕೆಂದರೆ ನಯವಂಚಕರು ಸಹ ಆಗಬಹುದು. ಅಕ್ಕ ಪಕ್ಕದ ಮನೆಯವರ ಉಪಟಳ ತಡೆಯಲಾಗದೆ ಏರುಧ್ವನಿಯಲ್ಲಿ ಮಾತನಾಡುವಿರಿ.

ಧನು: ಮಾಂಗಲ್ಯ ಯೋಗ ತೋರಿ ಬಂದರೂ ನಿಮ್ಮ ನಿಶ್ಚಿತ ನಿರ್ಧಾರ ಮುಖ್ಯವೆನಿಸಲಿದೆ. ಗೆಳೆತನಕ್ಕೆ ಸಂಬಂಧಿಸಿದ ಒಂದು ಗುಪ್ತ ವಿಚಾರ ಸೋರಿಕೆಯಾಗಬಹುದು. ವಾಸ್ತು ಶಿಲ್ಪದ ವಿದ್ಯಾರ್ಥಿಗಳಿಗೆ ಉತ್ತಮ ಬೇಡಿಕೆ ಬರಲಿದೆ.

ಮಕರ: ಸಣ್ಣ ಕೈಗಾರಿಕೋದ್ಯಮದವರಿಗೆ ಸರ್ಕಾರದಿಂದ ಸಹಾಯ ಸಹಕಾರ ದೊರೆಯಲಿದೆ. ನಿಮ್ಮ ಮೇಲಧಿಕಾರಿಗಳು ನಿಮ್ಮ ಮೇಲಿಟ್ಟಿದ್ದ ಭರವಸೆ ಹುಸಿಯಾಗದಂತೆ ಕಾರ್ಯ ನಿರ್ವಹಿಸಲು ಅಶಕ್ತರಾಗುವ ಸಂಭವವಿದೆ.

ಕುಂಭ: ಏಕಾಗ್ರತೆ ಕೊರತೆಯಿಂದಾಗಿ ಕೆಲಸ ಕಾರ್ಯಗಳಲ್ಲಿ ತಪ್ಪುಗಳು ಉಂಟಾಗುತ್ತದೆ. ಕೆಲಸಗಳನ್ನು ಇತರರು ಅತ್ಯಂತ ಅಚ್ಚುಕಟ್ಟಾಗಿ ಮಾಡುವುದರಿಂದಾಗಿ ನಿಮ್ಮ ಮೇಲಿನ ಇತರರ ಅವಲಂಬನೆ ಕಡಿಮೆಯಾಗುವುದು.

ಮೀನ: ನಿಮ್ಮೊಳಗಿರುವ ಮಾತನ್ನು ಭಯವಿಲ್ಲದೇ ತಿಳಿಸಿರುವುದರಿಂದ ಹೆಚ್ಚಿನ ವ್ಯಾಪಾರ ವ್ಯವಹಾರ ಗಿಟ್ಟಿಸಿಕೊಳ್ಳುವಿರಿ. ನಿರುದ್ಯೋಗಿಗಳು ಬಂದ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವ ಪ್ರಯತ್ನ ಮಾಡಿ.

ಪದಬಂಧ 5337

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

4.ತಿಂಗಳಿಗೊಂದು ಪರ್ಯಾಯ ಪದ (2)
5.ಚಂದವಾಗಿ ತೇಯ್ದಿರುವ ಶ್ರೀಗಂಧ (3)
6.ಪ್ರಾಣವಾಯುವಿದು (5
9.ಈತ ಚಕ್ರವರ್ತಿ (4
11.ಬೇರೆಯ ಉಪಾಯ (4)
12.ಸ್ವಪ್ನವನ್ನು ಕಾಣುವವನು (5)
15.ನಯ ನಾಜೂಕು ಇಲ್ಲದಿರುವಿಕೆ (3)
16.ಇತರರನ್ನು ಮನ್ನಿಸುವ ಗುಣ (2)

ಮೇಲಿಂದ ಕೆಳಕ್ಕೆ

1.ಆಶ್ರಯವು ಉಲ್ಟಾ ಕಾಣುತ್ತಿದೆ (3)
2.ಕೊನೆಗೆ ದನವಿರುವುದಕ್ಕೇ ಈ ಅಲುಗಾಟ! (3)
3.ಮೆಲುವಾಗಿ ಬೀಸುವ ಗಾಳಿ (5)
7.ನೀರಿನಿಂದಾದ ಅನಿಲ (5)
8.ಹೀಗೆ ಅಲಕ್ಷಿಸು (5)
10.ವ್ಯರ್ಥವಾದ ಮಾತು (5)
13.ಬೆಳಗಿನ ಜಾವವಿದು (3)
14.ಕಾಪಾಡುವವ ಇಲ್ಲಿದ್ದಾನೆ (3)



5336ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಪಜಯ 3.ತಪರಾಕು
5.ಮದುಮಗ 7.ಕಾತರ
8.ಪ್ರತಿಷ್ಠಾಪನೆ 11.ಸಮ್ಮತಿ
12.ವಿತರಕ 14.ಕುರುಕ್ಷೇತ್ರ
15.ಕರಣಿಕ

ಮೇಲಿಂದ ಕೆಳಕ್ಕೆ:
1.ಅರಮನೆ 2.ಜನುಮ
4.ಕುವರ 6.ಗರತಿ
7.ಕಾಮನೆ 8.ಪ್ರಗತಿ
9.ಪದವಿ 10.ಅಕಳಂಕ
11.ಸರಕು 13.ತತ್ತರ

ಸುಡೊಕು 5723

	6		8	7			9	3
								4
	8		5	2		1	6	
1		5					8	9
4			2	9	5			1
	9						2	
		9	3		2		4	
7			9		8	5		2
	5			4			3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5722 ಸುಡೊಕು

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3

ಷೇರುಪೇಟೆ ವಹಿವಾಟು 194



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,534
ಇಂದಿನ ಅಂತ್ಯ	18,487
47	
ದಿನದ ಕನಿಷ್ಠ	18,464

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹555
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹562

ಖಾದ್ಯ ತೈಲ ಮುಂಬೈ

	(10 ಕೆಜಿಗೆ)
ಶೇಂಗಾ (ರಿಫೈನ್ಡ್)	₹1570 (1550)
ಸೋಯಾ (ರಿಫೈನ್ಡ್)	₹875 (870)
ಸೂರ್ಯಕಾಂತಿ (ರಿಫೈನ್ಡ್)	₹895 (892)
ಪಾಮೋಲಿನ್	₹820 (825)

ಕೊಬ್ಬರಿ ಧಾರಣೆ

	(ಕ್ವಿಂಟಲ್‌ಗೆ)
ಬೆಂಗಳೂರು	₹9500-12500
ಕೆ.ಆರ್. ಪೇಟೆ	₹7672-7950
ತುರುವೇಕೆರೆ	₹8700-8700

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹154.50
ಆರ್‌ಎಸ್‌ಎಸ್-5	₹149
ಗುಡ್ ಲಾಟ್	₹130

(ಪ್ರತಿ ಕೆ.ಜಿಗೆ)

ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆ ಇಳಿಕೆ

ನವದೆಹಲಿ (ಪಿಟಿಐ): 19 ಕೆ.ಜಿ. ತೂಕದ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯು ಸಿಲಿಂಡರ್‌ಗೆ ₹83.5ರಷ್ಟು ಕಡಿಮೆ ಆಗಿದೆ. ಅಲ್ಲದೆ, ವಿಮಾನ ಇಂಧನದ (ಎಟಿಎಫ್) ಬೆಲೆಯನ್ನು ಶೇ 7ರಷ್ಟು ತಗ್ಗಿಸಲಾಗಿದೆ.

ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯು ಸತತ ಮೂರು ತಿಂಗಳಿನಿಂದ ಇಳಿಕೆ ಆಗುತ್ತಿದೆ. ಏಪ್ರಿಲ್ 1ರಂದು ₹91.5ರಷ್ಟು, ಮೇ 1ರಂದು ₹171.5ರಷ್ಟು ಬೆಲೆ ಇಳಿಕೆ ಆಗಿದೆ.

ಮನೆ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ಬದಲಾವಣೆ ಆಗಿಲ್ಲ.

ಸತತ 5ನೇ ಬಾರಿಗೆ ₹1.5 ಲಕ್ಷ ಕೋಟಿ ದಾಟಿದ ವರಮಾನ ಸಂಗ್ರಹ

₹1.57 ಲಕ್ಷ ಕೋಟಿ ಜಿಎಸ್‌ಟಿ

ನವದೆಹಲಿ (ಪಿಟಿಐ/ರಾಯಿಟರ್ಸ್): ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಮೂಲಕ ಮೇ ತಿಂಗಳಿನಲ್ಲಿ ₹1.57 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಗುರುವಾರ ಹೇಳಿದೆ.

ಕಳೆದ ವರ್ಷದ ಮೇ ತಿಂಗಳಿನಲ್ಲಿ ₹1.41 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ವರ್ಷದ ಮೇ ತಿಂಗಳಲ್ಲಿ ವರಮಾನ ಸಂಗ್ರಹ ಶೇಕಡ 12ರಷ್ಟು ಹೆಚ್ಚಾಗಿದೆ ಎಂದು ಹಣಕಾಸು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಏಪ್ರಿಲ್‌ನಲ್ಲಿ ಜಿಎಸ್‌ಟಿ ಸಂಗ್ರಹವು ದಾಖಲೆಯ ₹1.87 ಲಕ್ಷ ಕೋಟಿ ಆಗಿತ್ತು. ಜಿಎಸ್‌ಟಿ ವ್ಯವಸ್ಥೆಯು ಜಾರಿಗೆ ಬಂದ ನಂತರ ವರಮಾನ ಸಂಗ್ರಹವು ಸತತ 5ನೇ ಬಾರಿಗೆ ₹1.5 ಲಕ್ಷ ಕೋಟಿಯನ್ನು ದಾಟಿದೆ.

2024ರ ಮಾರ್ಚ್‌ಗೆ ಕೊನೆಗೊಳ್ಳಲಿರುವ ಹಣಕಾಸು ವರ್ಷದಲ್ಲಿ ಜಿಎಸ್‌ಟಿ ಮೂಲಕ ₹9.56 ಲಕ್ಷ ಕೋಟಿ ವರಮಾನ ಸಂಗ್ರಹಿಸುವ ನಿರೀಕ್ಷೆಯನ್ನು ಸರ್ಕಾರ ಇಟ್ಟುಕೊಂಡಿದೆ.

ಜಿಎಸ್‌ಟಿ ಸಂಗ್ರಹದಲ್ಲಿನ ಏರಿಕೆಯು ಸರ್ಕಾರದ 2023–24ನೇ ಬಜೆಟ್ ಅಂದಾಜಿಗೆ ಪೂರಕವಾಗಿ ಇದೆ ಎಂದು ಕೆಪಿಎಂಜಿ ಇಂಡಿಯಾದ ಪರೋಕ್ಷ ತೆರಿಗೆಯ ಮುಖ್ಯಸ್ಥ ಅಭಿಷೇಕ್ ಜೈನ್ ಹೇಳಿದ್ದಾರೆ.

ಕೇಂದ್ರ ಸರ್ಕಾರವು ತೆರಿಗೆ ಲೆಕ್ಕಪರಿಶೋಧನೆಯನ್ನು ವ್ಯಾಪಕವಾಗಿ ಕೈಗೊಳ್ಳುತ್ತಿರುವುದರಿಂದ ಮುಂಬರುವ ತಿಂಗಳುಗಳಲ್ಲಿ ತೆರಿಗೆ ಸಂಗ್ರಹ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಅವರು ತಿಳಿಸಿದ್ದಾರೆ.

ಮುಂದಿನ ಕೆಲವು ತಿಂಗಳುಗಳಲ್ಲಿ ಜಿಎಸ್‌ಟಿ ವರಮಾನವು ₹1.55 ಲಕ್ಷ ಕೋಟಿಯಿಂದ ₹1.65 ಲಕ್ಷ ಕೋಟಿಯ ಮಟ್ಟದಲ್ಲಿ ಇರುವ ನಿರೀಕ್ಷೆ ಇದ್ದು, ಹಿಂದಿನ ವರ್ಷದ ಸಂಗ್ರಹಕ್ಕೆ ಹೋಲಿಸಿದರೆ ಶೇ 10–11ರಷ್ಟು ಹೆಚ್ಚಳ ಕಾಣಲಿದೆ. 2023–24ಕ್ಕೆ ನೈಜ ಜಿಡಿಪಿ ಬೆಳವಣಿಗೆಯು ಅಂದಾಜಿನ ಮಟ್ಟದಲ್ಲಿಯೇ ಇರಲಿದೆ ಎಂದು ಐಸಿಆರ್‌ಎ ಆರ್ಥಿಕ ತಜ್ಞೆ ಅದಿತಿ ನಾಯರ್ ಹೇಳಿದ್ದಾರೆ.





ಸುದ್ದಿ 2 ನಿಮಿಷ

ಟಿಸಿಎಸ್ ಅತಿದೊಡ್ಡ ಬ್ರ್ಯಾಂಡ್

ನವದೆಹಲಿ (ಪಿಟಿಐ): ತಂತ್ರಜ್ಞಾನ ಕ್ಷೇತ್ರದ ಬೃಹತ್ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್), ಭಾರತದ ಅತ್ಯಂತ ಮೌಲ್ಯಯುತ ಕಂಪನಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಮತ್ತು ಐ.ಟಿ. ಸೇವಾ ಕಂಪನಿ ಇನ್ಫೊಸಿಸ್ ಭಾರತದ ಅತ್ಯಂತ ಮೌಲ್ಯಯುತ ಬ್ರ್ಯಾಂಡ್‌ಗಳ ಪಟ್ಟಿಯಲ್ಲಿ ಕ್ರಮವಾಗಿ ಮೊದಲ ಮೂರು ಸ್ಥಾನಗಳನ್ನು ಪಡೆದಿವೆ.

ಜಾಗತಿಕ ಬ್ರ್ಯಾಂಡ್ ಸಮಾಲೋಚನಾ ಸಂಸ್ಥೆ 'ಇಂಟರ್‌ಬ್ರ್ಯಾಂಡ್' 2023ನೇ ಸಾಲಿನ ಈ ಪಟ್ಟಿಯನ್ನು ಸಿದ್ಧಪಡಿಸಿದೆ. ರಿಲಯನ್ಸ್ ಸಮೂಹಕ್ಕೆ ಸೇರಿರುವ ಜಿಯೊ ಕಂಪನಿಯು ಪಟ್ಟಿಯಲ್ಲಿ 5ನೇ ಸ್ಥಾನ ಪಡೆದಿದೆ.

4ನೇ ಸ್ಥಾನದಲ್ಲಿ ಎಚ್‌ಡಿಎಫ್‌ಸಿ ಇದೆ. ಏರ್‌ಟೆಲ್, ಎಲ್‌ಐಸಿ, ಮಹೀಂದ್ರ, ಎಸ್‌ಬಿಐ ಮತ್ತು ಐಸಿಐಸಿಐ ಈ ಪಟ್ಟಿಯಲ್ಲಿ ಇರುವ ಇತರ ಬ್ರ್ಯಾಂಡ್‌ಗಳು. ಈ ವರ್ಷ, ತಂತ್ರಜ್ಞಾನ ಕ್ಷೇತ್ರದ ಮೂರು ಬ್ರ್ಯಾಂಡ್‌ಗಳು ಟಾಪ್ 5ರಲ್ಲಿ ಸ್ಥಾನ ಪಡೆದಿವೆ ಎಂದು ಇಂಟರ್‌ಬ್ರ್ಯಾಂಡ್ ಹೇಳಿದೆ.

ಟಿಸಿಎಸ್ ಬ್ರ್ಯಾಂಡ್ ಮೌಲ್ಯ ₹1.09 ಲಕ್ಷ ಕೋಟಿ, ರಿಲಯನ್ಸ್ ಬ್ರ್ಯಾಂಡ್ ಮೌಲ್ಯ ₹65,320 ಕೋಟಿ ಹಾಗೂ ಇನ್ಫೊಸಿಸ್ ಬ್ರ್ಯಾಂಡ್ ಮೌಲ್ಯ ₹53,323 ಕೋಟಿ ಎಂದು ವರದಿ ಹೇಳಿದೆ.

ಸಬ್ಸಿಡಿ ಇಳಿಕೆ: ಇ.ವಿ. ಬೆಲೆ ಏರಿಕೆ

ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ ವಾಹನಗಳಿಗೆ (ಇ.ವಿ) ಸಿಗುವ ಸಬ್ಸಿಡಿಯು ಜೂನ್ 1ರಿಂದ ಅನ್ವಯವಾಗುವಂತೆ ಕಡಿಮೆ ಆಗಿದ್ದು, ಇ.ವಿ. ದ್ವಿಚಕ್ರ ವಾಹನ ತಯಾರಿಕಾ ಕಂಪನಿಗಳಾದ ಟಿವಿಎಸ್, ಏಥರ್ ಮತ್ತು ಓಲಾ ತಮ್ಮ ವಾಹನಗಳ ಬೆಲೆ ಹೆಚ್ಚಿಸಿವೆ.

ಐಕ್ಯೂಬ್ ಬೆಲೆಯನ್ನು ₹17 ಸಾವಿರದಿಂದ ₹20 ಸಾವಿರದವರೆಗೆ ಹೆಚ್ಚಿಸುತ್ತಿರುವುದಾಗಿ ಟಿವಿಎಸ್ ಹೇಳಿದೆ. ಏಥರ್ ಕಂಪನಿಯು 450X ಮಾದರಿಯ ಬೆಲೆಯನ್ನು ₹1.45 ಲಕ್ಷಕ್ಕೆ ಹೆಚ್ಚಿಸಿದೆ (ಬೆಂಗಳೂರು ಎಕ್ಸ್ ಷೋರೂಂ ಬೆಲೆ). 450X ಪ್ರೊ ಮಾದರಿಯ ಬೆಲೆಯಲ್ಲಿ ₹8 ಸಾವಿರದಷ್ಟು ಹೆಚ್ಚಳ ಆಗಿದೆ.

ಓಲಾ ಕಂಪನಿಯು ಎಸ್1 ಪ್ರೊ ಬೆಲೆಯನ್ನು ₹1,39,999ಕ್ಕೆ ಹೆಚ್ಚಿಸಿದೆ. ಕಂಪನಿಯ ದ್ವಿಚಕ್ರ ವಾಹನಗಳ ಬೆಲೆಯು ಸರಿಸುಮಾರು ₹15 ಸಾವಿರದಷ್ಟು ಹೆಚ್ಚಾಗಿದೆ. ಆದರೆ ತಾನು ಬೆಲೆ ಹೆಚ್ಚಿಸುವುದಿಲ್ಲ ಎಂದು ಹೀರೊ ಎಲೆಕ್ಟ್ರಿಕ್ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಎಲಕ್ಕಿ ಧಾರಣೆ
ಸಕಲೇಶಪುರ
ಕೊಳೆ 300-350
ನಡುಗೋಟು 450-500
ರಾಶಿ 500-550
ರಾಶಿ ಉತ್ತಮ 750-800
ಜರಡಿ 1000 - 1050
ಹರಕಲು 1200-1300
ಹಸಿರು ಸಾಧಾರಣ 800-900
ಹಸಿರು ಉತ್ತಮ 1000-1100
ಹಸಿರು ಅತಿ ಉತ್ತಮ 1600-1650
ಕಾಳು ಮೆಣಸು 475
ಅಡಿಕೆ
ಕಾರ್ಕಳ
ಹೊಸತು 30000-40500
ಹಳತು 40000-53000
ಸಾಗರ
ಬಿಳಿಗೋಟು 29281-32499
ಚಾಲಿ 31299-37039
ಕೋಕ 22012-34989
ಕೆಂಪುಗೋಟು 22569-35629
ರಾಶಿ 43299-49919
ಸಿಪ್ಪೆಗೋಟು 4281-21495
ಶಿವಮೊಗ್ಗ
ಬೆಟ್ಟೆ 46000-54699
ಗೊರಬಲು 18000-36300
ರಾಶಿ 33419-50099
ಸರಕು 50000-82503
ಚನ್ನಗಿರಿ
ರಾಶಿ 48599-49900
ಬೆಂಗಳೂರು
ಸರಕು 55000-60000
ಪುತ್ತೂರು
ಹೊಸತು 33500-40500
ಶಿರಾಳಕೊಪ್ಪ
ಬಿಳಿಗೋಟು 30619-32969
ಚಾಲಿ 35609-37499
ಕೋಕ 28899-32889
ಹಸಿಅಡಿಕೆ 34899-37600
ಕೆಂಪುಗೋಟು 31989-32619
ರಾಶಿ 33419-50099
ತಟ್ಟಿಬೆಟ್ಟೆ 37099-37099
ಶಿರಸಿ
ಬೆಟ್ಟೆ 38509-43999
ಬಿಳಿಗೋಟು 23029-32899
ಚಾಲಿ 35399-38211
ಕೆಂಪುಗೋಟು 24499-34569
ರಾಶಿ 44199-47018
ಯಲ್ಲಾಪುರ
ಅಪಿ 54699-58379
ಬಿಳಿಗೋಟು 26899-34499
ಚಾಲಿ 34899-38836
ಕೋಕ 17699-32899
ಕೆಂಪುಗೋಟು 28899-35612
ರಾಶಿ 40179-52699
ತಟ್ಟಿಬೆಟ್ಟೆ 38961-46299

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ದಮನ	ಪ್ಲಾಂಟೇಶನ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15000	15000	15100	177.10 ಸೆಂಟ್
ಎಚ್	7980	7800	7650	
ಆರ್‌ಪಿ	10500	10750	10675	ಲಂಡನ್
ಆರ್‌ಸಿ	5910	236 on OT	5900	2562 ಡಾಲರ್

ಟಿಎಚ್‌ಇ: ಕೊಯಮತ್ತೂರಿನ ಅಮೃತ ವಿಶ್ವವಿದ್ಯಾಪೀಠ ಭಾರತದ ಅತ್ಯುತ್ತಮ ವಿ.ವಿ

ಲಂಡನ್ (ಪಿಟಿಐ): ವಿಶ್ವದ ಅತ್ಯುತ್ತಮ ವಿಶ್ವವಿದ್ಯಾಲಯಗಳ ಶ್ರೇಯಾಂಕ ಪಟ್ಟಿ 'ಟೈಮ್ಸ್ ಹೈಯರ್ ಎಜುಕೇಷನ್ (ಟಿಎಚ್‌ಇ) ಇಂಪ್ಯಾಕ್ಟ್ ರ‍್ಯಾಂಕಿಂಗ್ 2023' ಗುರುವಾರ ಬಿಡುಗಡೆಯಾಗಿದ್ದು, ತಮಿಳುನಾಡಿನ ಕೊಯಮತ್ತೂರಿನ ಅಮೃತ ವಿಶ್ವ ವಿದ್ಯಾಪೀಠ ಜಾಗತಿಕ ಮಟ್ಟದಲ್ಲಿ 52ನೇ ರ‍್ಯಾಂಕ್ ಪಡೆದಿದೆ.

ಈ ಮೂಲಕ ಈ ವಿಶ್ವವಿದ್ಯಾಲಯವು ಭಾರತದ ಅತ್ಯುತ್ತಮ ಶ್ರೇಣಿಯ ವಿಶ್ವವಿದ್ಯಾಲಯ ಎನಿಸಿಕೊಂಡಿದೆ.

ಆಸ್ಟ್ರೇಲಿಯಾದ ವೆಸ್ಟರ್ನ್ ಸಿಡ್ನಿ ವಿ.ವಿ, ಬ್ರಿಟನ್‌ನ ಯುನಿವರ್ಸಿಟಿ ಆಫ್ ಮ್ಯಾಂಚೆಸ್ಟರ್, ಕೆನಡಾದ ಕ್ವೀನ್ಸ್ ಯುನಿವರ್ಸಿಟಿಗಳು ಅತ್ಯುತ್ತಮ ರ‍್ಯಾಂಕ್ ಪಡೆದಿವೆ. ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿ (ಎಸ್‌ಡಿಜಿ) ತಲುಪುವ ನಿಟ್ಟಿನಲ್ಲಿ ಈ ವಿಶ್ವವಿದ್ಯಾಲಯಗಳು ಗಮನಾರ್ಹ ಸಾಧನೆ ಮಾಡಿವೆ ಎನ್ನಲಾಗಿದೆ.

ಜಗತ್ತಿನ 300 ಅತ್ಯುತ್ತಮ ವಿ.ವಿಗಳಲ್ಲಿ ಭಾರತದ ಹಲವು ವಿ.ವಿಗಳು ಸ್ಥಾನ ಪಡೆದಿವೆ. ಪಂಜಾಬ್‌ನ ಲವ್ಲಿ ಪ್ರೊಫೆಷನಲ್ ವಿ.ವಿ ಹಿಮಾಚಲ ಪ್ರದೇಶದ ಶೂಲಿನಿ ಯುನಿವರ್ಸಿಟಿ ಆಫ್ ಬಯೋಟೆಕ್ನಾಲಜಿ ಅಂಡ್ ಮ್ಯಾನೇಜ್‌ಮೆಂಟ್ ಸೈನ್ಸ್ 101ರಿಂದ 200 ಒಳಗಿನ ರ‍್ಯಾಂಕ್‌ಗಳನ್ನು ಪಡೆದಿವೆ.

ಒಡಿಶಾದ ಕಳಿಂಗ ವಿ.ವಿಯು 201ರಿಂದ 300ರ ಒಳಗಿನ ರ‍್ಯಾಂಕ್ ಪಟ್ಟಿಯಲ್ಲಿದೆ.

'ಭಾರತದ ವಿ.ವಿಗಳ ಸಾಧನೆ ನೋಡಲು ಸಂತೋಷವಾಗುತ್ತಿದೆ. ವಿಶ್ವದ ಅತ್ಯುತ್ತಮ 100 ವಿ.ವಿಗಳಲ್ಲಿ 52ನೇ ಸ್ಥಾನವನ್ನು ಭಾರತದ ವಿ.ವಿ ಪಡೆದಿರುವುದು ಮತ್ತು 17 ಸುಸ್ಥಿರ ಅಭಿವೃದ್ಧಿ ಗುರಿಯಲ್ಲಿ 10 ಗುರಿಗಳನ್ನು ತಲುಪಿರುವ ಪ್ರಮುಖ 100 ವಿ.ವಿಗಳಲ್ಲಿ ಸ್ಥಾನ ಪಡೆದಿರುವುದು ನೋಡಿದರೆ, ಭಾರತದ ವಿ.ವಿಗಳು ಪ್ರಮುಖ ಗುರಿಗಳನ್ನು ಎಷ್ಟು ಗಂಭೀರವಾಗಿ ಪರಿಗಣಿಸಿವೆ ಎಂಬುದು ಗೊತ್ತಾಗುತ್ತದೆ' ಎಂದು ಟಿಎಚ್‌ಇಯ ಉನ್ನತ ಅಧಿಕಾರಿ ಫಿಲ್ ಬಾಟಿ ಶ್ಲಾಘಿಸಿದ್ದಾರೆ.

ತಯಾರಿಕಾ ವಲಯ: 31 ತಿಂಗಳ ಗರಿಷ್ಠ

ಹೊಸ ವಹಿವಾಟುಗಳಿಗೆ ಬೇಡಿಕೆ; ಮಾರುಕಟ್ಟೆಯಲ್ಲಿ ಪೂರಕ ವಾತಾವರಣ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆಯು ಮೇ ತಿಂಗಳಿನಲ್ಲಿ ಇನ್ನಷ್ಟು ಸುಧಾರಣೆ ಕಂಡಿದ್ದು 31 ತಿಂಗಳ ಗರಿಷ್ಠ ಮಟ್ಟ ತಲುಪಿದೆ ಎಂದು ಎಸ್ ಆ್ಯಂಡ್ ಪಿ ಇಂಡಿಯಾ ಸಂಸ್ಥೆ ಗುರುವಾರ ಹೇಳಿದೆ.

ಹೊಸ ವಹಿವಾಟುಗಳಿಗೆ ಬೇಡಿಕೆ ಹೆಚ್ಚಾಗುತ್ತಿರುವುದು ಹಾಗೂ ಮಾರುಕಟ್ಟೆಯು ಅನುಕೂಲಕರವಾಗಿ ಇರುವುದರಿಂದ ಹೆಚ್ಚಿನ ಉದ್ಯೋಗಾವಕಾಶಗಳು ಸೃಷ್ಟಿಯಾಗಿವೆ ಎಂದು ಸಂಸ್ಥೆಯು ತಿಳಿಸಿದೆ.

ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಏಪ್ರಿಲ್‌ನಲ್ಲಿ 57.2 ಇದ್ದಿದ್ದು ಮೇ ತಿಂಗಳಿನಲ್ಲಿ 58.7ಕ್ಕೆ ಏರಿಕೆ ಕಂಡಿದೆ. 2020ರ ಅಕ್ಟೋಬರ್ ನಂತರದ ಗರಿಷ್ಠ ಮಟ್ಟ ಇದಾಗಿದೆ.

ಭಾರತದಲ್ಲಿ ತಯಾರಾಗುವ ಉತ್ಪನ್ನಗಳಿಗೆ ದೇಶದ ಮತ್ತು ಜಾಗತಿಕ ಮಾರುಕಟ್ಟೆಗಳಲ್ಲಿ ಉತ್ತಮ ಬೇಡಿಕೆ ಇದೆ ಎನ್ನುವುದನ್ನು ಈ ಬೆಳವಣಿಗೆಯು ಸೂಚಿಸುತ್ತದೆ.

ಮುಖ್ಯಾಂಶಗಳು
- ಸತತ 23ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಚಲನೆ
- ಪೂರೈಕೆ ವ್ಯವಸ್ಥೆ ಸುಧಾರಣೆ
- 5 ತಿಂಗಳ ಗರಿಷ್ಠ ಮಟ್ಟಕ್ಕೆ ವಹಿವಾಟು ನಡೆಸುವ ವಿಶ್ವಾಸ

ದೇಶದಲ್ಲಿ ಮಾರಾಟ ಹೆಚ್ಚಾಗುತ್ತಿರುವುದು ದೇಶದ ಆರ್ಥಿಕ ತಳಹದಿಯನ್ನು ಇನ್ನಷ್ಟು ಬಲಪಡಿಸಲಿದೆ. ವಿದೇಶಿ ವಹಿವಾಟುಗಳು ಹೆಚ್ಚಾಗುವುದರಿಂದ ಅಂತರರಾಷ್ಟ್ರೀಯ ಪಾಲುದಾರಿಕೆಗಳು ಬಲಗೊಳ್ಳಲಿವೆ. ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ಸ್ಥಾನ ಸುಧಾರಿಸಲಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ ಲಿಮಾ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರಾಟದಲ್ಲಿ ಭಾರತದ ಕಂಪನಿಗಳು ಆರು ತಿಂಗಳ ವೇಗದ ಬೆಳವಣಿಗೆ ಕಂಡಿವೆ ಎಂದು ಸಂಸ್ಥೆ ಹೇಳಿದೆ.

ಸುಡಾನ್: ವಾಯುದಾಳಿಗೆ 18 ಸಾವು

ಖಾರ್ಟೂಮ್ (ಎಎಫ್‌ಪಿ): ಸುಡಾನ್ ರಾಜಧಾನಿ ಖಾರ್ಟೂಮ್‌ನ ಮಾರುಕಟ್ಟೆ ಪ್ರದೇಶದ ಮೇಲೆ ಅಲ್ಲಿಯ ಸೇನೆಯು ಬುಧವಾರ ವಾಯುದಾಳಿ ನಡೆಸಿದೆ. ದಾಳಿಯಲ್ಲಿ 18 ಜನರು ಮೃತಪಟ್ಟಿದ್ದು 106 ಜನರು ಗಾಯಗೊಂಡಿದ್ದಾರೆ. ಕದನವಿರಾಮ ಮಾತುಕತೆಯಿಂದ ಸುಡಾನ್ ಸೇನೆ ಹಿಂದೆ ಸರಿದ ಬೆನ್ನಲ್ಲೇ ಈ ದಾಳಿ ನಡೆದಿದೆ.

ಸೇನಾ ಮುಖ್ಯಸ್ಥ ಅಬ್ದೆಲ್ ಫತ್ತಾ ಅಲ್‌–ಬುರ್ಹಾನ್ ಅವರ ನಿಷ್ಠ ಸೇನಾ ಸಿಬ್ಬಂದಿ ಉತ್ತರ ಮತ್ತು ದಕ್ಷಿಣ ಖಾರ್ಟೂಮ್‌ನಲ್ಲಿ ಬಂಡುಕೋರರ ಹಿಡಿತದಲ್ಲಿರುವ ಪ್ರದೇಶಗಳ ಮೇಲೆ ತೀವ್ರವಾಗಿ ದಾಳಿ ನಡೆಸಿದ್ದಾರೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಸುಡಾನ್‌ನಲ್ಲಿ ಘರ್ಷಣೆಗಿಳಿದಿರುವ ಸೇನೆ ಮತ್ತು ಸಶಸ್ತ್ರ ಬಂಡುಕೋರ ಗುಂಪು ಮೇಲಿಂದ ಮೇಲೆ ಕದನ ವಿರಾಮ ಉಲ್ಲಂಘಿಸುತ್ತಿವೆ. ಉಭಯ ಬಣಗಳು ಮಾತುಕತೆಗೆ ತಯಾರಾಗ ಬೇಕೆಂಬ ಅಮೆರಿಕ ಆಗ್ರಹದಲ್ಲಿ ಮಧ್ಯಸ್ಥಿಕೆ ವಹಿಸುತ್ತಿದೆ ಎಂದು ಅಮೆರಿಕ ಗುರುವಾರ ಎಚ್ಚರಿಸಿದೆ.

ಮುಂಬೈ ಧಾರಣೆ

ಶೇಂಗಾ
1-6-2023

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆಗಿದ ಬಿಟ್ಟು)	1580 (1560)
10ರ ವಾರದ ಡೆಲಿವರಿ	1575 (1555)
ಸೋಯಾ ಕಚ್ಚಾ	812 (835)
ಪಾಮ್ ವಾರದ ಡೆಲಿವರಿ	818 (823)
ಸೂರ್ಯಕಾಂತಿ ಎಣ್ಣೆ ಕಚ್ಚಾ	800 (800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿ)

ಅಪರಂಜಿ ಚಿನ್ನ 10ಗ್ರಾಂ
59,950 (60,100)
ಬೆಳ್ಳಿ ಕೆ.ಜಿ 71,400 (70,950)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸದಸ್ಯತ್ವ ಅನರ್ಹತೆ ಕುರಿತು ರಾಹುಲ್ ಹೇಳಿಕೆ • ಪ್ರಧಾನಿಯೂ ವಿದ್ಯಾರ್ಥಿಗಳೊಂದಿಗೆ ಚರ್ಚಿಸಲಿ

'ಅನರ್ಹತೆ: ನನಗೆ ಸಿಕ್ಕ ದೊಡ್ಡ ಅವಕಾಶ'

ಸ್ಯಾನ್ ಫ್ರೋರ್ಡ್/ನ್ಯೂಯಾರ್ಕ್ (ಪಿಟಿಐ): 'ರಾಜಕೀಯ ಪ್ರವೇಶ ಮಾಡಿದಾಗ, ಮುಂದೊಂದು ದಿನ ಲೋಕಸಭೆಯ ಸದಸ್ಯತ್ವದಿಂದ ನನ್ನನ್ನು ಅನರ್ಹಗೊಳಿಸಲಾಗುತ್ತದೆ ಎಂದು ಕಲ್ಪನೆಯೂ ಇರಲಿಲ್ಲ. ಆದರೆ, ಅನರ್ಹಗೊಳಿಸಿರುವುದು ಜನರ ಸೇವೆ ಮಾಡಲು ನನಗೆ 'ಬಹುದೊಡ್ಡ ಅವಕಾಶ'ವಾಗಿ ಪರಿಣಮಿಸಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಅಮೆರಿಕದ ಪ್ರವಾಸದಲ್ಲಿರುವ ರಾಹುಲ್, ಬುಧವಾರ ರಾತ್ರಿ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಭಾರತೀಯ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸಿದರು.

'2000ರಲ್ಲಿ ನಾನು ರಾಜಕೀಯ ಪ್ರವೇಶ ಮಾಡಿದೆ. ಆಗ ನಾನು ಹೀಗಾಗಬಹುದು ಎಂದು ಭಾವಿಸಿರಲಿಲ್ಲ. ಆದರೆ, ಹೀಗೆ ಆಗಿರುವುದು ನನಗೆ ಸಿಕ್ಕ 'ದೊಡ್ಡ ಅವಕಾಶ'. ಬಹುಶಃ ನನಗೆ ಸಿಗಬಹುದಾಗಿದ್ದ ದೊಡ್ಡ ಅವಕಾಶವೇ ಸಿಕ್ಕಿದೆ. ಇದೇ ಅಲ್ಲವೇ ರಾಜಕೀಯ' ಎಂದರು.

'ಈ ಎಲ್ಲ ನಾಟಕ ಆರಂಭವಾಗಿದ್ದು, ಆರು ತಿಂಗಳ ಹಿಂದೆ. ನಾವು ಒದ್ದಾಡುತ್ತಿದ್ದೆವು. ಭಾರತದ ಎಲ್ಲ ವಿರೋಧ ಪಕ್ಷಗಳೂ ಒದ್ದಾಡುತ್ತಿದ್ದವು. ಆದರೆ, ಅವರ ಬಳಿ ಆರ್ಥಿಕ ಬಲವಿತ್ತು, ಸಂಸ್ಥೆಗಳನ್ನು ಕಬಳಿಸಿದ್ದರು. ದೇಶದಲ್ಲಿ ನಾವು ಪ್ರಜಾಸತ್ತಾತ್ಮಕ ಹೋರಾಟ ನಡೆಸಲು ಹೆಣಗುತ್ತಿದ್ದೆವು. ಈ ಹೊತ್ತಿನಲ್ಲಿ ಭಾರತ ಜೋಡೊ ಯಾತ್ರೆ ಮಾಡಲು ನಾನು ನಿರ್ಧರಿಸಿದೆ' ಎಂದರು.

'ಇಲ್ಲಿ ಭಾರತೀಯ ವಿದ್ಯಾರ್ಥಿಗಳ ಗುಂಪಿದೆ. ನಿಮ್ಮೊಂದಿಗೆ ಸಂಪರ್ಕ ಇಟ್ಟುಕೊಳ್ಳಲು ಮತ್ತು ನಿಮ್ಮೊಂದಿಗೆ ಸಂಭಾಷಿಸಲು ನಾನು ಬಯಸುತ್ತೇನೆ. ಇದು ನನ್ನ ಹಕ್ಕು. ಹೀಗೆ ನಾನು ವಿದೇಶ ಪ್ರವಾಸ ಮಾಡುವುದು ಯಾರದ್ದೋ ಸಹಾಯ ಕೋರಲು ಅಲ್ಲ' ಎಂದರು.

'ನಮ್ಮ ಪ್ರಧಾನಿ ಯಾಕೆ ಇಲ್ಲಿಗೆ ಬಂದು, ನಿಮ್ಮೊಂದಿಗೆ ಮಾತನಾಡುವುದಿಲ್ಲ' ಎಂದು ರಾಹುಲ್ ಅವರು ಪ್ರಶ್ನಿಸುತ್ತಿದ್ದಂತೆಯೇ, 'ಪ್ರಧಾನಿ ಮೋದಿ ಅವರಿಗೆ ನಮ್ಮ ವಿಶ್ವವಿದ್ಯಾಲಯಕ್ಕೆ ಸದಾ ಸ್ವಾಗತ ಇದೆ. ಯಾವಾಗ ಬೇಕಾದರೂ ಅವರು ಇಲ್ಲಿಗೆ ಬರಬಹುದು. ನಮ್ಮ ವಿದ್ಯಾರ್ಥಿಗಳೊಂದಿಗೆ ಮಾತನಾಡಬಹುದು' ಎಂದು ಕಾರ್ಯಕ್ರಮದ ನಿರೂಪಕರು ಹೇಳಿದರು.

ಇಡೀ ಸಭಾಂಗಣ ವಿದ್ಯಾರ್ಥಿಗಳಿಂದ ತುಂಬಿತ್ತು. ಹೀಗಾಗಿ ಇನ್ನೂ ಕೆಲವು ವಿದ್ಯಾರ್ಥಿಗಳಿಗೆ ಸಭಾಂಗಣದ ಒಳಗೆ ಹೋಗಲು ಅವಕಾಶ ಸಿಗಲಿಲ್ಲ. ಕಾರ್ಯಕ್ರಮದಲ್ಲಿ ಭಾಗವಹಿಸುವ ಸಲುವಾಗಿಯೇ, ಕಾರ್ಯಕ್ರಮ ಆರಂಭವಾಗುವ ಎರಡು ತಾಸಿಗೂ ಮುನ್ನ ವಿದ್ಯಾರ್ಥಿಗಳು ಸಾಲುಗಟ್ಟಿ ನಿಂತಿದ್ದರು.

ಸ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಭಾರತೀಯ ವಿದ್ಯಾರ್ಥಿಗಳೊಂದಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ರಾತ್ರಿ ಸಂವಾದ ನಡೆಸಿದರು –ಪಿಟಿಐ ಚಿತ್ರ

ಇದು ನಮ್ಮ ಹೋರಾಟ, ಇದನ್ನು ನಾವೇ ಹೋರಾಡಬೇಕು ಎಂಬ ಬಗ್ಗೆ ನನಗೆ ಸಂಶಯವಿಲ್ಲ
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

7ರಂದು ಮ್ಯಾಕ್ ಪೆನ್ಸ್ ಪ್ರಚಾರ

ನ್ಯೂಯಾರ್ಕ್ (ಪಿ): ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಲು ಪೈಪೋಟಿ ನಡೆದಿದ್ದು, ಮಾಜಿ ಉಪಾಧ್ಯಕ್ಷ ಮೈಕ್ ಪೆನ್ಸ್ ಜೂನ್ 7ರಂದು ಅಯೋವಾದಲ್ಲಿ ಪ್ರಚಾರ ಆರಂಭಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಮಾಜಿ ಅಧ್ಯಕ್ಷ ಟ್ರಂಪ್ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಬಯಸುವುದಾಗಿ ಈಗಾಗಲೇ ಘೋಷಿಸಿದ್ದಾರೆ.

'ಅಲ್ಪಸಂಖ್ಯಾತ ಗುಂಪಿನ ನಿಯಂತ್ರಣ ಇಲ್ಲ'

'ರಾಹುಲ್ ಗಾಂಧಿ ಅವರ ಕಾರ್ಯಕ್ರಮವನ್ನು ಅಲ್ಪಸಂಖ್ಯಾತ ಗುಂಪೊಂದು ನಿಯಂತ್ರಿಸುತ್ತಿದೆ ಎಂಬ ಸುದ್ದಿ ಹಬ್ಬಿಸಲಾಗುತ್ತಿದೆ. ಇದು ಸತ್ಯಕ್ಕೆ ದೂರವಾದದ್ದು. ಕಾರ್ಯಕ್ರಮದ ಕುರಿತು ಸುಳ್ಳು ಮಾಹಿತಿ ಹರಡಲಾಗುತ್ತಿದೆ' ಎಂದು ಅಮೆರಿಕದ ಸಾಗರೋತ್ತರ ಕಾಂಗ್ರೆಸ್ (ಐಒಸಿಯುಎಸ್‌ಎ) ಹೇಳಿದೆ.

'ರಾಹುಲ್ ಅವರ ಕಾರ್ಯಕ್ರಮಗಳು ಭಾರತ ಹಾಗೂ ಅಮೆರಿಕದಲ್ಲಿ ಸಾರ್ವಜನಿಕರ ಗಮನ ಸೆಳೆಯುತ್ತಿವೆ. ಪ್ರಗತಿಶೀಲ ದೃಷ್ಟಿಕೋನವುಳ್ಳ ಅವರ ವಿಚಾರಗಳನ್ನು ಕೇಳಲು ಜನರು ಉತ್ಸುಕರಾಗಿದ್ದಾರೆ. ಇದು ಕೇವಲ ಊಹೆಯಷ್ಟೆ. ಅದಕ್ಕಾಗಿಯೇ ಈ ರೀತಿ ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ' ಎಂದಿದೆ.

'ಚೀನಾ ನಮ್ಮ ಮೇಲೆ ಸವಾರಿ ಮಾಡಲು ಸಾಧ್ಯವಿಲ್ಲ'

'ಚೀನಾ–ಭಾರತ ನಡುವಿನ ಸಂಬಂಧ ಅಷ್ಟೊಂದು ಚೆನ್ನಾಗಿಲ್ಲ. ಆದರೆ, ಚೀನಾವು ನಮ್ಮ ಮೇಲೆ ಸವಾರಿ ಮಾಡಲು ಸಾಧ್ಯವಿಲ್ಲ. ಅದು ಅಷ್ಟು ಸುಲಭ ಅಲ್ಲ' ಎಂದು ರಾಹುಲ್ ಗಾಂಧಿ ಹೇಳಿದರು.

'ಮುಂದಿನ 5–10 ವರ್ಷಗಳಲ್ಲಿ ಭಾರತ–ಚೀನಾ ಸಂಬಂಧ ಯಾವ ರೀತಿ ಇರಲಿದೆ ಎಂದು ನೀವು ಭಾವಿಸುತ್ತೀರಿ' ಎಂದು ವಿದ್ಯಾರ್ಥಿಯೊಬ್ಬರು ಪ್ರಶ್ನಿಸಿದ್ದರು.

'ಸದ್ಯಕ್ಕಂತೂ ಸಂಬಂಧ ಸುಧಾರಣೆ ಕಷ್ಟವಿದೆ. ಅವರು ನಮ್ಮ ಕೆಲವು ಪ್ರದೇಶಗಳನ್ನು ಆಕ್ರಮಿಸಿಕೊಂಡಿದ್ದಾರೆ. ಆದರೂ, ಅವರು ನಮ್ಮ ಮೇಲೆ ಎರಗಲು ಸಾಧ್ಯವಿಲ್ಲ. ಇದು ಆಗುವುದೂ ಇಲ್ಲ' ಎಂದು ರಾಹುಲ್ ಉತ್ತರಿಸಿದರು.

ರಷ್ಯಾ–ಭಾರತ ಸಂಬಂಧದ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, 'ನಾವು ರಷ್ಯಾದೊಂದಿಗೆ ಉತ್ತಮ ಸಂಬಂಧ ಹೊಂದಿದ್ದೇವೆ. ಹಲವು ವಿಷಯಗಳಲ್ಲಿ ನಾವು ಅವರನ್ನು ಅವಲಂಬಿಸಿದ್ದೇವೆ. ಆದ್ದರಿಂದ ಈ ಬಗ್ಗೆ ಭಾರತ ಸರ್ಕಾರದ ನಿಲುವೇ ನನ್ನ ನಿಲುವು' ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611227266/ 9611221244

ಮನೆಯಲ್ಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000/- ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ- 8884777502, 8884777503.

ಮಣಿಯಾಲದಲ್ಲಿ ಕೆಲಸ:ಪ್ಯಾನಲ್ ಪ್ಯಾಕಿಂಗ್ ಮೆಡಿಸಿನ್ ಬಾಕ್ಸ್ ಪ್ಯಾಕಿಂಗ್ ಮೆಹಂದಿ ಪ್ಯಾಕೆಟ್ ಪ್ಯಾಕಿಂಗ್ ಹಾಗೂ ಗುಡ್ ಲಿಫ್ಟ್ ಕವರ್ ಪ್ಯಾಕಿಂಗ್ ಹುಡುಗರು,ಗಳಿಸಿ 18000-25000 ವಯಸ್ಸಿನ ಮಿತಿಯಿಲ್ಲ, ಟಾರ್ಗೆಟ್ ಇಲ್ಲ. 7795745809.

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯುಳ್ಳದ್ದು ಸಂಬಳ 16,000- 80,000. 7760014526, 7795199673

Hotel

ಬೆಂಗಳೂರಿನ ಉತ್ತರಹಳ್ಳಿಯಲ್ಲಿರುವ ಹೊಟೇಲ್‌ಗೆ ಸೌತ್‌ಇಂಡಿಯನ್ ಕುಕ್, ಸಹಾಯಕರು, ಕ್ಲೀನರ್‌ಗಳು ಬೇಕಾಗಿದ್ದಾರೆ. ಊಟ, ವಸತಿಯೊಂದಿಗೆ ಆಕರ್ಷಕ ಸಂಬಳ ಸಂಪರ್ಕಿಸಿ: 9148783551

General

ಪ್ರವಾಸ

Travel

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ AC ಬಸ್/ AC ರೂಮ್ 01.06.2023 8 ದಿನಗಳ ಕಾಶಿ,ಬುದ್ಧಗಯಾ ಅಲಹಾಬಾದ್. 08.06.2023 ಚಾರ್‌ಧಾಮ್ ಸಹಿತ ಪ್ರವಾಸ. 10.06.2023 ನೇಪಾಳ ಮುಕ್ತಿನಾಥ್,ಪೋಖ್ರಾ. 23.06.2023 ಸೋಮನಾಥ ನಿಷ್ಕಳಂಕಮಹಾದೇವ ಓಂಕಾರೇಶ್ವರ್ ಮಹಾಕಾಳೇಶ್ವರ್. 05.07.2023 14.07.2023 ಅಮರನಾಥ ವೈಷ್ಣೋದೇವಿ,ಕಾಶ್ಮೀರ್ ಗುಲ್ಮಾರ್ಗ್ ಸಂಪರ್ಕಿಸಿ ವಿಷ್ಣನ್ ಟ್ರಾವೆಲ್ ಏಜೆನ್ಸಿ, ಕೆಳಮಹಡಿ ಬೆಂಗಳೂರು-4. 26574131 9448508708 9686708171

ರಾಜ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು, ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ.12,000 - 17,000. 8951315839, 9880120052

ಪ್ರಜಾವಾಣಿ DH
JOB CORNER
BOOK JOB ADS ON WEEKDAY + SUNDAY
@ 803/-* Per Sqcm Single Column
@ 825/-* Per Sqcm Multi Column
conditions apply
For more information Contact:
9845114560 : 9731810277
9901641752 : 9886213331
080 - 45557163 / 164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳ ವಿಶ್ವಾಸಾರ್ಹತೆಯನ್ನು ಖಾತರಿಪಡಿಸಲು ಅಸಾಧ್ಯ. ಆದರೆ, ಅದರಲ್ಲಿ ಪ್ರಕಟವಾದ ವಿಷಯ, ವಿಚಾರಗಳ ಜಾಹೀರಾತುದಾರರ ಜೊತೆ ವ್ಯವಹರಿಸುವ ಮೊದಲು ಓದುಗರು ಪತ್ರಿಕೆ ಅಭಿಪ್ರಾಯವನ್ನು ಪಡೆದುಕೊಳ್ಳುವುದು ಸೂಕ್ತ. ಈ ಅಭಿಪ್ರಾಯವನ್ನು ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ. ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ., ಬೆಂಗಳೂರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಅನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸಂಕ್ಷಿಪ್ತ ಸುದ್ದಿ

ಅತ್ಯಾಚಾರ: ನಟ ಡ್ಯಾನಿ ಮಾಸ್ಟರ್‌ಸನ್‌ಗೆ 30 ವರ್ಷ ಜೈಲು ಶಿಕ್ಷೆ

ಲಾಸ್ ಏಂಜಲೀಸ್ (ಎಪಿ): ಇಬ್ಬರು ಮಹಿಳೆಯರ ಮೇಲೆ ಅತ್ಯಾಚಾರ ಎಸಗಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಕಿರುತೆರೆಯ 'ದಟ್ 70ರ ಶೋ' ಖ್ಯಾತಿಯ ಅಮೆರಿಕದ ನಟ ಡ್ಯಾನಿ ಮಾಸ್ಟರ್‌ಸನ್‌ಗೆ 30 ವರ್ಷ ಜೈಲು ಶಿಕ್ಷೆಗೆ ಗುರಿಯಾಗಿದ್ದಾರೆ.

ಡ್ಯಾನಿ ಮಾಸ್ಟರ್‌ಸನ್

ಇಲ್ಲಿನ ನ್ಯಾಯಾಲಯದಲ್ಲಿ ಬುಧವಾರ ನ್ಯಾಯಾಧೀಶರು ತೀರ್ಪು ಓದುವಾಗ ಮಾಸ್ಟರ್‌ಸನ್ ಅವರ ಪತ್ನಿ ಮಾಡೆಲ್ ಆದ ಬಿಜೆ ಫಿಲಿಪ್ಸ್ ಗದ್ಗದಿತರಾದರು. ಕೋರ್ಟ್ ಹಾಲ್‌ನಲ್ಲಿದ್ದ ನಟನ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರು ಕಳವಳಗೊಂಡರು.

ಹನ್ನೆರಡು ನ್ಯಾಯಾಧೀಶರನ್ನು ಒಳಗೊಂಡ ನ್ಯಾಯಪೀಠವು 8–4 ಮತಗಳ ಆಧಾರದ ಮೇಲೆ ಶಿಕ್ಷೆ ಪ್ರಕಟಿಸಿತು.

2001ರಿಂದ 2003ರ ಅವಧಿಯಲ್ಲಿ ಮಾಸ್ಟರ್‌ಸನ್ ತನ್ನ ನಿವಾಸದಲ್ಲಿ ಬಹುಕಾಲದ ಗೆಳತಿ ಹಾಗೂ ಮತ್ತೊಬ್ಬ ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ ಆರೋಪ ಇತ್ತು. ಅವರ ಮೇಲೆ ಮತ್ತೊಂದು ಅತ್ಯಾಚಾರ ಪ್ರಕರಣ ದಾಖಲಾಗಿದ್ದು, ಇನ್ನೂ ವಿಚಾರಣೆ ನಡೆಯುತ್ತಿದೆ.

ಇಮ್ರಾನ್ ಖಾನ್ ಆಪ್ತ ಚೌಧರಿ ಪರ್ವೇಜ್ ಬಂಧನ

ಲಾಹೋರ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಆಪ್ತ ಮತ್ತು ಅವರ ನೇತೃತ್ವದ ಪಾಕಿಸ್ತಾನ್ ತೆಹ್ರೀಕ್–ಇ–ಇನ್ಸಾಫ್ (ಪಿಟಿಐ) ಅಧ್ಯಕ್ಷ ಚೌಧರಿ ಪರ್ವೇಜ್ ಇಲಾಹಿ ಅವರನ್ನು ಗುರುವಾರ ಭದ್ರತಾ ಸಿಬ್ಬಂದಿ ಬಂಧಿಸಿದ್ದಾರೆ.

77 ವರ್ಷದ ಇಲಾಹಿ ಅವರನ್ನು ಅವರ ನಿವಾಸ ಝಹೂರ್ ಇಲಾಹಿಯಿಂದ ಭ್ರಷ್ಟಾಚಾರ ನಿಗ್ರಹ ಎಸ್ಟಾಬ್ಲಿಷ್ಮೆಂಟ್‌ನ ವಿಶೇಷ ತಂಡ ವಶಕ್ಕೆ ಪಡೆದಿದೆ. 'ಈ ಸರ್ಕಾರಕ್ಕೆ ಅವರ ಫ್ಯಾಸಿಸಂ ಧೋರಣೆ ನಿಲ್ಲಿಸಿರುವುದಕ್ಕೆ ನಾಚಿಕೆಯಾಗಬೇಕು. ಹಣ ದುಬ್ಬರದ ರಾಶಿ ವೇಗದಲ್ಲಿ ಗಗನಕ್ಕೇರುತ್ತಿರುವುದಕ್ಕೆ ಸರ್ಕಾರದ ಪ್ರತಿಕ್ರಿಯೆ ಎಂದರೆ ಪಂಜಾಬ್ ಪ್ರಾಂತ್ಯದ ಮಾಜಿ ಮುಖ್ಯಮಂತ್ರಿ ಪರ್ವೇಜ್ ಇಲಾಹಿ ಅವರ ಬಂಧನ. ಇದು ನಿಜಕ್ಕೂ ಹಾಸ್ಯಾಸ್ಪದ' ಎಂದಿದ್ದಾರೆ.

ಮಣಿಪುರ ಗಲಭೆ: ರಾಜ್ಯಪಾಲರ ನೇತೃತ್ವದಲ್ಲಿ ಶಾಂತಿ ಸಮಿತಿ ರಚನೆ – ಶಾ ಘೋಷಣೆ

ನ್ಯಾಯಾಂಗ ತನಿಖೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ/ಪಿಟಿಐ



ಗಡಿಯಲ್ಲಿ ಬೇಲಿ ಅಳವಡಿಸುವ ಕಾರ್ಯವನ್ನು ಪೂರ್ಣಗೊಳಿಸಿದರೆ ಮಾತ್ರ ಭಾರತ ಮತ್ತು ಮ್ಯಾನ್ಮಾರ್ ಗಡಿ ಬಿಕ್ಕಟ್ಟಿಗೆ ಶಾಶ್ವತ ಪರಿಹಾರ ಸಿಗಲಿದೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ

ಇಂಫಾಲ್ (ಮಣಿಪುರ): ರಾಜ್ಯದಲ್ಲಿ ಭುಗಿಲೆದ್ದ ಗಲಭೆ ಕುರಿತು ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಲಾಗುವುದು ಹಾಗೂ ರಾಜ್ಯಪಾಲರಾದ ಅನಸೂಯಾ ಉಯಿಕೆ ನೇತೃತ್ವದಲ್ಲಿ ಶಾಂತಿ ಸಮಿತಿಯೊಂದನ್ನು ರಚಿಸಲಾಗುವುದು ಎಂದು ಕೇಂದ್ರ ಸರ್ಕಾರ ಗುರುವಾರ ಹೇಳಿದೆ.

ರಾಜ್ಯದಲ್ಲಿ ಶಾಂತಿ ನೆಲೆಸುವಂತೆ ಮಾಡುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ನ್ಯಾಯಾಂಗ ತನಿಖೆ ಹಾಗೂ ಶಾಂತಿ ಸಮಿತಿ ರಚನೆ ಕುರಿತು ಶೀಘ್ರವೇ ಪ್ರಕಟಣೆ ಹೊರಡಿಸಲಾಗುವುದು ಎಂದು ಹೇಳಿದರು.

‘ರಾಜ್ಯಪಾಲರ ನೇತೃತ್ವದ ಶಾಂತಿ ಸಮಿತಿಯಲ್ಲಿ ಕುಕಿ ಮತ್ತು ಮೈತೇಯಿ ಸಮುದಾಯಗಳ ಪ್ರತಿನಿಧಿಗಳಲ್ಲದೇ, ಎಲ್ಲ ರಾಜಕೀಯ ಪಕ್ಷಗಳು, ಸಾಮಾಜಿಕ ಸಂಘಟನೆಗಳ ಪ್ರತಿನಿಧಿಗಳು ಕೂಡ ಇರುವರು’ ಎಂದು ವಿವರಿಸಿದರು.

‘ರಾಜ್ಯದಲ್ಲಿನ ಐದು ಕ್ರಿಮಿನಲ್ ಪಿತೂರಿಗಳು ಹಾಗೂ ಒಂದು ಸಂಚಿನ ಪ್ರಕರಣ ಕುರಿತು ಸಿಬಿಐನಿಂದ ತನಿಖೆ ನಡೆಸಲಾಗುವುದು’ ಎಂದೂ ಮಾಹಿತಿ ನೀಡಿದರು.

‘ಮಣಿಪುರದಲ್ಲಿ ಉದ್ಭವಿಸಿರುವ ಸಮಸ್ಯೆಗೆ ಮಾತುಕತೆಯೊಂದೇ ಪರಿಹಾರ ನೀಡಬಲ್ಲದು. ಹಿಂಸಾಚಾರ ತಾತ್ಕಾಲಿಕವಾದುದು. ಒಂದೊಮ್ಮೆ ತಪ್ಪು ತಿಳಿವಳಿಕೆಗಳು ದೂರವಾದಾಗ ಪರಿಸ್ಥಿತಿ ತಿಳಿಯಾಗುವುದು’ ಎಂದರು.

‘ಸೇನೆ, ಅಸ್ಸಾಂ ರೈಫಲ್ಸ್ ಸೇರಿದಂತೆ ವಿವಿಧ ಭದ್ರತಾಪಡೆಗಳ ನಡುವೆ ಉತ್ತಮ ಸಮನ್ವಯ ಸಾಧಿಸುವುದಕ್ಕಾಗಿ ಸಿಆರ್‌ಪಿಎಫ್‌ನ ನಿವೃತ್ತ ಮಹಾ ನಿರ್ದೇಶಕ ಕುಲದೀಪ್ ಸಿಂಗ್ ನೇತೃತ್ವದಲ್ಲಿ ಏಕೀಕೃತ ಕಮಾಂಡ್ ರಚಿಸಲಾಗುವುದು’ ಎಂದು ತಿಳಿಸಿದರು.

‘ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದು ಆರು ವರ್ಷಗಳಾಗಿದ್ದು, ಈ ಅವಧಿಯಲ್ಲಿ ರಾಜ್ಯವು ಬಂದ್, ಕರ್ಫ್ಯೂಗಳಿಂದ ಮುಕ್ತವಾಗಿದ್ದನ್ನು ಖಾತ್ರಿಪಡಿಸಲಾಗಿತ್ತು. ಆದರೆ, ಈಗ ಭುಗಿಲೆದ್ದಿರುವ ಗಲಭೆಗೆ ತಪ್ಪು ತಿಳಿವಳಿಕೆಗಳು ಹಾಗೂ ಅವಸರದ ತೀರ್ಮಾನಗಳೇ ಕಾರಣ’ ಎಂದು ವಿಶ್ಲೇಷಿಸಿದರು.

‘ಕುಕಿ ಹಾಗೂ ಮೈತೇಯಿ ಸಮುದಾಯಗಳ ಜನರು ಆಶ್ರಯ ಪಡೆದಿರುವ ಶಿಬಿರಗಳಿಗೆ ಭೇಟಿ ನೀಡಿದ್ದೇನೆ. ಶಾಂತಿ ಸ್ಥಾಪನೆ ಪ್ರಯತ್ನದ ಭಾಗವಾಗಿ ಎರಡೂ ಸಮುದಾಯಗಳ ಗುಂಪುಗಳೊಂದಿಗೆ ಚರ್ಚಿಸಿದ್ದೇನೆ’ ಎಂದು ಹೇಳಿದರು.

ಗಡಿ ಸಮಸ್ಯೆ: ಮ್ಯಾನ್ಮಾರ್‌ಗೆ ಹೊಂದಿಕೊಂಡಿರುವ ಗಡಿ ಮೂಲಕ ಮಾದಕ ವಸ್ತುಗಳ ಕಳ್ಳಸಾಗಣೆ ನಡೆಯುತ್ತಿದೆ. ಬಂಡುಕೋರರು ಸಹ ನುಸುಳುತ್ತಿದ್ದಾರೆ ಎಂಬ ಆತಂಕ ಇದೆ. ಈ ಹಿನ್ನೆಲೆಯಲ್ಲಿ, ನೆರೆಯ ದೇಶಗಳಿಂದ ಬರುವವರ ಬಯೋಮೆಟ್ರಿಕ್ ವಿವರಗಳನ್ನು ಸಂಗ್ರಹಿಸಲು ಆರಂಭಿಸಲಾಗಿದೆ ಎಂದು ತಿಳಿಸಿದರು.

ಮೂವರು ಪೊಲೀಸರಿಗೆ ಗಾಯ: ವಿಷ್ಣುಪುರ ಜಿಲ್ಲೆಯಲ್ಲಿ ಶಂಕಿತ ಕುಕಿ ಬಂಡುಕೋರರೊಂದಿಗೆ ಬುಧವಾರ ರಾತ್ರಿ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ಪೊಲೀಸರಿಗೆ ಗಾಯಗಳಾಗಿವೆ ಎಂದು ಪೊಲೀಸರು ಗುರುವಾರ ಹೇಳಿದ್ದಾರೆ. ಕುಂಬಿ ಪೊಲೀಸ್ ಠಾಣೆ ವ್ಯಾಪ್ತಿಯ ತಾಂಗ್‌ಜೆಂಗ್‌ನಲ್ಲಿ ಗುಂಡಿನ ಚಕಮಕಿ ನಡೆದಿದೆ. ಗಾಯಗೊಂಡಿರುವವರನ್ನು ಇಂಫಾಲದ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

ರಾಜೀವ್ ಸಿಂಗ್ ನೂತನ ಡಿಜಿಪಿ

ರಾಜೀವ್ ಸಿಂಗ್

ಹಿಂಸಾಗ್ರಸ್ತ ಮಣಿಪುರದಲ್ಲಿ ಶಾಂತಿ ನೆಲೆಸುವಂತೆ ಮಾಡಲು ಪೊಲೀಸ್ ಇಲಾಖೆಯಲ್ಲಿಯೂ ಸರ್ಕಾರ ಕೆಲ ಬದಲಾವಣೆ ಮಾಡಿದೆ. ಹಿರಿಯ ಐಪಿಎಸ್ ಅಧಿಕಾರಿ ರಾಜೀವ್ ಸಿಂಗ್ ಅವರನ್ನು ಮಣಿಪುರದ ಡಿಜಿಪಿಯಾಗಿ ಗುರುವಾರ ನೇಮಕ ಮಾಡಲಾಗಿದೆ.

1987ರ ಬ್ಯಾಚ್‌ನ ಮಣಿಪುರ ಕೇಡರ್ ಅಧಿಕಾರಿ ಪಿ.ಡೌಂಗಲ್ ಈ ಮೊದಲು ಡಿಜಿಪಿಯಾಗಿದ್ದರು. ಅವರನ್ನು ಗೃಹ ಇಲಾಖೆಯಲ್ಲಿ ವಿಶೇಷ ಕರ್ತವ್ಯಾಧಿಕಾರಿಯಾಗಿ ನೇಮಕ ಮಾಡಲಾಗಿದೆ. ಈ ತಿಂಗಳಾಂತ್ಯಕ್ಕೆ ಅವರು ನಿವೃತ್ತರಾಗಲಿದ್ದಾರೆ.

ತ್ರಿಪುರಾ ಕೇಡರ್ ಅಧಿಕಾರಿಯಾಗಿರುವ ಸಿಂಗ್ ಅವರನ್ನು ಮೂರು ವರ್ಷಗಳ ಅವಧಿಗೆ ಡಿಜಿಪಿಯಾಗಿ ನೇಮಕ ಮಾಡಲಾಗಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ವಿಶೇಷ ಪ್ರಕರಣವೆಂದು ಪರಿಗಣಿಸಿ ಈ ನೇಮಕ ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಇಂದಿನಿಂದ ಶೋಧ ಕಾರ್ಯಾಚರಣೆ: ಶಾ

ಗುವಾಹಟಿ: ಮಣಿಪುರದಲ್ಲಿ ಗಲಭೆ ಆರಂಭವಾದಾಗಿನಿಂದ ದುಷ್ಕರ್ಮಿಗಳು ದೋಚಿರುವ ಶಸ್ತ್ರಾಸ್ತ್ರಗಳನ್ನು ಮರುವಶಪಡಿಸಿಕೊಳ್ಳುವ ಸಂಬಂಧ ಭದ್ರತಾಪಡೆಗಳು ಶುಕ್ರವಾರದಿಂದ ಶೋಧ ಕಾರ್ಯಾಚರಣೆ ನಡೆಸಲಿವೆ.

ಇಂಫಾಲ್‌ದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಅಮಿತ್ ಶಾ, ‘ಶಸ್ತ್ರಾಸ್ತ್ರಗಳನ್ನು ಪೊಲೀಸರು ಹಾಗೂ ಭದ್ರತಾಪಡಗಳಿಗೆ ಒಪ್ಪಿಸುವಂತೆ ನಾನು ಪ್ರತಿಯೊಬ್ಬರಿಗೂ ಮನವಿ ಮಾಡುತ್ತೇನೆ. ನಾಳೆಯಿಂದ ಶೋಧ ಕಾರ್ಯಾಚರಣೆ ಆರಂಭಿಸಲಾಗುತ್ತದೆ. ಶಸ್ತ್ರಾಸ್ತ್ರಗಳ ಸಮೇತ ಸಿಕ್ಕಿಬಿದ್ದವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತದೆ’ ಎಂದು ಹೇಳಿದರು.

ಶಸ್ತ್ರಾಸ್ತ್ರಗಳನ್ನು ಒಪ್ಪಿಸುವಂತೆ ಕೇಂದ್ರ ಹಾಗೂ ಮಣಿಪುರ ಸರ್ಕಾರಗಳು ಹಲವು ಬಾರಿ ಮನವಿ ಮಾಡಿದ್ದವು. ಈ ಮನವಿಗಳು ಫಲ ನೀಡದ ಕಾರಣ ಶೋಧ ಕಾರ್ಯಾಚರಣೆಗೆ ಆದೇಶಿಸಲಾಗಿದೆ.

ಹಿಮಾಲಯದೆತ್ತರಕ್ಕೆ ಭಾರತ ನೇಪಾಳ ಬಾಂಧವ್ಯ: ಮೋದಿ

ನೇಪಾಳ ಪ್ರಧಾನಿ ಪುಷ್ಪ ಕಮಲ್ ದಹಲ್ (ಪ್ರಚಂಡ) ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಮಾತುಕತೆ ನಡೆಸಿದರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಭಾರತ ಮತ್ತು ನೇಪಾಳ ನಡುವಿನ ಬಾಂಧವ್ಯವನ್ನು ಹಿಮಾಲಯದೆತ್ತರಕ್ಕೆ ಕೊಂಡೊಯ್ಯಲು ಎರಡೂ ದೇಶಗಳು ಶ್ರಮಿಸಲಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಹೇಳಿದ್ದಾರೆ.

ನೇಪಾಳ ಪ್ರಧಾನಿ ಪುಷ್ಪ ಕಮಲ್ ದಹಲ್ (ಪ್ರಚಂಡ) ಅವರೊಂದಿಗಿನ ಮಾತುಕತೆಯ ಬಳಿಕ ಈ ಹೇಳಿಕೆ ನೀಡಿರುವ ಅವರು, ‘ಗಡಿ ವಿವಾದ ಸೇರಿದಂತೆ ಎಲ್ಲ ಸಮಸ್ಯೆಗಳನ್ನು ಪರಿಹರಿಸಲಿದ್ದೇವೆ’ ಎಂಬ ಆಶಯವನ್ನೂ ವ್ಯಕ್ತಪಡಿಸಿದ್ದಾರೆ.

‘ಭವಿಷ್ಯದಲ್ಲಿ ಉಭಯ ದೇಶಗಳ ನಡುವಿನ ಪಾಲುದಾರಿಕೆಯು ‘ಸೂಪರ್ ಹಿಟ್’ ಆಗಲು ಪ್ರಚಂಡ ಮತ್ತು ನಾನು ಹಲವು ಮಹತ್ವದ ನಿರ್ಧಾರಗಳನ್ನು ತೆಗೆದುಕೊಂಡಿದ್ದೇವೆ’ ಎಂದು ತಿಳಿಸಿದ್ದಾರೆ.

ಪೆಟ್ರೋಲ್ ಪೈಪ್‌ಲೈನ್ ಯೋಜನೆಯನ್ನು ಗಡಿಯಾಚೆಗೂ ವಿಸ್ತರಿಸುವುದು, ಜಲವಿದ್ಯುತ್ ಯೋಜನೆ ಜಾರಿಗೊಳಿಸುವುದು, ಚೆಕ್‌ಪೋಸ್ಟ್‌ಗಳನ್ನು ಅಭಿವೃದ್ಧಿ ಪಡಿಸುವುದು ಸೇರಿದಂತೆ ಏಳು ಒಪ್ಪಂದಗಳಿಗೆ ಎರಡೂ ದೇಶಗಳ ನಾಯಕರು ಸಹಿ ಹಾಕಿದ್ದಾರೆ. ಸಾಗಣೆ ಕ್ಷೇತ್ರದ ಪರಿಷ್ಕೃತ ಒಪ್ಪಂದಕ್ಕೂ ಸಹಿ ಹಾಕಲಾಗಿದೆ ಎಂದೂ ಮೂಲಗಳು ಹೇಳಿವೆ.

ಒಂಬತ್ತು ವರ್ಷಗಳ ಹಿಂದೆ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ನೇಪಾಳದ ಜೊತೆಗಿನ ಸಂಬಂಧ ವೃದ್ಧಿಗೆ ಆದ್ಯತೆ ನೀಡಿರುವುದನ್ನು ಮೋದಿ ಅವರು ಉಲ್ಲೇಖಿಸಿದ್ದಾರೆ. ಪ್ರಧಾನಿಯಾದ ಮೂರು ತಿಂಗಳೊಳಗೆ ನೇಪಾಳಕ್ಕೆ ಭೇಟಿ ನೀಡಿದ್ದನ್ನೂ ಸ್ಮರಿಸಿದ್ದಾರೆ.

ಮಾತುಕತೆಯ ಅಂಗವಾಗಿ ಉಭಯ ನಾಯಕರು ಭಾರತದ ರೂಪಾಯಿದಿಹಾ ಮತ್ತು ನೇಪಾಳದ ನೇಪಾಳಗಂಜ್‌ನ ಚೆಕ್‌ಪೋಸ್ಟ್‌ಗಳನ್ನು ವರ್ಚುವಲ್ ಆಗಿ ಉದ್ಘಾಟಿಸಿದರು. ಬಿಹಾರದ ಬಥನಾಹಾದಿಂದ ನೇಪಾಳಕ್ಕೆ ತೆರಳಲಿರುವ ಸರಕು ಸಾಗಣೆ ರೈಲಿಗೂ ಹಸಿರು ನಿಶಾನೆ ತೋರಿದರು.

ಸಾಂಸ್ಕೃತಿಕ ಮತ್ತು ಧಾರ್ಮಿಕ ಬಾಂಧವ್ಯ ವೃದ್ಧಿಗಾಗಿ ‘ರಾಮಾಯಣ ಸರ್ಕ್ಯೂಟ್’ ಯೋಜನೆಯನ್ನು ತ್ವರಿತಗೊಳಿಸಲು ನಿರ್ಧಾರ ತೆಗೆದುಕೊಂಡಿದ್ದೇವೆ ಎಂದೂ ಮೋದಿ ಹೇಳಿದ್ದಾರೆ.

ಪರಸ್ಪರ ಸಹಕಾರ ವೃದ್ಧಿಗಾಗಿ ನಾವು ನಿರ್ಧಾರ ಕೈಗೊಂಡಿದ್ದೇವೆ. ಮೋದಿ ಅವರ ‘ನೆರೆಹೊರೆ ಮೊದಲು ನೀತಿ’ಯನ್ನು ಪ್ರಶಂಸಿಸುತ್ತೇನೆ ಎಂದು ಪ್ರಚಂಡ ಅವರು ಶ್ಲಾಘಿಸಿದ್ದಾರೆ.

‘ನೇಪಾಳ ಮತ್ತು ಭಾರತ ನಡುವಿನ ಬಾಂಧವ್ಯವು ಸಂಪನ್ನ ನಾಗರಿಕತೆಯ ಪರಂಪರೆ, ಸಾಂಸ್ಕೃತಿಕತೆ ಮತ್ತು ಸಾಮಾಜಿಕ ಆರ್ಥಿಕ ಭದ್ರ ತಳಹದಿಯ ಮೇಲೆ ನಿಂತಿದೆ’ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ. ನಾಲ್ಕು ದಿನಗಳ ಪ್ರವಾಸಕ್ಕಾಗಿ ಪ್ರಚಂಡ ಅವರು ಭಾರತಕ್ಕೆ ಬಂದಿದ್ದಾರೆ.

ರಾಫ್ಟಿಂಗ್ ಮೋಜು

ಹಿಮಾಚಲ ಪ್ರದೇಶದ ಮನಾಲಿಯಲ್ಲಿ ಪ್ರವಾಸಿಗರು ಬ್ಯಾಸ್ ನದಿಯಲ್ಲಿ ರಾಫ್ಟಿಂಗ್ ಮಾಡಿದರು –ಪಿಟಿಐ ಚಿತ್ರ

ಕೇಂದ್ರದ ಸುಗ್ರೀವಾಜ್ಞೆಗೆ ಡಿಎಂಕೆ ವಿರೋಧ

ಚೆನ್ನೈ (ಪಿಟಿಐ): ದೆಹಲಿಯ ಸೇವೆಗಳ ಮೇಲೆ ನಿಯಂತ್ರಣ ಸಾಧಿಸಲು ಕೇಂದ್ರ ಸರ್ಕಾರವು ತಂದಿರುವ ಸುಗ್ರೀವಾಜ್ಞೆಯನ್ನು ಬಲವಾಗಿ ವಿರೋಧಿಸುವುದಾಗಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಗುರುವಾರ ಹೇಳಿದರು. ಬಿಜೆಪಿಯೇತರ ಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ ಬಿಕ್ಕಟ್ಟು ಸೃಷ್ಟಿಸಲು ಬಿಜೆಪಿ ಪ್ರಯತ್ನಿಸುತ್ತಿದೆ ಎಂದು ಅವರು ಆರೋಪಿಸಿದರು.

ಚೆನ್ನೈನಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಪಂಜಾಬ್ ಮುಖ್ಯಮಂತ್ರಿ ಭಗವಾನ್ ಮಾನ್ ಅವರ ಜೊತೆ ಸಭೆ ನಡೆಸಿದ ಬಳಿಕ ಸ್ಟಾಲಿನ್ ಅವರು ಸುದ್ದಿಗಾರರ ಎದುರು ಮಾತನಾಡಿದರು. ‘ಎಎಪಿ ಪಕ್ಷಕ್ಕೆ ಸಂದಿಗ್ಧ ಪರಿಸ್ಥಿತಿ ತಂದೊಡ್ಡಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ ಮತ್ತು ಚುನಾಯಿತ ಸರ್ಕಾರವು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅಡ್ಡಿಪಡಿಸುತ್ತಿದೆ. ಎಎಪಿ ಪರವಾಗಿ ಸುಪ್ರೀಂ ಕೋರ್ಟ್ ಆದೇಶ ನೀಡಿದ್ದರ ಹೊರತಾಗಿಯೂ ಕೇಂದ್ರವು ಸುಗ್ರೀವಾಜ್ಞೆ ತಂದಿದೆ. ಇದನ್ನು ಡಿಎಂಕೆ ಬಲವಾಗಿ ವಿರೋಧಿಸುತ್ತದೆ’ ಎಂದು ಹೇಳಿದರು.

‘ಕೇಜ್ರಿವಾಲ್ ಅವರು ನನ್ನ ಉತ್ತಮ ಸ್ನೇಹಿತರು. ನಮ್ಮ ಸಭೆಯು ಫಲಪ್ರದವಾಯಿತು. ಕೇಂದ್ರದ ಸುಗ್ರೀವಾಜ್ಞೆಯನ್ನು ವಿರೋಧಿಸುವ ನಿಟ್ಟಿನಲ್ಲಿ ಬಿಜೆಪಿಯೇತರ ಪಕ್ಷಗಳ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿ ಮತ್ತು ನಾಯಕರು ಎಎಪಿಗೆ ಬೆಂಬಲ ನೀಡಬೇಕು’ ಎಂದು ಸ್ಟಾಲಿನ್ ಮನವಿ ಮಾಡಿದರು.

ದಾಖಲೆ ಇಲ್ಲದೆ ₹ 2,000 ವಿನಿಮಯ ತುರ್ತು ವಿಚಾರಣೆಗೆ ‘ಸುಪ್ರೀಂ’ ನಕಾರ

ನವದೆಹಲಿ (ಪಿಟಿಐ): ದಾಖಲೆ ಇಲ್ಲದೆಯೇ ₹ 2,000 ಮುಖಬೆಲೆಯ ನೋಟುಗಳನ್ನು ವಿನಿಮಯ ಮಾಡಿಕೊಳ್ಳಲು ಅವಕಾಶ ಕಲ್ಪಿಸಿ ಹೊರಡಿಸಿದ್ದ ಅಧಿಸೂಚನೆಯನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಯ ತುರ್ತು ವಿಚಾರಣೆಗೆ ಸುಪ್ರೀಂ ಕೋರ್ಟ್ ಗುರುವಾರ ನಿರಾಕರಿಸಿದೆ.

ಬೇಸಿಗೆ ರಜೆಯಲ್ಲಿ ಇಂತಹ ಅರ್ಜಿಗಳ ವಿಚಾರಣೆ ನಡೆಸಲಾಗದು ಎಂದು ರಜಾಕಾಲದ ನ್ಯಾಯಪೀಠದ ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಮತ್ತು ಕೆ.ವಿ. ವಿಶ್ವನಾಥನ್ ಹೇಳಿದ್ದಾರೆ.ಮುಖ್ಯನ್ಯಾಯ ಮೂರ್ತಿ ನೇತೃತ್ವದ ಪೀಠಕ್ಕೆ ಈ ಅರ್ಜಿಯನ್ನು ವರ್ಗಾಯಿಸಲಾಗುವುದು ಎಂದಿದ್ದಾರೆ.

ಅಪರಾಧಿಗಳು, ಭಯೋತ್ಪಾದಕರು ಕೂಡ ₹ 2,000 ಮುಖಬೆಲೆಯ ನೋಟುಗಳನ್ನು ವಿನಿಮಯ ಮಾಡಿಕೊಳ್ಳುತ್ತಿರುವುದರಿಂದ ಅರ್ಜಿಯನ್ನು ತುರ್ತಾಗಿ ವಿಚಾರಣೆ ನಡೆಸಬೇಕೆಂದು ವಕೀಲರಾದ ಅಶ್ವಿನಿ ಉಪಾಧ್ಯಾಯ ಅವರು ನ್ಯಾಯಪೀಠವನ್ನು ಕೋರಿದ್ದರು.

ವಿಚಾರಣೆ ವಿಳಂಬವಾದರೆ ಕಪ್ಪು ಹಣವನ್ನು ಬ್ಯಾಂಕ್ ಮೂಲಕ ವಿನಿಮಯ ಮಾಡಿಕೊಳ್ಳುವ ಸಾಧ್ಯತೆ ಇದೆ ಎಂದಿರುವ ಅವರು ಈಗಾಗಲೇ ₹50 ಸಾವಿರ ಕೋಟಿ ವಿನಿಮಯ ಮಾಡಲಾಗಿದೆ ಎಂಬ ಪತ್ರಿಕಾ ವರದಿಯನ್ನೂ ಉಲ್ಲೇಖಿಸಿದ್ದಾರೆ.

ಬಾಲಕಿ ಕೊಲೆ ಪ್ರಕರಣ: ಆರೋಪಿ ಕಸ್ಟಡಿ ಮೂರು ದಿನಗಳಿಗೆ ವಿಸ್ತರಣೆ

ನವದೆಹಲಿ (ಪಿಟಿಐ): ಇಲ್ಲಿನ ಶಹಬಾದ್ ಜನನಿಬಿಡ ಪ್ರದೇಶದಲ್ಲಿ 16 ವರ್ಷದ ಬಾಲಕಿಯನ್ನು ಬರ್ಬರವಾಗಿ ಹತ್ಯೆ ಪ್ರಕರಣದ ಆರೋಪಿ ಸಾಹಿಲ್‌ನ ಪೊಲೀಸ್ ಕಸ್ಟಡಿಯನ್ನು ನ್ಯಾಯಾಲಯವು ಗುರುವಾರ ಮೂರು ದಿನಗಳಿಗೆ ವಿಸ್ತರಿಸಿದೆ.

ಸುರಕ್ಷೆಯ ಕಾರಣದಿಂದ ಸಾಹಿಲ್‌ನನ್ನು ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಅವರ ನಿವಾಸಕ್ಕೆ ಹಾಜರುಪಡಿಸಲಾಯಿತು ಎಂದು ಮೂಲಗಳು ತಿಳಿಸಿವೆ. ಸಾಹಿಲ್‌ನನ್ನು ಉತ್ತರ ಪ್ರದೇಶದ ಬುಲಂದ್‌ಶಹರ್‌ನಲ್ಲಿ ಪೊಲೀಸರು ಸೋಮವಾರ ಬಂಧಿಸಿದ್ದರು. ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಜ್ಯೋತಿ ನೈನ್ ಅವರು ಆರೋಪಿಯನ್ನು ವಿಚಾರಣೆಗಾಗಿ ಪೊಲೀಸರ ವಶಕ್ಕೆ ಒಪ್ಪಿಸಿದ್ದರು.

ಹತ್ಯೆಗೆ ಬಳಸಿದ ಆಯುಧವನ್ನು ಇದುವರೆಗೆ ವಶಪಡಿಸಿಕೊಂಡಿಲ್ಲ. ಈ ಕಾರಣಕ್ಕೆ ಆರೋಪಿಯನ್ನು ವಶಕ್ಕೆ ನೀಡಬೇಕೆಂದು ಪೊಲೀಸರು ನ್ಯಾಯಾಲಯವನ್ನು ಕೋರಿದ್ದರು.

‘ಕುಸ್ತಿಪಟುಗಳು ಬೇಡಿಕೆ ಬದಲಿಸುತ್ತಿದ್ದಾರೆ’

ಗೊಂಡಾ(ಉತ್ತರ ಪ್ರದೇಶ) (ಪಿಟಿಐ): ‘ನನ್ನ ವಿರುದ್ಧದ ಆರೋಪಗಳ ಕುರಿತು ದೆಹಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಆದರೆ, ಮಹಿಳಾ ಕುಸ್ತಿಪಟುಗಳು ನನ್ನ ವಿರುದ್ಧ ಪ್ರತಿಭಟನೆ ಆರಂಭಿಸಿದಾಗಿನಿಂದ ತಮ್ಮ ಬೇಡಿಕೆಗಳನ್ನು ಬದಲಿಸುತ್ತಲೇ ಇದ್ದಾರೆ’ ಎಂದು ಭಾರತೀಯ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ಗುರುವಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಜನವರಿ 18ರಂದು ಜಂತರ್ ಮಂತರ್‌ನಲ್ಲಿ ಧರಣಿ ಕುಳಿತಿದ್ದ ಕುಸ್ತಿಪಟುಗಳು ಕೆಲ ಬೇಡಿಕೆಗಳನ್ನು ಮುಂದಿಟ್ಟಿದ್ದರು. ಕೆಲ ದಿನಗಳ ನಂತರ ಬೇಡಿಕೆಗಳು ಬದಲಾದವು’ ಎಂದರು. ‘ನಾನು ಏನು ತಪ್ಪು ಮಾಡಿದ್ದೇನೆ? ಯಾವಾಗ ಹಾಗೂ ಎಲ್ಲಿ ಕಿರುಕುಳ ನೀಡಿದ್ದೇನೆ ಎಂದು ಮಹಿಳಾ ಕುಸ್ತಿಪಟುಗಳನ್ನು ಕೇಳಿದೆ. ಈ ಪ್ರಶ್ನೆಗಳಿಗೆ ಅವರು ನಿಖರವಾದ ಉತ್ತರ ನೀಡಿಯೇ ಇಲ್ಲ’ ಎಂದರು.

ನ್ಯಾಯ ಸಿಗುವವರೆಗೆ ಹೋರಾಟ

ಒಂದನೇ ಪುಟದಿಂದ

ಸಿಂಗ್ ಅವರನ್ನು ಬಂಧಿಸುವಂತೆ ಒತ್ತಾಯಿಸಿ ನಡೆಸುತ್ತಿರುವ ಪ್ರತಿಭಟನೆಯ ಭಾಗವಾಗಿ ಕುಸ್ತಿಪಟುಗಳು ತಾವು ಗೆದ್ದಿರುವ ಪದಕಗಳನ್ನು ಗಂಗಾ ನದಿಯಲ್ಲಿ ಹಾಕಲು ಬುಧವಾರ ಹರಿದ್ವಾರಕ್ಕೆ ತೆರಳಿದ್ದರು. ಪದಕಗಳನ್ನು ನದಿಯಲ್ಲಿ ಹಾಕದಂತೆ ಅವರ ಮನವೊಲಿಸಿದ್ದ ಭಾರತೀಯ ಕಿಸಾನ್ ಯೂನಿಯನ್ ಮುಖಂಡ ನರೇಶ್ ಟಿಕಾಯತ್, ಕುಸ್ತಿಪಟುಗಳ ಪ್ರತಿಭಟನೆ ಕುರಿತು ಚರ್ಚಿಸಲು ‘ಮಹಾ ಪಂಚಾಯತ್’ ಆಯೋಜಿಸುವುದಾಗಿ ಹರಿದ್ವಾರದಲ್ಲಿ ಘೋಷಿಸಿದ್ದರು. ಟಿಕಾಯತ್ ಅವರು ಬಲ್ಯಾನ್ ಖಾಪ್ ಮುಖ್ಯಸ್ಥರೂ ಆಗಿದ್ದಾರೆ. ಪಂಜಾಬ್, ಹರಿಯಾಣ, ರಾಜಸ್ಥಾನ ಹಾಗೂ ದೆಹಲಿಯ ಖಾಪ್‌ಗಳ ಮುಖಂಡರು ಮಹಾಪಂಚಾಯತ್‌ನಲ್ಲಿ ಪಾಲ್ಗೊಂಡಿದ್ದರು.

ನರೇಶ್ ಟಿಕಾಯತ್

‘ಮಹಾಪಂಚಾಯತ್’ಗೆ ಮಹತ್ವ: ಪ್ರತಿಭಟನೆ ನಡೆಸುತ್ತಿರುವ ಕುಸ್ತಿಪಟುಗಳ ಪೈಕಿ ಹಲವರು ಜಾಟ್ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಈ ಸಮುದಾಯದವರ ಜನಸಂಖ್ಯೆ ಹೆಚ್ಚಿದ್ದು, 12ರಷ್ಟು ಲೋಕಸಭಾ ಕ್ಷೇತ್ರಗಳಲ್ಲಿ ಚುನಾವಣಾ ಫಲಿತಾಂಶದ ಮೇಲೆ ಜಾಟ್‌ಗಳ ಮತ ಪ್ರಭಾವ ಬೀರುತ್ತದೆ. ಈ ಹಿನ್ನೆಲೆಯಲ್ಲಿ ಕುಸ್ತಿಪಟುಗಳ ಹೋರಾಟ ಬೆಂಬಲಿಸಿ ನಡೆದ ‘ಮಹಾಪಂಚಾಯತ್’ಗೆ ಮಹತ್ವ ಬಂದಿದೆ.

ಮತಪ್ರದರ್ಶನ– ಪ್ರತಿಕೃತಿ ದಹನ

- ಉತ್ತರ ಪ್ರದೇಶದ ಮುಜಫ್ಫರನಗರದಲ್ಲಿ ಆರ್‌ಎಲ್‌ಡಿ ಕಾರ್ಯಕರ್ತರು, ಅಮೃತಸರ, ಹಿಸಾರ್‌ದಲಿ ರೈತರು ಬ್ರಿಜ್‌ಭೂಷಣ್ ಸಿಂಗ್ ಪ್ರತಿಕೃತಿ ದಹನ ಮಾಡಿದರು
- ಕುಸ್ತಿಪಟುಗಳ ಹೋರಾಟ ಬೆಂಬಲಿಸಿ ಚಂಡೀಗಡದಲ್ಲಿ ಯುವ ಕಾಂಗ್ರೆಸ್, ಉತ್ತರ ಪ್ರದೇಶದ ಮೀರತ್‌ನಲ್ಲಿ ಬಿಕೆಯು ಕಾರ್ಯಕರ್ತರಿಂದ ಮತಪ್ರದರ್ಶನ
- ಬ್ರಿಜ್‌ಭೂಷಣ್ ಸಿಂಗ್ ಬಂಧನಕ್ಕೆ ಒತ್ತಾಯಿಸಿ ಸಂಯುಕ್ತ ಕಿಸಾನ್ ಮೋರ್ಚಾ ನೇತೃತ್ವದಲ್ಲಿ ರೈತರಿಂದ ಪಂಜಾಬ್ ಮತ್ತು ಹರಿಯಾಣದ ವಿವಿಧೆಡೆ ಪ್ರತಿಭಟನೆ
- ಕುಸ್ತಿಪಟುಗಳ ಹೋರಾಟವನ್ನು ಬೆಂಬಲಿಸಿ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಗುರುವಾರ ದೇಶವ್ಯಾಪಿ ಮತಪ್ರದರ್ಶನಕ್ಕೆ ಕರೆ ನೀಡಿದ್ದರಿಂದ ದೆಹಲಿ ಗಡಿಗಳಲ್ಲಿ ಭಾರಿ ಪೊಲೀಸ್ ಬಂದೋಬಸ್ತ್ ಹಾಕಲಾಗಿತ್ತು.
- ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ಕೆಲ ಮಹಿಳಾ ಕುಸ್ತಿಪಟುಗಳು ದೂರು ನೀಡಿರುವ ಪ್ರಕರಣದಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎಂಬ ನಿರೀಕ್ಷೆ ಇದೆ ಎಂದು ಮಹಾರಾಷ್ಟ್ರದ ಬಿಜೆಪಿ ಸಂಸದೆ ಪ್ರೀತಂ ಮುಂಡೆ ಹೇಳಿಕೆ
- ಕುಸ್ತಿಪಟುಗಳ ಈ ಪ್ರತಿಭಟನೆ ತಮ್ಮ ಬದುಕು, ನ್ಯಾಯ ಹಾಗೂ ಸ್ವಾತಂತ್ರ್ಯಕ್ಕಾಗಿ ನಡೆಸುತ್ತಿರುವ ಹೋರಾಟವಾಗಿದೆ. ಅವರಿಗೆ ನ್ಯಾಯ ಸಿಗುವವರೆಗೆ ನಾನು ಹೋರಾಟ ನಡೆಸುವೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಭರವಸೆ

ಕುಸ್ತಿಪಟುಗಳ ವಿಷಯವನ್ನು ಕೇಂದ್ರ ಸರ್ಕಾರ ಬಹಳ ಸೂಕ್ಷ್ಮವಾಗಿ ನಿಭಾಯಿಸುತ್ತಿದೆ. ಪ್ರತಿಭಟನಕಾರರ ಆರೋಪಗಳ ಕುರಿತು ತನಿಖೆಗೆ ಸಮಿತಿ ರಚಿಸಲಾಗಿದೆ

ಅನುರಾಗ್ ಠಾಕೂರ್ , ಕೇಂದ್ರ ಕ್ರೀಡಾ ಸಚಿವ

ಸಿ.ಸಿ.ಟಿ.ವಿ ದೃಶ್ಯಾವಳಿ ಕಾಪಿಡಲು ಸೂಚನೆ

ನವದೆಹಲಿ (ಪಿಟಿಐ): ದೆಹಲಿಯ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ತಮ್ಮನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಿನ ಭದ್ರತಾ ಸಿಬ್ಬಂದಿಯಿಂದಲೇ ತಾವು ಹಲ್ಲೆಗೀಡಾಗಿರುವುದಾಗಿ ಎಎಪಿ ನಾಯಕ ಮನೀಶ್ ಸಿಸೋಡಿಯಾ ಆರೋಪಿಸಿದ್ದರು. ಈ ಹಿನ್ನೆಲೆಯಲ್ಲಿ, ನ್ಯಾಯಾಲಯದ ಆವರಣದಲ್ಲಿಯ ಸಿ.ಸಿ.ಟಿ.ವಿ ಕ್ಯಾಮರಾದಲ್ಲಿ ಮೇ 23ರಂದು ಸೆರೆಯಾಗಿರುವ ದೃಶ್ಯಾವಳಿಗಳನ್ನು ಕಾಪಿಡುವಂತೆ ದೆಹಲಿಯ ನ್ಯಾಯಾಲಯವೊಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ.

ಸಿಸೋಡಿಯಾ ಅವರನ್ನು ವರ್ಚುವಲ್ ಆಗಿ ನ್ಯಾಯಾಲಯಕ್ಕೆ ಹಾಜರುಪಡಿಸಲು ಅನುಮತಿ ನೀಡಬೇಕು ಎಂದು ಪೊಲೀಸರು ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಅದನ್ನು ಪುರಸ್ಕರಿಸಿದ ನ್ಯಾಯಾಲಯವು ಸಿಸೋಡಿಯಾ ಅವರ ವಿಚಾರಣೆಯನ್ನು ವಿಡಿಯೊ ಕಾನ್ಫರೆನ್ಸ್ ಮೂಲಕವೇ ಗುರುವಾರ ನಡೆಸಿತು.

ಜಾರಿ ನಿರ್ದೇಶನಾಲಯ ಸಿಸೋಡಿಯಾ ಅವರನ್ನು ಮಾರ್ಚ್ 9ರಂದು ಬಂಧಿಸಿತ್ತು. ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ.

ಕಳಪೆ ಕಾಮಗಾರಿಯ ನಿಜಬಣ್ಣ ಜಾಲತಾಣದಲ್ಲಿ ಸದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಗೆ ಹೊಸದಾಗಿ ಹಾಕಿದ ಡಾಂಬರ್ ಅನ್ನು ಮರುಗಳಿಗೆಯಲ್ಲೇ ಚಾಪೆ ಸುತ್ತಿದಂತೆ ಬರಿಗೈಯಲ್ಲೇ ಸುತ್ತಿಡಬಹುದು! ಇದೇನು ದೇಶದಲ್ಲಿ ಡಾಂಬರ್ ರಸ್ತೆ ನಿರ್ಮಾಣದಲ್ಲಿ ಎಂತೆಂಥಾ ಕ್ರಾಂತಿಕಾರಿ ಆವಿಷ್ಕಾರಗಳು ಆಗುತ್ತಿವೆಯಲ್ಲಾ, ಇದ್ಯಾವ ದೇಶದ ತಂತ್ರಜ್ಞಾನ, ಎಲ್ಲಿಂದ ಬಂತಪ್ಪಾ ಎನ್ನುವ ಅಚ್ಚರಿಯೇ, ಸ್ವಲ್ಪ ತಾಳಿ; ಅಚ್ಚರಿಪಡಬೇಡಿ.

ಮಹಾರಾಷ್ಟ್ರದ ಹಳ್ಳಿಯೊಂದರಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ (ಪಿಎಂ ಗ್ರಾಮೀಣ ರಸ್ತೆ) ಅಡಿ ನಿರ್ಮಾಣ ಮಾಡಿರುವ ರಸ್ತೆಗೆ ಡಾಂಬರ್ ಹಾಕಿರುವ ಕಾಮಗಾರಿ ಎಷ್ಟು ಕಳಪೆಯಾಗಿದೆ ಎಂಬುದಕ್ಕೆ ನಿದರ್ಶನ ಇದು.

ಮಹಾರಾಷ್ಟ್ರದ ಜಲ್ನಾ ಜಿಲ್ಲೆಯ ಅಂಬಡ್ ತಾಲ್ಲೂಕಿನ ಕರ್ಜತ್–ಹಸ್ತ್ ಪೋಖರಿಯ ಹಳ್ಳಿಯ ಜನ ತಮ್ಮೂರಿನಲ್ಲಿ ಸ್ಥಳೀಯ ಗುತ್ತಿಗೆದಾರ ಮಾಡಿರುವ ಡಾಂಬರ್ ರಸ್ತೆಯ ಮೇಲ್ಪದರವನ್ನು ಬರಿಗೈಯಲ್ಲಿ ಕಿತ್ತು, ಕಾಮಗಾರಿಯ ಗುಣಮಟ್ಟ ಜಗಜ್ಜಾಹೀರುಗೊಳಿಸಿದ್ದಾರೆ. 38 ಸೆಕೆಂಡುಗಳ ಈ ವಿಡಿಯೊ ತುಣುಕು, ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

‘ಮಹಾರಾಷ್ಟ್ರದಲ್ಲೊಂದು ವಿಚಿತ್ರ ಘಟನೆ ನಡೆದಿದೆ’ ಎಂದು ಈ ವಿಡಿಯೊವನ್ನು ಟ್ವಿಟರ್‌ನಲ್ಲಿ ಹಲವಾರು ಜನರು ಹಂಚಿಕೊಂಡಿದ್ದಾರೆ ಎಂದು ‘ಎನ್‌ಡಿಟಿವಿ’ ವರದಿ ಮಾಡಿದೆ.

ಈ ವಿಡಿಯೊದಲ್ಲಿ ಸೆರೆಯಾಗಿರುವ ದೃಶ್ಯದ ಪ್ರಕಾರ, ರಸ್ತೆ ಮೇಲೆ ಕಾರ್ಪೆಟ್ ತರಹ ಹಾಸಿ ಅದರ ಮೇಲೆ ಡಾಂಬರ್ ಹಾಕಿರುವುದು ಕಂಡುಬಂದಿದೆ. ಈ ಕಾಮಗಾರಿಯನ್ನು ಸ್ಥಳೀಯ ಗುತ್ತಿಗೆದಾರ ರಾಣಾ ಠಾಕೂರ್ ಎಂಬಾತ ಮಾಡಿದ್ದು, ಗುತ್ತಿಗೆದಾರರ ಕಳಪೆ ಕಾಮಗಾರಿಯ ಬಗ್ಗೆ ಗ್ರಾಮಸ್ಥರು ಧ್ವನಿ ಎತ್ತಿದ್ದಾರೆ. ಆಸ್ಫಾಲ್ಟ್ ಅಡಿಯಲ್ಲಿರುವ ಕಾರ್ಪೆಟ್ ಅನ್ನು ಬರಿಗೈಯಲ್ಲಿ ಎತ್ತಿರುವ ಗ್ರಾಮಸ್ಥರು ‘ಇದು ಬೋಗಸ್ ಕಾಮಗಾರಿ’ ಎಂದು ಆಕ್ಷೇಪಿಸಿದ್ದಾರೆ.

‘ಫ್ರೀ ಪ್ರೆಸ್ ಜರ್ನಲ್’ ಪ್ರಕಾರ, ರಸ್ತೆ ನಿರ್ಮಾಣದಲ್ಲಿ ಜರ್ಮನ್ ತಂತ್ರಜ್ಞಾನ ಬಳಸಿಕೊಂಡಿರುವುದಾಗಿ ಗುತ್ತಿಗೆದಾರರುಜನರನ್ನುನಂಬಿಸಿದ್ದರು.

ಸ್ಥಳೀಯರು ಮಹಾರಾಷ್ಟ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಳಪೆ ಕಾಮಗಾರಿ ಅನುಮೋದಿಸಿರುವ ಎಂಜಿನಿಯರ್ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ ಎಂದು ಫ್ರೀ ಪ್ರೆಸ್ ಜರ್ನಲ್ ಹೇಳಿದೆ.

ಶ್ರದ್ಧಾಗೆ ಆಫ್ತಾಬ್ ಥಳಿಸುತ್ತಿದ್ದ: ಕೋರ್ಟ್‌ಗೆ ಹೇಳಿಕೆ

ನವದೆಹಲಿ (ಪಿಟಿಐ): ‘ಅಫ್ತಾಬ್ ಅಮೀನ್ ಪೂನಾವಾಲಾ ಶ್ರದ್ಧಾ ವಾಕರ್ ಅವರನ್ನು ಥಳಿಸಿ, ನಂತರ ಕ್ಷಮೆಯಾಚಿಸುತ್ತಿದ್ದ ಹಾಗೂ ತಾನು ನಡೆಸಿದ ಹಲ್ಲೆಯನ್ನು ಕ್ಷಮಿಸುವಂತೆ ಮನವೊಲಿಸುತ್ತಿದ್ದ’ ಎಂದು ಶ್ರದ್ಧಾ ಅವರ ಸಹೋದರ ಶ್ರೀಜಯ್ ವಿಕಾಸ್ ವಾಲಕರ್ ಅವರು ದೆಹಲಿ ನ್ಯಾಯಾಲಯದಲ್ಲಿ ಗುರುವಾರ ಹೇಳಿಕೆ ನೀಡಿದ್ದಾರೆ.

ಶ್ರದ್ಧಾ ಅವರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಮನಿಷಾ ಖುರಾನಾ ಕಕ್ಕರ್ ಅವರ ಮುಂದೆ ಪಬ್ಲಿಕ್ ಪ್ರಾಸಿಕ್ಯೂಟರ್ ಅವರು ಪ್ರಾಸಿಕ್ಯೂಷನ್ ಸಾಕ್ಷಿಯಾಗಿ ಶ್ರೀಜಯ್ ವಿಕಾಸ್ ವಾಲಕರ್ ಅವರನ್ನು ವಿಚಾರಣೆಗೆ ಒಳಪಡಿಸಿದಾಗ ಈ ಮಾಹಿತಿ ಬಹಿರಂಗವಾಗಿದೆ.

‘ಅಫ್ತಾಬ್‌ನೊಂದಿಗೆ ಸ್ನೇಹ ಮಾಡದಂತೆ ತಮ್ಮ ಕುಟುಂಬವು ಸಲಹೆ ನೀಡಿದ ಬಳಿಕ ಶ್ರದ್ಧಾ ಅವರು ಮುಂಬೈನ ತಮ್ಮ ಮನೆ ತೊರೆದಿದ್ದರು. 2018–2019ರಲ್ಲಿ ಶ್ರದ್ಧಾ ಅವರು ಕಾಲ್ ಸೆಂಟರ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದ ವೇಳೆ ಅಫ್ತಾಬ್‌ನಿಂದಿಗೆ ಸ್ನೇಹವೇರ್ಪಟ್ಟಿತ್ತು’ ಎಂದೂ ಅವರು ನ್ಯಾಯಾಲಯದಲ್ಲಿ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ತಂಪು ಕನ್ನಡಕ ಧರಿಸಿದ್ದ ಪರಿಶಿಷ್ಟ ವ್ಯಕ್ತಿಗೆ ಥಳಿತ

ಪಾಲನಪುರ (ಪಿಟಿಐ): ಗುಜರಾತ್‌ನ ಹಳ್ಳಿಯೊಂದರಲ್ಲಿ ಒಳ್ಳೆಯ ಬಟ್ಟೆ, ತಂಪು ಕನ್ನಡಕ ಧರಿಸಿದ್ದರು ಎಂಬ ಕಾರಣಕ್ಕೆ ದಲಿತ ವ್ಯಕ್ತಿಯೊಬ್ಬರನ್ನು ಕರೆದೊಯ್ದು ಆರು ಜನರ ಗುಂಪು ಥಳಿಸಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಬನಸ್ಕಾಂತ ಜಿಲ್ಲೆಯ ಪಾಲನಪುರ ತಾಲ್ಲೂಕಿನ ಮೋಟಾ ಗ್ರಾಮದಲ್ಲಿ ಮಂಗಳವಾರ ಇದು ನಡೆದಿದ್ದು, ಹಲ್ಲೆಗೊಳಗಾದ ವ್ಯಕ್ತಿ ಹಾಗೂ ಅವರ ತಾಯಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಾಗಿದ್ದಾರೆ.

ಜಿಗರ್ ಶೆಖಾಲಿಯಾ ಹಲ್ಲೆಗೊಳಗಾದ ವ್ಯಕ್ತಿಯಾಗಿದ್ದು, ಅವರೇ ದೂರು ದಾಖಲಿಸಿದ್ದಾರೆ. ಮಂಗಳವಾರ ಬೆಳಗ್ಗೆ ಮನೆಯ ಮುಂದಿದ್ದಾಗ, ರಜಪೂತ ಸಮುದಾಯದ ವ್ಯಕ್ತಿಯು ‘ಈ ನಡುವೆ ತುಂಬಾ ಹಾರಾಡುತ್ತಿದ್ದಿಯಾ ಎಂದು ಜೋರು ಮಾಡಿ, ಕೊಲೆ ಮಾಡುವ ಬೆದರಿಕೆ’ ಹಾಕಿದ್ದ ಎಂದು ಶೆಖಾಲಿಯಾ ತಿಳಿಸಿದ್ದಾರೆ.

‘ನಾನು ಸಂಜೆ ದೇವಸ್ಥಾನದ ಬಳಿ ಹೋದಾಗ ಆರೇಳು ಜನರ ಗುಂಪು, ತಂಪು ಕನ್ನಡಕ ಧರಿಸಿದ್ದು ಯಾಕೆ ಎಂದು ಪ್ರಶ್ನಿಸಿತು. ಗುಂಪಿನಲ್ಲಿದ್ದವರು ಇದ್ದಕ್ಕಿದ್ದಂತೆ ಹಲ್ಲೆ ಮಾಡಲಾರಂಭಿಸಿದರು. ಕೈ ಹಿಡಿದೆಳೆದು, ದೇಗುಲದ ಬಳಿ ಇರುವ ಡೇರಿ ಪಾರ್ಲರ್‌ನ ಹಿಂದೆಳೆದುಕೊಂಡು ಹೋದರು. ಇದನ್ನು ತಡೆಯಲು ಬಂದ ನನ್ನ ತಾಯಿಯನ್ನೂ ಅವರು ಎಳೆದಾಡಿದರು. ಅವಾಚ್ಯ ಪದಗಳಿಂದ ನಿಂದಿಸಿದರು. ಬಟ್ಟೆಗಳನ್ನು ಹರಿದರು’ ಎಂದು ಅವರು ದೂರಿನಲ್ಲಿ ಹೇಳಿದ್ದಾರೆ.

ಈ ಸಂಬಂಧ ಏಳು ಜನರ ವಿರುದ್ಧ ಪ್ರಕರಣ ದಾಖಲಾಗಿದ್ದು, ಯಾರನ್ನೂ ಬಂಧಿಸಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರ: ಇಬ್ಬರು ಉಗ್ರರ ಬಂಧನ

ಶ್ರೀನಗರ (ಪಿಟಿಐ): ‘ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ಲಷ್ಕರ್–ಎ– ತೊಯ್ಬಾ ಸಂಘಟನೆಗೆ ಸೇರಿದ ಇಬ್ಬರು ಉಗ್ರರನ್ನು ಭದ್ರತಾ ಪಡೆಯ ಸಿಬ್ಬಂದಿ ಬಂಧಿಸಿದ್ದಾರೆ’ ಎಂದು ಪೊಲೀಸ್ ವಕ್ತಾರರೊಬ್ಬರು ಗುರುವಾರ ತಿಳಿಸಿದರು.

‘ಫ್ರೆಶ್ತಿಹಾರ್ ಕ್ರೀರಿ ಗ್ರಾಮದ ನಿವಾಸಿ ಸುಹೈಲ್ ಗುಲ್ಜಾರ್ ಹಾಗೂ ಹುಡಿಪೊರಾ ರಫಿಯಾಬಾದ್ ನಿವಾಸಿ ವಾಸೀಮ್ ಅಹ್ಮದ್ ಪಾಟಾ ಬಂಧಿತ ಉಗ್ರರು. ಫ್ರೆಶ್ತಿಹಾರ್ ಕ್ರೀರಿಯಲ್ಲಿ ಉಗ್ರರ ಚಲನವಲನ ಇರುವ ಕುರಿತು ಮಾಹಿತಿ ಬಂದ ಹಿನ್ನೆಲೆಯಲ್ಲಿ ಭದ್ರತಾ ಪಡೆಯು ಫ್ರಶ್ತಿಹಾರ್ ವಾರಿಪೋರಾ ಕ್ರಾಸ್ ಬಳಿ ಸಂಚಾರಿ ಚೆಕ್‌ಪೋಸ್ಟ್ ಅನ್ನು ನಿರ್ಮಿಸಿ ತಪಾಸಣೆ ಸಡೆಸುತ್ತಿತ್ತು. ಚೆಕ್‌ಪೋಸ್ಟ್ ಬಳಿ ಭದ್ರತಾ ಪಡೆ ತಪಾಸಣೆ ನಡೆಸುತ್ತಿರುವುದನ್ನು ಗಮನಿಸಿದ ಉಗ್ರರು ಅಲ್ಲಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾಗ ಅವರನ್ನು ಬಂಧಿಸಲಾಯಿತು’ ಎಂದು ಹೇಳಿದರು.

ಡಿ.ಎಲ್ ಅವಧಿ ಮುಗಿದ್ದರೂ ಪರಿಹಾರ ನೀಡಿ

ಮುಂಬೈ (ಪಿಟಿಐ): ಅಪಘಾತ ಮಾಡಿದ ವಾಹನ ಚಾಲಕನ ಚಾಲನಾ ಪರವಾನಗಿ (ಡಿ.ಎಲ್) ಅವಧಿ ಮುಗಿದು, ಅದು ನವೀಕರಣಗೊಂಡಿಲ್ಲದಿದ್ದರೂ ಅಪಘಾತದಲ್ಲಿ ಮೃತಪಟ್ಟವರ ಸಂಬಂಧಿಕರಿಗೆ ವಿಮಾ ಕಂಪನಿಯು ಪರಿಹಾರ ನೀಡಲೇಬೇಕು ಎಂದು ಬಾಂಬೆ ಹೈಕೋರ್ಟ್ ತೀರ್ಪು ನೀಡಿದೆ.

‘ಅಪಘಾತಕ್ಕೀಡಾದ ವಾಹನದ ಚಾಲಕನ ಚಾಲನಾ ಪರವಾನಗಿ ನವೀಕರಣವಾಗಿರದಿದ್ದಲ್ಲಿ ಆತ/ಆಕೆ ನುರಿತ ಚಾಲಕರಲ್ಲವೆಂದು ಅರ್ಥವಲ್ಲ’ ಎಂದು ನ್ಯಾಯಮೂರ್ತಿ ಎಸ್.ಜಿ. ದಿಗೆ ಅವರಿದ್ದ ಏಕ ಸದಸ್ಯ ಪೀಠ ಅಭಿಪ್ರಾಯಪಟ್ಟಿದೆ.

‘ಅಗ್ನಿ–1’ ಕ್ಷಿಪಣೆ ಉಡಾವಣೆ ಯಶಸ್ವಿ

ನವದೆಹಲಿ (ಪಿಟಿಐ): ಮಧ್ಯಂತರ ವ್ಯಾಪ್ತಿಯ ಬ್ಯಾಲಿಸ್ಟಿಕ್ ಕ್ಷಿಪಣೆ ‘ಅಗ್ನಿ–1’ ಉಡಾವಣೆಯನ್ನು ಒಡಿಶಾ ಕರಾವಳಿಯ ಎ.ಪಿ. ಜೆ ಅಬ್ದುಲ್ ಕಲಾಂ ದ್ವೀಪದಿಂದ ಗುರುವಾರ ಯಶಸ್ವಿಯಾಗಿ ನೆರವೇರಿಸಲಾಯಿತು ಎಂದು ರಕ್ಷಣಾ ಸಚಿವಾಲಯವು ತಿಳಿಸಿದೆ.

ತರಬೇತಿ ಉದ್ದೇಶದಿಂದ ಈ ಕ್ಷಿಪಣೆ ಉಡಾವಣೆ ಪರೀಕ್ಷೆಯನ್ನು ನೆರವೇರಿ ಸಲಾಯಿತು. ಪೂರ್ವ ನಿರ್ಧರಿತ ಗುರಿಯನ್ನು ಧ್ವಂಸಗೊಳಿಸುವ ಮೂಲಕ ಕ್ಷಿಪಣೆ ವ್ಯವಸ್ಥೆಯ ಕಾರ್ಯಾಚರಣೆಗೆ ಸಂಬಂಧಿಸಿದ ಎಲ್ಲ ಅಂಶಗಳು ಕ್ರಮಬದ್ಧವಾಗಿವೆ ಎಂಬುದನ್ನು ಈ ಪರೀಕ್ಷೆ ಸಾಬೀತುಪಡಿಸಿತು ಎಂದು ಸಚಿವಾಲಯ ಪ್ರಕಟಣೆ ತಿಳಿಸಿದೆ.

‘ಚೀತಾಗಳ ಆವಾಸಸ್ಥಾನಕ್ಕೆ ಬೇಲಿ ಇಲ್ಲ’

ನವದೆಹಲಿ (ಪಿಟಿಐ): ನಮೀಬಿಯಾ ಮತ್ತು ದಕ್ಷಿಣ ಆಫ್ರಿಕಾದಲ್ಲಿರುವಂತೆ ಚೀತಾಗಳ ಆವಾಸಸ್ಥಾನಕ್ಕೆ ಬೇಲಿ ನಿರ್ಮಿಸಲು ಭಾರತವು ಬಯಸುವುದಿಲ್ಲ ಎಂದು ಚೀತಾ ಯೋಜನೆಗಾಗಿ ಕೇಂದ್ರ ಸರ್ಕಾರವು ರಚಿಸಿರುವ ಉನ್ನತ ಮಟ್ಟದ ಸಮಿತಿಯ ಅಧ್ಯಕ್ಷ ರಾಜೇಶ್ ಗೋಪಾಲ್ ಗುರುವಾರ ಹೇಳಿದ್ದಾರೆ. ಹೀಗೆ ಬೇಲಿ ಹಾಕುವುದು ವನ್ಯಜೀವಿ ಸಂರಕ್ಷಣೆಯ ಮೂಲತತ್ವಗಳಿಗೆ ವಿರುದ್ಧ ಎಂದೂ ಅವರು ತಿಳಿಸಿದ್ದಾರೆ.

ಮನುಷ್ಯ ಮತ್ತು ಪ್ರಾಣಿಗಳ ನಡುವಣ ಸಂಘರ್ಷ ತಪ್ಪಿಸಲು ಮತ್ತು ಆವಾಸಸ್ಥಾನವನ್ನು ವಿಭಜಿಸಲು ಚೀತಾಗಳ ಆವಾಸಸ್ಥಾನಗಳ ಸುತ್ತಲೂ ಬೇಲಿ ಹಾಕಬೇಕೆಂದು ಭಾರತಕ್ಕೆ ಚೀತಾಗಳನ್ನು ಮರುಪರಿಚಯಿಸುವುದಕ್ಕೆ ಸಹಕಾರ ನೀಡುತ್ತಿರುವ ದಕ್ಷಿಣ ಆಫ್ರಿಕಾ ಮತ್ತು ನಮೀಬಿಯಾದ ತಜ್ಞರು ಶಿಫಾರಸು ಮಾಡಿದ್ದರು.

‘ಬೇಲಿ ಹಾಕುವುದರಿಂದ ಪ್ರಾಣಿಗಳ ಮುಕ್ತ ಸಂಚಾರಕ್ಕೆ ತೊಡಕು ಉಂಟಾಗಲಿದೆ’ ಎಂದು ಭಾರತದ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

‘ಸಂರಕ್ಷಿತ ಪ್ರದೇಶಗಳು ರಾಷ್ಟ್ರೀಯ ಉದ್ಯಾನಗಳಲ್ಲಿ ವಿಲೀನಗೊಳ್ಳಬೇಕು. ಇದರಿಂದ ವನ್ಯ ಜೀವಿಗಳ ನಡುವೆ ಅನುವಂಶಿಕ ಧಾತುಗಳು ಹರಿದಾಡುವುದು ಸಾಧ್ಯವಾಲಿದೆ’ ಎಂದು ರಾಜೇಶ್ ಗೋಪಾಲ್ ಅವರು ಹೇಳಿದ್ದಾರೆ.

‘ಸಾವಿಗೆ ಹೊಣೆ ಹೊರುತ್ತೇವೆ’

ನವದೆಹಲಿ (ಪಿಟಿಐ): ‘ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಸಂಭವಿಸಿದ ಚೀತಾಗಳ ಸಾವಿನ ಹೊಣೆಯನ್ನು ನಾವೇ ಹೊರುತ್ತೇವೆ. ಆದರೆ, ಅವುಗಳನ್ನು ಈ ರಾಷ್ಟ್ರೀಯ ಉದ್ಯಾನಕ್ಕೆ ಸ್ಥಳಾಂತರಗೊಳಿಸುವ ಯೋಜನೆಯನ್ನು ಯಶಸ್ವಿಗೊಳಿಸಲಾಗುವುದು’ ಎಂದು ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಗುರುವಾರ ಹೇಳಿದ್ದಾರೆ.

ಖಾಸಗಿ ಸುದ್ದಿವಾಹಿನಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಇದು ಅಂತರರಾಷ್ಟ್ರೀಯ ಯೋಜನೆಯಾಗಿದೆ. ಯೋಜನೆ ಅನುಷ್ಠಾನ ವೇಳೆ ಕೆಲ ಚೀತಾಗಳು ಸಾವನ್ನಪ್ಪಬಹುದು ಎಂದು ನಿರೀಕ್ಷೆ ಮಾಡಿದ್ದೆವು. ಈ ಬಗ್ಗೆ ನಾವು ಬಿಡುಗಡೆ ಮಾಡಿರುವ ಯೋಜನಾ ವರದಿಯಲ್ಲಿಯೂ ಉಲ್ಲೇಖಿಸಲಾಗಿದೆ’ ಎಂದರು. ‘ಭಾರತ ತಲುಪುವ ಮೊದಲೇ ಒಂದು ಚೀತಾ ಅಸ್ವಸ್ಥಗೊಂಡಿತ್ತು. ಉಳಿದ ಎರಡು ಚೀತಾಗಳ ಸಾವಿಗೆ ಸಂಬಂಧಿಸಿದ ಕಾರಣಗಳನ್ನು ಸಹ ನಾವು ವಿವರಿಸಿದ್ದೇವೆ’ ಎಂದು ಯಾದವ್ ಹೇಳಿದರು.

ಬ್ಯಾಡ್ಮಿಂಟನ್: ಕ್ವಾರ್ಟರ್‌ಗೆ ಕಿರಣ್ ಜಾರ್ಜ್, ಲಕ್ಷ್ಯ

ಬ್ಯಾಂಕಾಕ್ (ಪಿಟಿಐ): ಯಶಸ್ವಿನ ಓಟ ಮುಂದುವರಿಸಿರುವ ಭಾರತದ ಕಿರಣ್ ಜಾರ್ಜ್, 26ನೇ ಕ್ರಮಾಂಕದ ಚೀನಾ ಆಟಗಾರ ವೆಂಗ್ ಹಾಂಗ್ ಯಾಂಗ್ ಅವರನ್ನು ಗುರುವಾರ ನೇರ ಸೆಟ್‌ಗಳಿಂದ ಹಿಮ್ಮೆಟ್ಟಿಸಿ ಥಾಯ್ಲೆಂಡ್ ಓಪನ್ ಸೂಪರ್ 500 ಟೂರ್ನಿಯ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು. ಭಾರತದ ಲಕ್ಷ್ಯ ಸೇನ್ ಕೂಡ ಚೀನಾದ ಪ್ರಬಲ ಎದುರಾಳಿ ಮೇಲೆ ಗೆದ್ದು ಎಂಟರ ಘಟ್ಟಕ್ಕೆ ಮುನ್ನಡೆದರು.

ವಿಶ್ವ ಕ್ರಮಾಂಕದಲ್ಲಿ 59ನೇ ಸ್ಥಾನದಲ್ಲಿರುವ ಕಿರಣ್, ತಮಗಿಂತ ಮೇಲಿನ ಕ್ರಮಾಂಕದ ವೆಂಗ್ ಅವರನ್ನು 21–11, 21–19 ರಿಂದ ಸೋಲಿಸಲು 39 ನಿಮಿಷ ತೆಗೆದುಕೊಂಡರು. ಆ ಮೂಲಕ ಅವರು ಬಿಡಬ್ಲ್ಯುಎಫ್ ವಿಶ್ವ ಟೂರ್ ಸೂಪರ್ 500 ಟೂರ್ನಿಯೊಂದರಲ್ಲಿ ಇದೇ ಮೊದಲ ಬಾರಿ ಎಂಟರ ಘಟ್ಟ ತಲುಪಿದಂತಾಯಿತು.

ಲಕ್ಷ್ಯ ಸೇನ್ ಇನ್ನೊಂದು ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ನಾಲ್ಕನೇ ಶ್ರೇಯಾಂಕದ ಲಿ ಷಿ ಫೆಂಗ್ ಅವರನ್ನು 21–17, 21–15 ರಿಂದ ಪರಾಭವಗೊಳಿಸಿದರು.

ಸೈನಾ, ಅಶ್ಮಿತಾಗೆ ಸೋಲು: ಮೂರನೇ ಶ್ರೇಯಾಂಕದ ಆಟಗಾರ್ತಿ, ಚೀನಾದ ಹಿ ಬಿಂಗ್ ಜಿಯಾವೊ ಮಹಿಳೆಯರ ಸಿಂಗಲ್ಸ್ ಪ್ರಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 21–11, 21–14 ರಿಂದ ಭಾರತದ ಸೈನಾ ನೆಹ್ವಾಲ್ ಅವರನ್ನು ಮಣಿಸಿದರು. ವಿಶ್ವಕ್ರಮಾಂಕದಲ್ಲಿ ಐದನೇ ಸ್ಥಾನದಲ್ಲಿರುವ ಆಟಗಾರ್ತಿಗೆ ಸೈನಾ ಹೆಚ್ಚಿನ ಪೈಪೋಟಿ ಒಡ್ಡಲಿಲ್ಲ.

ಲಕ್ಷ್ಯ ಸೇನ್

ಮೂರು ಬಾರಿಯ ವಿಶ್ವ ಚಾಂಪಿಯನ್ ಕರೋಲಿನಾ ಮರಿನ್ ಇನ್ನೊಂದು ಪಂದ್ಯದಲ್ಲಿ ಭಾರತದ ಅಶ್ಮಿತಾ ಚಲಿಹಾ ಅವರನ್ನು 21–18, 21–13 ರಿಂದ ಸೋಲಿಸಿದರು. ಮರಿನ್ ಇಲ್ಲಿ ನಾಲ್ಕನೇ ಶ್ರೇಯಾಂಕ ಹೊಂದಿದ್ದಾರೆ.

ಪುರುಷರ ಡಬಲ್ಸ್‌ನಲ್ಲಿ ಭಾರತದ ಅಗ್ರಮಾನ್ಯ ಜೋಡಿಯಾದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಹೊರಬಿದ್ದರು. ಇಂಡೊನೇಷ್ಯಾದ ಮುಹಮ್ಮದ್ ಶೊಹಿಬುಲ್ ಫಿಕ್ರಿ–ಮೌಲಾನಾ ಬೇಗಾಸ್ ಜೋಡಿ 24–26, 21–11, 21–17 ರಿಂದ ಭಾರತದ ಜೋಡಿಯನ್ನು ಸೋಲಿಸಿತು.

ರೂಡ್, ರಿಬಾಕಿನಾ ಮುನ್ನಡೆ

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ಮೂರನೇ ಸುತ್ತಿಗೆ ಜೊಕೊವಿಚ್, ಇಗಾ

ಪ್ಯಾರಿಸ್ (ಎಎಫ್‌ಪಿ/ ರಾಯಿಟರ್ಸ್): ನಾರ್ವೆಯ ಕ್ಯಾಸ್ಪರ್ ರೂಡ್ ಮತ್ತು ಕಜಕಸ್ತಾನದ ಎಲೆನಾ ರಿಬಾಕಿನಾ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಹಾಗೂ ಮಹಿಳೆಯರ ಸಿಂಗಲ್ಸ್ ವಿಭಾಗದ ಮೂರನೇ ಸುತ್ತು ಪ್ರವೇಶಿಸಿದರು.

ಗುರುವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ ಕಳೆದ ಬಾರಿಯ ರನ್ನರ್ ಅಪ್ ರೂಡ್ 6-3, 6-2, 4-6, 7-5 ರಿಂದ ಇಟಲಿಯ ಆಟಗಾರ, ಅರ್ಹತಾ ಸುತ್ತಿನಲ್ಲಿ ಗೆದ್ದು ಬಂದಿದ್ದ ಗ್ಯುಲಿಯೊ ಜೆಪಿಯೆರಿ ಅವರನ್ನು ಮಣಿಸಿದರು.

ಮೊದಲ ಎರಡು ಸೆಟ್‌ಗಳನ್ನು ಗೆದ್ದುಕೊಂಡ ರೂಡ್, ಸುಲಭ ಗೆಲುವಿನ ನಿರೀಕ್ಷೆಯಲ್ಲಿದ್ದರು. ಆದರೆ ಮೂರನೇ ಸೆಟ್ ಗೆದ್ದ ಜೆಪಿಯೆರಿ, ನಾಲ್ಕನೇ ಸೆಟ್‌ನಲ್ಲಿ 5–5 ರಲ್ಲಿ ಸಮಬಲ ಸಾಧಿಸಿದರು. ಈ ವೇಳೆ ಎಚ್ಚರಿಕೆಯ ಆಟವಾಡಿದ ರೂಡ್ ಬಿರುಸಿನ ಹೊಡೆತಗಳ ಮೂಲಕ ಮೇಲುಗೈ ಸಾಧಿಸಿ ಪಂದ್ಯ ಗೆದ್ದರು.

ಡೆನ್ಮಾರ್ಕ್‌ನ ಹೋಲ್ಗರ್ ರೂನ್ ಅವರು ಫ್ರಾನ್ಸ್‌ನ ಗೇಲ್ ಮೊಂಫಿಲ್ಸ್ ಎದುರು 'ವಾಕ್ ಓವರ್' ಪಡೆದರು. 36 ವರ್ಷದ ಮೊಂಫಿಲ್ಸ್ ಅವರು ಮಣಿಕಟ್ಟಿನ ಗಾಯದ ಕಾರಣ ಟೂರ್ನಿಯಿಂದ ಹಿಂದೆ ಸರಿದರು.

ರಿಬಾಕಿನಾಗೆ ಗೆಲುವು: ನಾಲ್ಕನೇ ಶ್ರೇಯಾಂಕದ ಆಟಗಾರ್ತಿ ರಿಬಾಕಿನಾ 6–3, 6–3 ರಲ್ಲಿ ಜೆಕ್ ರಿಪಬ್ಲಿಕ್‌ನ ಲಿಂಡಾ ನೊಸ್ಕೊವಾ ಎದುರು ಗೆದ್ದರು. ವಿಂಬಲ್ಡನ್ ಚಾಂಪಿಯನ್ ಆಗಿರುವ ರಿಬಾಕಿನಾ ಮುಂದಿನ ಪಂದ್ಯದಲ್ಲಿ ಸ್ಪೇನ್‌ನ ಸಾರಾ ಸೊರಿಬೆಸ್ ಟೊರ್ಮೊ ವಿರುದ್ಧ ಹಣಾಹಣಿ ನಡೆಸುವರು.

ಕಜಕಸ್ತಾನದ ಎಲೆನಾ ರಿಬಾಕಿನಾ ಆಟದ ವೈಖರಿ –ಎಎಫ್‌ಪಿ ಚಿತ್ರ

ಅಮೆರಿಕದ ಕೈಲಾ ಡೇ 6-2, 4-6, 6-4 ರಲ್ಲಿ ತನ್ನದೇ ದೇಶದ ಅನುಭವಿ ಆಟಗಾರ್ತಿ ಮ್ಯಾಡಿಸನ್ ಕೀಸ್ ಅವರಿಗೆ ನಿರ್ಗಮನದ ಹಾದಿ ತೋರಿದರು. 74 ಸ್ವಯಂಕೃತ ತಪ್ಪುಗಳನ್ನು ಮಾಡಿದ 20ನೇ ಶ್ರೇಯಾಂಕದ ಆಟಗಾರ್ತಿ ಮ್ಯಾಡಿಸನ್, ಪಂದ್ಯವನ್ನು ಎದುರಾಳಿಗೆ ಒಪ್ಪಿಸಿದರು.

ಅಗ್ರಶ್ರೇಯಾಂಕದ ಆಟಗಾರ್ತಿ ಪೋಲೆಂಡ್‌ನ ಇಗಾ ಶ್ವಾಂಟೆಕ್ ಎರಡನೇ ಸುತ್ತಿನಲ್ಲಿ 6–4, 6–0 ಯಿಂದ ಅಮೆರಿಕದ ಕ್ಲೈರ್ ಲಿಯು ಅವರನ್ನು ಪರಾಭವಗೊಳಿಸಿದರು.

ಇತರ ಪಂದ್ಯಗಳಲ್ಲಿ ಸ್ಲೊವಾಕಿಯದ ಅನಾ ಕರೊಲಿನಾ 6–3, 6–4 ರಿಂದ ಸ್ಪೇನ್‌ನ ಅಲಿಯೊನಾ ಬೊಲ್ಸೊವಾ ವಿರುದ್ಧ; 16 ವರ್ಷದ ಆಟಗಾರ್ತಿ ಮಿರಾ ಆಂಡ್ರೀವಾ 6–3, 6–3 ರಿಂದ ಫ್ರಾನ್ಸ್‌ನ ಡಯಾನ ಪಾರಿ ವಿರುದ್ಧ; ಸ್ಪೇನ್‌ನ ಸಾರಾ ಸೊರಿಬೆಸ್ 6–4, 6–1 ರಲ್ಲಿ ಕ್ರೊವೇಷ್ಯಾದ ಪೆಟ್ರಾ ಮಾರ್ಟಿಚ್ ವಿರುದ್ಧ ಜಯಿಸಿದರು.

ಜೊಕೊವಿಚ್ ಮುನ್ನಡೆ: ವಿಶ್ವದ ಮೂರನೇ ರ‍್ಯಾಂಕ್‌ನ ಆಟಗಾರ ಸರ್ಬಿಯದ ನೊವಾಕ್ ಜೊಕೊವಿಚ್ ಅವರು ಬುಧವಾರ ರಾತ್ರಿ ನಡೆದ ಪಂದ್ಯದಲ್ಲಿ 7–6, 6–0, 6–3 ರಲ್ಲಿ ಹಂಗರಿಯ ಮಾರ್ಟೊನ್ ಫುಕ್ಸೊವಿಕ್ಸ್ ವಿರುದ್ಧ ಗೆದ್ದು ಮೂರನೇ ಸುತ್ತಿಗೆ ಮುನ್ನಡೆದರು.

ದಾಖಲೆಯ 23ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಜೊಕೊವಿಚ್‌ಗೆ ಮೊದಲ ಸೆಟ್‌ನಲ್ಲಿ ಭಾರೀ ಪೈಪೋಟಿ ಎದುರಾಯಿತು. ಆ ಬಳಿಕ ಅದ್ಭುತ ಲಯದಲ್ಲಿ ಆಡಿ ಕೇವಲ ಮೂರು ಗೇಮ್‌ಗಳನ್ನು ಮಾತ್ರ ಎದುರಾಳಿಗೆ ಬಿಟ್ಟುಕೊಟ್ಟು ಮುಂದಿನ ಸುತ್ತು ಪ್ರವೇಶಿಸಿದರು.

ಸಿನ್ನರ್‌ಗೆ ಸೋಲು: ಎರಡು ಮ್ಯಾಚ್ ಪಾಯಿಂಟ್‌ಗಳನ್ನು ಕಳೆದುಕೊಂಡ ಎಂಟನೇ ಶ್ರೇಯಾಂಕದ ಯಾನಿಕ್ ಸಿನ್ನರ್ ಅಂತಿಮವಾಗಿ ಜರ್ಮನಿಯ ಡೇನಿಯಲ್ ಅಲ್ಟ್ಮೇರ್ ಎದುರು ಪಂದ್ಯವನ್ನೇ ಸೋತರು. ಸುಜಾನ್ ಲೆಂಗ್ಲೆನ್ ಕೋರ್ಟ್‌ನಲ್ಲಿ ಐದು ಗಂಟೆ 26 ನಿಮಿಷಗಳ ಸುದೀರ್ಘ ಸೆಣಸಾಟದಲ್ಲಿ ಅಲ್ಟ್ಮೇರ್ 6–7 (0–7), 7–6 (9–7), 1–6, 7–6 (7–4), 7–5 ರಿಂದ ಇಟಲಿಯ ಆಟಗಾರನ ಮೇಲೆ ಜಯಗಳಿಸಿದರು.

ತನ್ನ 5 ನೇ ಐಪಿಎಲ್ ಟೈಟಲ್‌ನೊಂದಿಗೆ ಸಿ ಎಸ್ ಕೆ!

ಧೋನಿಗೆ ಮಂಡಿ ಶಸ್ತ್ರ ಚಿಕಿತ್ಸೆ

ನವದೆಹಲಿ: ಭಾರತ ತಂಡದ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಅವರಿಗೆ ಗುರುವಾರ ಮುಂಬೈನ ಆಸ್ಪತ್ರೆಯೊಂದರಲ್ಲಿ ಎಡ ಮೊಣಕಾಲಿನ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನೆರವೇರಿದೆ.

ಐಪಿಎಲ್ ಫೈನಲ್ ನಂತರ ಮಂಗಳವಾರ ಅವರು ಅಹಮದಾಬಾದ್‌ನಿಂದ ಮುಂಬೈಗೆ ಹೋಗಿದ್ದರು. ಮುಂಬೈನ ಹೆಸರಾಂತ ಮೂಳೆತಜ್ಞ ಡಾ.ದಿನ್‌ಶಾ ಪಾರ್ದಿವಾಲಾ ಅವರ ಸಲಹೆ ಪಡೆದ ಧೋನಿ, ಕೋಕಿಲಾಬೆನ್ ಧೀರೂಬಾಯಿ ಅಂಬಾನಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾದರು. ಡಾ.ಪಾರ್ದಿವಾಲಾ ಅವರು ಬಿಸಿಸಿಐ ವೈದ್ಯಕೀಯ ಸಮಿತಿಯಲ್ಲೂ ಇದ್ದು ಈ ಹಿಂದೆ ರಿಷಬ್ ಪಂತ್ ಸೇರಿ ದೇಶದ ಪ್ರಮುಖ ಕ್ರಿಕೆಟ್ ತಾರೆಗಳಿಗೆ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

'ಧೋನಿ ಅವರಿಗೆ ಗುರುವಾರ ಬೆಳಿಗ್ಗೆ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನೆರವೇರಿದೆ. ನನ್ನ ಬಳಿ ಹೆಚ್ಚಿನ ಮಾಹಿತಿಯಿಲ್ಲ. ಶಸ್ತ್ರಚಿಕಿತ್ಸೆಯ ಸ್ವರೂಪ ಮತ್ತಿತರ ಮಾಹಿತಿ ಇನ್ನೂ ಲಭ್ಯವಾಗಿಲ್ಲ' ಎಂದು ಸಿಎಸ್‌ಕೆ ತಂಡದ ಸಿಇಒ ಕಾಶಿ ವಿಶ್ವನಾಥನ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮಹೇಂದ್ರ ಸಿಂಗ್ ಧೋನಿ

'ಶಸ್ತ್ರಚಿಕಿತ್ಸೆಗಾಗಿ ಧೋನಿ ಅವರು ತಜ್ಞ ವೈದ್ಯರ ಸಲಹೆ ಪಡೆಯಲಿದ್ದಾರೆ. ಶಸ್ತ್ರಚಿಕಿತ್ಸೆಗೆ ಒಳಗಾಗುವುದು ಅವರಿಗೆ ಸಂಬಂಧಿಸಿದ್ದು' ಎಂದು ಬುಧವಾರವಷ್ಟೇ ವಿಶ್ವನಾಥನ್ ಹೇಳಿದ್ದರು.

ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿ ಗೆದ್ದುಕೊಂಡ ಭಾರತದ ಆಟಗಾರರ ಸಂಭ್ರಮ –ಎಚ್‌ಐ ಟ್ವಿಟರ್ ಚಿತ್ರ

ಜೂನಿಯರ್ ಏಷ್ಯಾ ಕಪ್ ಹಾಕಿ: ಪಾಕ್ ವಿರುದ್ಧ ಗೆಲುವು

ಭಾರತ ತಂಡ ಚಾಂಪಿಯನ್

ಸಲಾಲ, ಒಮನ್ (ಪಿಟಿಐ): ಜಿದ್ದಾಜಿದ್ದಿನ ಪೈಪೋಟಿಯ ಫೈನಲ್ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು 2–1 ಗೋಲುಗಳಿಂದ ಮಣಿಸಿದ ಭಾರತದ ಯುವ ಆಟಗಾರರು ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಗುರುವಾರ ರಾತ್ರಿ ನಡೆದ ಪಂದ್ಯದಲ್ಲಿ ಗೋಲು ಗಳಿಸಿದ ಅಂಗದ್ ಬೀರ್ ಸಿಂಗ್ (13ನೇ ನಿ.) ಮತ್ತು ಅರಿಜೀತ್ ಸಿಂಗ್ ಹುಂದಲ್ (20ನೇ ನಿ.) ಅವರು ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಕೊನೆಯ ನಿಮಿಷಗಳಲ್ಲಿ ಪಾಕ್ ಆಟಗಾರರು ಒಡ್ಡಿದ ಪ್ರಬಲ ಸವಾಲನ್ನು ಉತ್ತಮ್ ಸಿಂಗ್ ನೇತೃತ್ವದ ಭಾರತ ತಂಡ, ಸಮರ್ಥವಾಗಿ ಬದಿಗೊತ್ತಿತು.

ಆಕ್ರಮಣಕಾರಿ ಆಟವಾಡಿದ ಭಾರತ, ಮೊದಲ ಎರಡು ಕ್ವಾರ್ಟರ್‌ಗಳಲ್ಲಿ ಆಟದ ಮೇಲೆ ಪೂರ್ಣ ನಿಯಂತ್ರಣ ಸಾಧಿಸಿತು. ಎರಡು ಫೀಲ್ಡ್ ಗೋಲುಗಳ ಮೂಲಕ ವಿರಾಮದ ವೇಳೆಗೆ 2–0 ರಲ್ಲಿ ಮುನ್ನಡೆ ಸಾಧಿಸಿತು.

ಮೂರನೇ ಕ್ವಾರ್ಟರ್‌ನಲ್ಲಿ ಪಾಕ್ ತಂಡ ಮರುಹೋರಾಟ ನಡೆಸಿತು. 38ನೇ ನಿಮಿಷದಲ್ಲಿ ಬಶಾರತ್ ಅಲಿ ಗಳಿಸಿದ ಗೋಲಿನಿಂದ ಹಿನ್ನಡೆಯನ್ನು 1–2 ಕ್ಕೆ ತಗ್ಗಿಸಿತು. ಕೊನೆಯ ಕ್ವಾರ್ಟರ್‌ನಲ್ಲಿ ಎದುರಾಳಿ ತಂಡದವರು ಸಮಬಲದ ಗೋಲಿಗೆ ಪ್ರಯತ್ನಿಸಿದರೂ, ಭಾರತದ ಗೋಲ್‌ಕೀಪರ್ ಶಶಿಕುಮಾರ್ ಮೋಹಿತ್ ಹಾಗೂ ಡಿಫೆಂಡರ್‌ಗಳು ತಡೆಯಾಗಿ ನಿಂತರು.

ಈ ಗೆಲುವಿನ ಮೂಲಕ ಭಾರತ ತಂಡವು ಮಲೇಷ್ಯಾದಲ್ಲಿ ನಡೆಯಲಿರುವ ಜೂನಿಯರ್ ವಿಶ್ವಕಪ್ ಟೂರ್ನಿಗೆ ಅರ್ಹತೆ ಪಡೆದುಕೊಂಡಿತು.

ನಾಲ್ಕನೇ ಪ್ರಶಸ್ತಿ: ಜೂನಿಯರ್ ಏಷ್ಯಾ ಕಪ್‌ನಲ್ಲಿ ಭಾರತಕ್ಕೆ ಲಭಿಸಿದ ನಾಲ್ಕನೇ ಪ್ರಶಸ್ತಿ ಇದು. ಈ ಹಿಂದೆ 2004, 2008 ಮತ್ತು 2015 ರಲ್ಲಿ ಚಾಂಪಿಯನ್ ಆಗಿತ್ತು. ಪಾಕಿಸ್ತಾನವು 1987, 1992 ಮತ್ತು 1996 ರಲ್ಲಿ ಕಿರೀಟ ಗೆದ್ದುಕೊಂಡಿದೆ.

₹ 2 ಲಕ್ಷ ಬಹುಮಾನ

ಏಷ್ಯಾ ಕಪ್ ಗೆದ್ದ ಭಾರತ ತಂಡದ ಸದಸ್ಯರಿಗೆ ಹಾಕಿ ಇಂಡಿಯಾ ತಲಾ ₹ 2 ಲಕ್ಷ ಹಾಗೂ ಕೋಚಿಂಗ್ ಸಿಬ್ಬಂದಿಗೆ ತಲಾ ₹ 1 ಲಕ್ಷ ನಗದು ಬಹುಮಾನ ಪ್ರಕಟಿಸಿದೆ.

ಈಜು: ಇಶಾನ್, ಹಷಿಕಾ ನೂತನ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾಲ್ಫಿನ್ ಅಕ್ವೆಟಿಕ್ಸ್‌ನ ಇಶಾನ್ ಮೆಹ್ರಾ ಹಾಗೂ ಹಷಿಕಾ ರಾಮಚಂದ್ರ ಅವರು ಬಸವನಗುಡಿ ಈಜುಕೇಂದ್ರದಲ್ಲಿ ನಡೆಯುತ್ತಿರುವ ಎನ್‌ಆರ್‌ಜೆ ರಾಜ್ಯ ಈಜು ಚಾಂಪಿಯನ್‌ಷಿಪ್‌ನಲ್ಲಿ ನೂತನ ದಾಖಲೆ ನಿರ್ಮಿಸಿದರು.

ಎರಡನೇ ಗುಂಪಿನ ಬಾಲಕರ ವಿಭಾಗದಲ್ಲಿ 50 ಮೀಟರ್ಸ್ ಬ್ಯಾಕ್‌ಸ್ಟ್ರೋಕ್ ಹಾಗೂ 50 ಮೀಟರ್ ಫ್ರೀಸ್ಟೈಲ್‌ನಲ್ಲಿ ದಾಖಲೆ ಬರೆದರು. ಒಂದನೇ ಗುಂಪಿನ ಬಾಲಕಿಯರ 200 ಮೀಟರ್ ಬಟರ್‌ಫ್ಲೈನಲ್ಲಿ ಹಷಿಕಾ ರಾಮಚಂದ್ರ 2 ನಿಮಿಷ 20.70ಸೆಕೆಂಡುಗಳಲ್ಲಿ ಗುರಿ ಮುಟ್ಟಿ ನೂತನ ದಾಖಲೆ ನಿರ್ಮಿಸಿದರು.

ಫಲಿತಾಂಶಗಳು: ಪುರುಷರು: 800 ಮೀ ಫ್ರೀಸ್ಟೈಲ್: ಅನೀಷ್ ಎಸ್ ಗೌಡ (ಕಾಲ: 8ನಿ,27.22ಸೆ)–1, ಶಿವಾಂಕ್ ವಿಶ್ವನಾಥ –2, ಧ್ಯಾನ್ ಬಾಲಕೃಷ್ಣ –3 (ಮೂವರೂ ಬಸವನಗುಡಿ ಈಜು ಕೇಂದ್ರದವರು)

200 ಮೀ ಬಟರ್‌ಫ್ಲೈ: ಉತ್ಕರ್ಷ್ ಎಸ್ ಪಾಟೀಲ (2ನಿ, 10.06ಸೆ)–1, ಆದಿತ್ಯ ಪ್ರಭು –2, ಶ್ರೇಯಸ್ ವೆಂಕಟೇಶ್ –3 (ಮೂವರೂ ಬಸವನಗುಡಿ ಈಜುಕೇಂದ್ರದವರು)

50 ಮೀ ಬ್ಯಾಕ್‌ಸ್ಟ್ರೋಕ್: ಎಸ್. ಶಿವಾ (ಬಸವನಗುಡಿ; 27.46ಸೆ)–1, ಉತ್ಕರ್ಷ್ ಪಾಟೀಲ (ಬಸವನಗುಡಿ)–2, ಎಂ. ಧ್ಯಾನ್ (ಗ್ಲೋಬಲ್)–3

50 ಮೀ ಫ್ರೀಸ್ಟೈಲ್: ತನೀಷ್ ಜಾರ್ಜ್ ಮ್ಯಾಥ್ಯೂ (ಬಸವನಗುಡಿ; 23.85ಸೆ)–1, ಆರ್. ಸಂಭವ್ (ಡಾಲ್ಫಿನ್)–2, ಎಂ. ಪೃಥ್ವಿ (ಬಸವನಗುಡಿ)–3

ಬಾಲಕರು: ಗುಂಪು 1:

50 ಮೀ ಬ್ಯಾಕ್‌ಸ್ಟ್ರೋಕ್: ಆಕಾಶ ಮಣಿ(ಬಸವನಗುಡಿ; 27.14ಸೆ)–1, ಅಮನ್ ಅಭಿಜಿತ್ ಸುಣಗಾರ (ಡಾಲ್ಫಿನ್)–2, ಎಸ್. ವಿಶ್ವನಾಥನ್ (ಪಿ.ಎಂ. ಸ್ವಿಮ್ಮಿಂಗ್ ಸೆಂಟರ್)–3

50 ಮೀ ಫ್ರೀಸ್ಟೈಲ್: ಎಸ್. ವಿಶ್ವನಾಥನ್ (ಪಿ.ಎಂ. ಈಜುಕೇಂದ್ರ; 24.43ಸೆ)–1, ರಿಷಭ್ ಸಿಂಗ್ ಧಡ್ವಾಲ್ (ಡಾಲ್ಫಿನ್)–2, ಚಿಂತನ್ ಎಸ್ ಶೆಟ್ಟಿ (ಮಂಗಲಾ ಈಜುಕ್ಲಬ್)–3

800 ಮೀ ಫ್ರೀಸ್ಟೈಲ್: ಪವನ ಧನಂಜಯ್ (8ನಿ,45.74ಸೆ)–1, ಎಸ್. ದರ್ಶನ್ –2, ಎಸ್. ದಕ್ಷಣ್ –3 (ಮೂವರು ಬಸವನಗುಡಿ ಈಜುಕೇಂದ್ರ)

200 ಮೀ ಬಟರ್‌ಫ್ಲೈ: ಎಸ್. ದರ್ಶನ್ (ಬಸವನಗುಡಿ; 2ನಿ,08.38ಸೆ)–1, ಎಸ್. ಧನುಷ್ (ಬಸವನಗುಡಿ)–2, ಕಾರ್ತಿಕೆಯನ್ ನಾಯರ್ (ಡಾಲ್ಫಿನ್)–3

ಗುಂಪು 2: 200 ಮೀ ಬಟರ್‌ಫ್ಲೈ: ಅಕ್ಷಜ್ ಠಾಕೂರಿಯಾ (ಡಾಲ್ಫಿನ್; 2ನಿ, 15.79ಸೆ)–1, ಹರಿಕಾರ್ತಿಕ್ ವೇಲು (ಗೋಲ್ಡನ್ ಫಿನ್ಸ್)–2, ಅನಿಶ್ ಎ ಕೋರೆ (ಬಸವನಗುಡಿ)–3.

ಗುಂಪು 2: 50 ಮೀ ಬ್ಯಾಕ್‌ಸ್ಟ್ರೋಕ್: ಇಶಾನ್ ಮೆಹ್ರಾ (ಡಾಲ್ಫಿನ್; ನೂತನ ದಾಖಲೆ: 28.71ಸೆ)–1, ಇದಾಂತ್ ಶಾಶ್ವತ್ ಚತುರ್ವೇದಿ (ಪಿ.ಎಂ.ಈಜುಕೇಂದ್ರ)–2, ವಾಫಿ ಅಬ್ದುಲ್ ಹಕೀಂ (ಬಸವನಗುಡಿ)–3

50 ಮೀ ಫ್ರೀಸ್ಟೈಲ್: ಇಶಾನ್ ಮೆಹ್ರಾ (ಡಾಲ್ಫಿನ್ : ನೂತನ ದಾಖಲೆ: 24.78ಸೆ)–1, ಸಾತ್ವಿಕ್ ಎನ್. ಸುಜೀರ್ (ಡಾಲ್ಫಿನ್)–2, ನಿಶಾಂತ್ ಜೆ. (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)–3

ಹಷಿಕಾ ರಾಮಚಂದ್ರ

4X100 ಮೀ ಮೆಡ್ಲೆ: ಬಸವನಗುಡಿ ಈಜುಕೇಂದ್ರ (4ನಿ, 17.92ಸೆ)–1, ಡಾಲ್ಫಿನ್ –2, ಬಿಎಸಿ (ಬಿ)–3

ಗುಂಪು 3: 50 ಮೀ ಬ್ಯಾಕ್‌ಸ್ಟ್ರೋಕ್: ಅಮಿತ್ ಪವನ್ (ಗ್ಲೋಬಲ್ ಸ್ವಿಮ್ ಸೆಂಟರ್; 38.18ಸೆ)–1, ರಕ್ಷಿತ್ ಎ ಕೋರೆ (ಬಸವನಗುಡಿ)–2, ಶಾನ್ ಫ್ಯಾಬಿಯನ್ (ಡಿಕೆವಿ)–3

50 ಮೀ ಫ್ರೀಸ್ಟೈಲ್: ಎಸ್. ಕ್ರಿಷ್ (ಬಸವನಗುಡಿ; 30.59ಸೆ)–1, ನಿಖಿಲ್ ತೇಜ್ ರೆಡ್ಡಿ (ಬಸವನಗುಡಿ)–2, ಅಮಿತ್ ಪವನ್ ಎಚ್ (ಗ್ಲೋಬಲ್)–3

4X50ಮೀ ಮೆಡ್ಲೆ: ಬಸವನಗುಡಿ ಈಜುಕೇಂದ್ರ ಎ (2ನಿ,30.34ಸೆ)–1, ಡಾಲ್ಫಿನ್ ಅಕ್ವೆಟಿಕ್ಸ್–2, ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್ –3

ಮಹಿಳೆಯರು:50 ಮೀ ಫ್ರೀಸ್ಟೈಲ್: ನಿನಾ ವೆಂಕಟೇಶ್ (ಡಾಲ್ಫಿನ್; ನೂತನದಾಖಲೆ 26.65ಸೆ)–1, ಲತೀಷಾ ಮಂದಣ್ಣ (ರೇ ಅಕ್ವೆಟಿಕ್ ಸೆಂಟರ್)–2, ರಿತು ಭರಮರೆಡ್ಡಿ (ಬಸವನಗುಡಿ)–3

800 ಮೀ ಫ್ರೀಸ್ಟೈಲ್: ಅಸ್ಮಿತಾ ಚಂದ್ರ (ರೇ ಅಕ್ವೆಟಿಕ್ ಸೆಂಟರ್; 9ನಿ,38.54ಸೆ)–1, ಅನುಮತಿ ಚೌಗುಲೆ (ಬಸವನುಗುಡಿ)–2, ಬಿ.ಜಿ. ಮಧುರಾ (ಬಸವನಗುಡಿ)–3

200 ಮೀ ಬಟರ್‌ಫ್ಲೈ: ಎ.ಜಿದಿದಾ (ಡಿಕೆವಿ ಅಕ್ವೆಟಿಕ್ ಸೆಂಟರ್; 2ನಿ,31. 45ಸೆ)–1, ಥಿತಿಕ್ಷಾ ಹನುಮಂತರಾಜು (ಬಸವನಗುಡಿ)–2, ಅನ್ನಾ ಸ್ಫೂರ್ತಿ ತೆರೇಸಾ (ಡಾಲ್ಫಿನ್)–3

50 ಮೀ ಬ್ಯಾಕ್‌ಸ್ಟ್ರೋಕ್: ಸುವರ್ಣ ಸಿ ಭಾಸ್ಕರ್ (ಡಾಲ್ಫಿನ್; 30.35ಸೆ)–1, ರಿತು ಭರಮರೆಡ್ಡಿ (ಬಸವನಗುಡಿ)–2, ನೀಲಾಂಜನ ಸೀಲ್ (ಗ್ಲೋಬಲ್)–3

ಬಾಲಕಿಯರು: ಗುಂಪು 1: 800 ಮೀ ಫ್ರೀಸ್ಟೈಲ್: ಶಿರಿನ್ (ಬಸವನಗುಡಿ; 9ನಿ,32.59ಸೆ)–1, ಅದಿತಿ ಎನ್. ಮೂಲ್ಯಾ (ಬಸವನಗುಡಿ)–2, ಎಂ.ಪಿ. ಆಮಾ (ಡಾಲ್ಫಿನ್)–3.

50 ಮೀ ಬ್ಯಾಕ್‌ಸ್ಟ್ರೋಕ್: ರಿಧಿಮಾ ವೀರೇಂದ್ರಕುಮಾರ್ (ಬಸವನಗುಡಿ; 30.52ಸೆ)–1, ಆರುಷಿ ಅಗರವಾಲ್ (ಡಾಲ್ಫಿನ್)–2, ಶಾಲಿನಿ ಆರ್ ದೀಕ್ಷಿತ್ (ಡಾಲ್ಫಿನ್)–3

200 ಮೀ ಬಟರ್‌ಫ್ಲೈ: ಹಷಿಕಾ ರಾಮಚಂದ್ರ (ಡಾಲ್ಫಿನ್; ನೂತನ ದಾಖಲೆ: 2ನಿ,20.70ಸೆ)–1, ಬಿ.ಎಂ. ರಿತಿಕಾ (ಬಸವನಗುಡಿ)–2, ಸಬಾ ಸುಹಾನ (ಡಾಲ್ಫಿನ್)–3

50 ಮೀ ಫ್ರೀಸ್ಟೈಲ್: ಮಾನವಿ ವರ್ಮಾ (ಡಾಲ್ಫಿನ್; 27.49ಸೆ)–1, ವಿನೀತಾ ನಯನಾ (ಬಸವನಗುಡಿ)–2, ಶಾಲಿನಿ ಆರ್ ದೀಕ್ಷಿತ್ (ಡಾಲ್ಫಿನ್)–3

ಗುಂಪು 2: 50 ಮೀ ಬ್ಯಾಕ್‌ಸ್ಟ್ರೋಕ್: ನೈಷಾ (ಬಸವನಗುಡಿ; 31.98ಸೆ)–1, ಎಂ.ಎನ್. ತಾನ್ಯಾ (ಬಸವನಗುಡಿ)–2, ಕೌಸಮಿ ಕೆ. ಮೊನ್ಯಾ (ಪುತ್ತೂರು ಅಕ್ವೆಟಿಕ್ ಕ್ಲಬ್)–3

50 ಮೀ ಫ್ರೀಸ್ಟೈಲ್: ರಿಯಾನಾ ಧೃತಿ ಫರ್ನಾಂಡಿಸ್ (ಡಾಲ್ಫಿನ್; 29.20ಸೆ)–1, ಎ. ಶಾನವಿ (ಡಿಕೆವಿ)–2, ಪಿ.ವಿ. ಸಂಜನಾ (ಬಸವನಗುಡಿ)–3

ಗುಂಪು 3: 50 ಮೀ ಬ್ರೆಸ್ಟ್‌ಸ್ಟ್ರೋಕ್: ವಿ. ಸುಮೇಧಾ (ಡಿಕೆವಿ; 37.28ಸೆ)–1, ಅವನಿ ಬೆಳ್ಳಿಯಪ್ಪ (ಡಿಕೆವಿ)–2, ವಿಭಾ ರೆಡ್ಡಿ ಮರಮ್ (ಡಾಲ್ಫಿನ್)–3.

50 ಮೀ ಫ್ರೀಸ್ಟೈಲ್: ದಿಶಾ ಹೊಂಡಿ (ಎಬಿಬಿಎ ಸ್ಪೋರ್ಟ್ಸ್ ಕ್ಲಬ್; 32.37ಸೆ)–1, ಮಾನ್ಯಾ ಆರ್ ವಾಧ್ವಾ (ಪಿ.ಎಂ. ಈಜುಕೇಂದ್ರ)–2, ಮುಂಜಂದಿರಾ ನಿರ್ವಿ ಪೂಣಚ್ಚ (ಬಸವನಗುಡಿ)–3

4X50ಮೀ ಮೆಡ್ಲೆ: ಡಾಲ್ಫಿನ್ (2ನಿ, 32.09ಸೆ)–1, ಗೋಲ್ಡನ್ ಫಿನ್ಸ್ ಸ್ಪೋರ್ಟ್ಸ್ ಕ್ಲಬ್–2, ಡಿಕೆವಿ ಅಕ್ವೆಟಿಕ್ –3.

ಸಂಕ್ಷಿಪ್ತ ಸುದ್ದಿ

ಪಿಎಸ್‌ಜಿ ಪರ ಮೆಸ್ಸಿ ಕೊನೆ ಪಂದ್ಯ ನಾಳೆ



ಪ್ಯಾರಿಸ್ (ರಾಯಿಟರ್ಸ್): ಅರ್ಜೆಂಟೀನಾದ ಫುಟ್‌ಬಾಲ್ ಆಟಗಾರ ಲಯೊನೆಲ್ ಮೆಸ್ಸಿ ಅವರು ಪ್ಯಾರಿಸ್ ಸೇಂಟ್ ಜರ್ಮನ್ (ಪಿಎಸ್‌ಜಿ) ಕ್ಲಬ್ ಪರ ಶನಿವಾರ ತಮ್ಮ ಕೊನೆಯ ಪಂದ್ಯ ಆಡಲಿದ್ದಾರೆ.

ಪಿಎಚ್‌ಜಿ ತಂಡದ ಕೋಚ್ ಕ್ರಿಸ್ಟೋಫ್ ಗಾಲ್ಟಿಯೆ ಅವರು ಗುರುವಾರ ಈ ವಿಷಯ ತಿಳಿಸಿದ್ದಾರೆ. ಮೆಸ್ಸಿ ಅವರು ಪಿಎಸ್‌ಜಿ ಕ್ಲಬ್ ತೊರೆಯುವುದು ಇದರೊಂದಿಗೆ ಖಚಿತವಾಗಿದೆ.

'ಫುಟ್‌ಬಾಲ್ ಇತಿಹಾಸದಲ್ಲೇ ಶ್ರೇಷ್ಠ ಆಟಗಾರನಿಗೆ ತರಬೇತಿ ನೀಡುವ ಅವಕಾಶ ನನಗೆ ಲಭಿಸಿತ್ತು. ಪಾರ್ಕ್ ಡೆ ಪಾಸ್‌ನಲ್ಲಿ ಮೆಸ್ಸಿ ಶನಿವಾರ ಪಿಎಸ್‌ಜಿ ಪರ ಕೊನೆಯ ಪಂದ್ಯ ಆಡಲಿದ್ದಾರೆ' ಎಂದು ಗಾಲ್ಟಿಯೆ ಸುದ್ದಿಗಾರರಿಗೆ ತಿಳಿಸಿದರು. ಮೆಸ್ಸಿ 2021 ರಲ್ಲಿ ಪಿಎಸ್‌ಜಿ ಜತೆ ಎರಡು ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಂಡಿದ್ದರು.

ಕುಸ್ತಿ: ಮಂಜಿತ್‌ಗೆ ಕಂಚಿನ ಪದಕ

ಬಿಷ್ಕೆಕ್ (ಕಿರ್ಗಿಸ್ಥಾನ) (ಪಿಟಿಐ): ಭಾರತ ಮಂಜೀತ್ ಅವರು ಯುಡಬ್ಲ್ಯುಡಬ್ಲ್ಯು ರ‍್ಯಾಂಕಿಂಗ್ ಸಿರೀಸ್ ಕುಸ್ತಿ ಸ್ಪರ್ಧೆಯ ಗ್ರೀಕೊ ರೋಮನ್ 55 ಕೆ.ಜಿ. ವಿಭಾಗದಲ್ಲಿ ಗುರುವಾರ ಕಂಚಿನ ಪದಕ ಗೆದ್ದುಕೊಂಡರು. ಆ ಮೂಲಕ ಭಾರತ ಪದಕದ ಖಾತೆ ತೆರೆಯಿತು.

ಮಂಜೀತ್, ಉಜ್ಬೇಕಿಸ್ತಾನದ ಇಕ್ತಿಯಾರ್ ಬೊಟಿರೊವ್ ಅವರೆದುರು ಕ್ವಾರ್ಟರ್‌ಫೈನಲ್‌ನಲ್ಲಿ ಸೋತಿದ್ದರು. ಆದರೆ ಬೊಟಿರೊವ್ ಫೈನಲ್ ತಲುಪಿದ ಕಾರಣ ಎರಡು ಕಂಚಿನ ಪದಕಗಳಲ್ಲಿ ಒಂದಕ್ಕೆ ಸೆಣಸಾಡುವ ಅವಕಾಶ ಭಾರತೀಯ ಪೈಲ್ವಾನನಿಗೆ ದೊರೆಯಿತು. ಮಂಜೀತ್ ಈ ಅವಕಾಶದಲ್ಲಿ ಕಜಕಸ್ತಾನದ ಯೆರ್ಸಿನ್ ಅಬಿರ್ ಅವರನ್ನು 14–9 ರಿಂದ ಸೋಲಿಸಿದರು.

ಈ ವಿಭಾಗದ ಫೈನಲ್‌ನಲ್ಲಿ ಕಜಕಸ್ತಾನದ ಮರ್ಲಾನ್ ಮುಕಶೇವ್, ಬೊಟಿರೋವ್ ಅವರನ್ನು ಸೋಲಿಸಿ ಚಿನ್ನದ ಪದಕ ಗೆದ್ದುಕೊಂಡರು.

60 ಕೆ.ಜಿ. ವಿಭಾಗದಲ್ಲಿ ಸುಮಿತ್ ರಿಪೆಚ್ ಸುತ್ತು ತಲುಪಿ, ಅಲ್ಲಿ ಕಿರ್ಗಿಸ್ತಾನದ ಬಲ್ಬಾಯ್ ದೊರ್ದೊಕೊವ್ ಅವರಿಗೆ ಮಣಿದರು. 67 ಕೆ.ಜಿ ವಿಭಾಗದಲ್ಲಿ ನೀರಜ್ ಸಹ ರಿಪೆಚ್‌ನಲ್ಲಿ ಸೋತರು.

ಖೇಲೊ ಇಂಡಿಯಾ: ಪೂನಮ್‌ಗೆ ಚಿನ್ನ

ಲಖನೌ: ಮಂಗಳೂರು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿದ ಪೂನಮ್ ಸೋನುನೆ, ಇಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ವಿಶ್ವವಿದ್ಯಾಲಯ ಕ್ರೀಡೆಗಳ ಅಥ್ಲೆಟಿಕ್ಸ್‌ನ 5 ಸಾವಿರ ಮೀ. ಓಟದಲ್ಲಿ ಚಿನ್ನ ಜಯಿಸಿದ ಸಾಧನೆ ಮಾಡಿದ್ದಾರೆ.

ಮಹಾರಾಷ್ಟ್ರದ 23 ವರ್ಷದ ಪೂನಂ ಅವರು ನಿಗದಿತ ಗುರಿಯನ್ನು 16 ನಿ. 59.31 ಸೆಂ.ನಲ್ಲಿ ತಲುಪಿದರು. ಅವರು 2018ರಲ್ಲಿ ಕೊಲಂಬೊದಲ್ಲಿ ನಡೆದ ದಕ್ಷಿಣ ಏಷ್ಯಾ ಯು20 ಚಾಂಪಿಯನ್‌ಷಿಪ್‌ನಲ್ಲಿ 3 ಸಾವಿರ ಮೀ. ಓಟದಲ್ಲಿ ಚಾಂಪಿಯನ್ ಆಗಿದ್ದರು.

ಭಾರತ ತಂಡಕ್ಕೆ ಅಗ್ರಸ್ಥಾನಕ್ಕೇರುವ ವಿಶ್ವಾಸ: ಹರ್ಮನ್‌ಪ್ರೀತ್

ಲಂಡನ್: ಟೂರ್ನಿಯಲ್ಲಿ ಇನ್ನೂ ಆರು ಪಂದ್ಯಗಳನ್ನು ಆಡಬೇಕಿದೆ. ಆದ್ದರಿಂದ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರುವ ಅವಕಾಶ ತಮ್ಮ ತಂಡಕ್ಕೆ ಇದೆ ಎಂದು ಭಾರತ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಹೇಳಿದರು.

ಎಚ್‌ಐಎಚ್ ಹಾಕಿ ಪ್ರೊ ಲೀಗ್ ಪುರುಷರ ಟೂರ್ನಿಯಲ್ಲಿ ಆಡುತ್ತಿರುವ ಭಾರತ ತಂಡವು ಹೋದವಾರ ಎರಡು ಪಂದ್ಯಗಳಲ್ಲಿ ಸೋತಿತ್ತು. ಆ ಪಂದ್ಯಗಳಲ್ಲಿ ಒಲಿಂಪಿಕ್ ಚಾಂಪಿಯನ್ ಬೆಲ್ಜಿಯಂ ತಂಡವು 2–1ರಿಂದ ಹಾಗೂ ಗ್ರೇಟ್ ಬ್ರಿಟನ್ 4–2ರಿಂದ ಭಾರತ ಬಳಗಕ್ಕೆ ಸೋಲುಣಿಸಿದ್ದವು.

ಶುಕ್ರವಾರ ಭಾರತವು ಮತ್ತೆ ಬೆಲ್ಜಿಯಂ ತಂಡ ಹಾಗೂ ಶನಿವಾರ ಗ್ರೇಟ್ ಬ್ರಿಟನ್ ಬಳಗವನ್ನು ಎದುರಿಸಲಿದೆ. ಬ್ರಿಟನ್ ತಂಡವು 10 ಪಂದ್ಯಗಳಿಂದ 25 ಹಾಗೂ ಭಾರತವು 19 ಅಂಕಗಳನ್ನು ಗಳಿಸಿದೆ.

ಗುರುವಾರ ವರ್ಚುವಲ್ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಹರ್ಮನ್‌ಪ್ರೀತ್, 'ಹೋದ ವಾರದ ಎರಡು ಸೋಲುಗಳ ಬಗ್ಗೆ ಚಿಂತೆ ಇಲ್ಲ. ನಮ್ಮ ಯೋಜನೆಯಂತೆಯೇ ಆಡುತ್ತೇವೆ. ಗೋಲು ಗಳಿಸುವ ಅವಕಾಶಗಳನ್ನು ಫಲಪ್ರದಗೊಳಿಸಿಕೊಳ್ಳುವುದು ಮುಖ್ಯ. ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯಲು ಇನ್ನೂ ಅವಕಾಶ ಇದೆ' ಎಂದರು.

ಹರ್ಮನ್‌ಪ್ರೀತ್

'ನಮ್ಮ ಎರಡೂ ಎದುರಾಳಿ ತಂಡದವರು ವಿಭಿನ್ನ ಶೈಲಿಯಲ್ಲಿಯೇ ಆಡುತ್ತಾರೆ. ಬೆಲ್ಜಿಯಂ ತಂಡವು ಝೋನಲ್ ತಂತ್ರಗಾರಿಕೆ ಹಾಗೂ ಬ್ರಿಟನ್ ಮ್ಯಾನ್ ಟು ಮ್ಯಾನ್ ತಂತ್ರ ಅನುಸರಿಸುವುದು ಹೆಚ್ಚು. ಕಳೆದೆರಡೂ ಪಂದ್ಯಗಳಲ್ಲಿ ನಾವು ಈ ಅಂಶ ತಿಳಿದುಕೊಂಡಿದ್ದೇವೆ. ಅದಕ್ಕೆ ತಕ್ಕನಾಗಿ ಪ್ರತಿತಂತ್ರ ರೂಪಿಸುತ್ತೇವೆ' ಎಂದರು.

ಸಂವಾದದಲ್ಲಿ ಹಾಜರಿದ್ದ ಉಪನಾಯಕ ಹಾರ್ದಿಕ್ ಸಿಂಗ್, 'ತಂಡದಲ್ಲಿರುವ ಯುವ ಆಟಗಾರರಿಗೆ ಲಯಕ್ಕೆ ಹೊಂದಿಕೊಳ್ಳಲು ಸ್ವಲ್ಪ ಸಮಯ ಬೇಕು. ಆದರೆ ಹೊಸಪ್ರತಿಭೆಗಳಿಗೆ ತಮ್ಮ ಸಾಮರ್ಥ್ಯ ತೋರಲು ಇದು ಉತ್ತಮ ವೇದಿಕೆಯಾಗಿದೆ' ಎಂದು ಹೇಳಿದರು.

ಸರ್ಫಿಂಗ್: ಕರ್ನಾಟಕ, ತಮಿಳುನಾಡು ಮೇಲುಗೈ

ಅಲೆಗಳ ಸವಾಲು ಮೀರಿದ 'ಕಿಶೋರ'

ಪ್ರಜಾವಾಣಿ ವಾರ್ತೆ

ಮಂಗಳೂರು: ಮೋಡ ಕವಿದ ವಾತಾವರಣದಲ್ಲಿ ಗಾಳಿಯ ವೇಗ ಮತ್ತು ತೆರೆಗಳ ಸವಾಲು ಮೀರಿದ 16 ವರ್ಷದೊಳಗಿನ ವಿಭಾಗದ ಸರ್ಫರ್, ಚೆನ್ನೈನ ಕಿಶೋರ್ ಕುಮಾರ್ ಇಲ್ಲಿನ ಮೂಲ್ಕಿ ಸಮೀಪದ ಸಸಿಹಿತ್ಲು ಬೀಚ್‌ನಲ್ಲಿ ಗುರುವಾರ ಸಂಚಲನ ಉಂಟುಮಾಡಿದರು.

ಮೂಲ್ಕಿಯ ಮಂತ್ರ ಸರ್ಫ್ ಕ್ಲಬ್ ಆಶ್ರಯದಲ್ಲಿ ಭಾರತ ಸರ್ಫಿಂಗ್ ಫೆಡರೇಷನ್ ಆಯೋಜಿಸಿರುವ ರಾಷ್ಟ್ರೀಯ ಓಪನ್ ಸರ್ಫಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಅತ್ಯಧಿಕ 12.67 ಪಾಯಿಂಟ್ ಕಲೆ ಹಾಕಿದ ಕಿಶೋರ್ 16 ವರ್ಷದೊಳಗಿನವರ ಬಾಲಕರ ವಿಭಾಗದ ಸೆಮಿಫೈನಲ್ ಪ್ರವೇಶಿಸಿದರು. ತಯಿನ್ ಅರುಣ್ (10.83 ಪಾಯಿಂಟ್), ದಿನೇಶ್ ಸೆಲ್ವಮಣಿ (9.53), ಶೇಖರ್ ಪಚಾಯಿ (9), ಹರೀಶ್ ಪಿ (8.63) ಮತ್ತು ಸೆಲ್ವಂ ಎಂ (8.53) ಕೂಡ ಉತ್ತಮ ಸಾಮರ್ಥ್ಯ ತೋರಿದರು.

ಚಾಂಪಿಯನ್‌ಷಿಪ್‌ನ ನಾಲ್ಕನೇ ಆವೃತ್ತಿಯ ಸ್ಪರ್ಧೆಗಳ ಮೊದಲ ದಿನ ಪುರುಷರ ಮತ್ತು 16 ವರ್ಷದೊಳಗಿನವರ ವಿಭಾಗದಲ್ಲಿ ಕರ್ನಾಟಕ ಹಾಗೂ ತಮಿಳುನಾಡು ಸರ್ಫರ್‌ಗಳು ಮೇಲುಗೈ ಸಾಧಿಸಿದ್ದು ಮಹಿಳೆಯರ ವಿಭಾಗದ ಸೆಮಿಫೈನಲ್ ಸ್ಪರ್ಧೆಯನ್ನು ಮಳೆಯಿಂದಾಗಿ ಶುಕ್ರವಾರಕ್ಕೆ ಮುಂದೂಡಲಾಯಿತು. ಪುರುಷರ ವಿಭಾಗದಲ್ಲಿ 12 ಸರ್ಫರ್‌ಗಳು ಎರಡನೇ ಸುತ್ತು ಪ್ರವೇಶಿಸಿದ್ದಾರೆ. ಕಳೆದ ವರ್ಷದ ರ‍್ಯಾಂಕಿಂಗ್ ಆಧಾರದಲ್ಲಿ ನೇರವಾಗಿ ಎರಡನೇ ಸುತ್ತು ತಲುಪಿರುವ 16 ಮಂದಿಯನ್ನು ಈ 12 ಮಂದಿ ಶುಕ್ರವಾರ ಎದುರಿಸಲಿದ್ದು ಕ್ವಾರ್ಟರ್‌ಫೈನಲ್ ಪ್ರವೇಶಿಸಲು ಪ್ರಯತ್ನಿಸಲಿದ್ದಾರೆ.

16 ವರ್ಷದೊಳಗಿನವರ ವಿಭಾಗದಲ್ಲಿ ಸೆಮಿಫೈನಲ್ ಪ್ರವೇಶಿಸಿರುವ ತಮಿಳುನಾಡಿನ ಕಿಶೋರ್ ಕುಮಾರ್ – ಪ್ರಜಾವಾಣಿ ಚಿತ್ರ/ಫಕ್ರುದ್ದೀನ್ ಎಚ್

ಮೈಸೂರು ರೇಸ್

ಇಂಡಿಯನ್ ಪೇಟ್ರಿಯಾಟ್ ಗೆಲ್ಲುವ ನಿರೀಕ್ಷೆ

ಡಾ| ಆರ್. ರಾಜೇಂದ್ರ ಪ್ರಸಾದ್ ಮೆಮೋರಿಯಲ್ ಟ್ರೋಫಿ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಇಂಡಿಯನ್ ಪೇಟ್ರಿಯಾಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕಂಟ್ರೀಸ್ ಫೇಮ್ 1, ಸ್ಟಾರ್ ಸ್ಟೆಕ್ 2, ಡಿ ಗೋಲ್ಡನ್ ಕಪ್ 3
2ನೇ ರೇಸ್: ಲಕ್ಕಿ ಸನ್ 3, ಕೂರ್ಗ್ ಜನರಲ್ 10, ಓರಿಯೆಂಟಲ್ ಲಿಲ್ಲಿ 9
3ನೇ ರೇಸ್: ಮಿಸ್ಟಿಕ್ ಬಾಂಡ್ 4, ಜನ್ನೈರೊ 10, ಸನ್ ಫ್ಲೇರ್ 13
4ನೇ ರೇಸ್: ಸನ್‌ಲೈಟ್ ಸ್ವಾರ್ಮ್ 4, ಫೆರೆಟ್ಟಿ 8, ಕೊಯೊಟೆ ಗರ್ಲ್ 1
5ನೇ ರೇಸ್: ಇಂಡಿಯನ್ ಪೇಟ್ರಿಯಾಟ್ 11, ಕಾಂಟ್ರಿಬ್ಯೂಟರ್ 2, ವಿಂಡ್ ಸ್ವೆಲ್ 7
6ನೇ ರೇಸ್: ಇಂಪೀರಿಯಸ್ 3, ಆರಿಲ್ 2, ಟಿಯಾ ಮೇರಿಯಾ 9
7ನೇ ರೇಸ್: ಇಂಡಿಯನ್ ಗ್ಲೋರಿ 4, ಆರ್ಟಿಕಲ್ ಫಿಫ್ಟೀನ್ 3, ಲಕ್ಕಿ ಪಾಯಿಂಟ್ 7

ಉತ್ತಮ ಬೆಟ್: ಸನ್‌ಲೈಟ್ ಸ್ವಾರ್ಮ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

ನಿಮ್ಮ ಕಣ್ಣುಗಳಿಗೆ ನೀಡಿ ನೈಸರ್ಗಿಕ ಐ ಮಂತ್ರ

Helpline: 8196822222

Dr. Juneja's ® ಐ ಮಂತ್ರ

ಐ ಮಂತ್ರ ಐ ಡ್ರಾಪ್ಸ್ ಉತ್ಪನ್ನವು ಗುಲಾಬಿ, ತುಳಸಿ, ನೆಲ್ಲಿ, ಬೇವು, ಪುದಿನ, ಜೇನು ಮುಂತಾದ 12 ಆಯುರ್ವೇದಿಕ ಮೂಲಿಕೆಗಳಿಂದ ಸೂತ್ರೀಕರಣಗೊಂಡಿದೆ. ಇದು ಕಣ್ಣುಗಳ ಒತ್ತಡ ಮತ್ತು ಆಯಾಸ ನಿವಾರಣೆಗೆ ಸಹಕಾರಿಯಾಗಿದೆ, ದಣಿದ ಕಣ್ಣುಗಳಿಗೆ ತಾಜಾತನ ನೀಡುವಲ್ಲಿ ಕೂಡ ನೆರವಾಗುತ್ತದೆ. ಇದರಲ್ಲಿರುವ ಆಯು ರ್ವೇದಿಕ ಅಂಶಗಳಿಂದಾಗಿ, ಇದು ಯಾವುದೇ ಅಡ್ಡ ಪರಿಣಾಮ ಬೀರುವುದಿಲ್ಲ.

ಸಂಪೂರ್ಣ ದೇಸಿ ಸಂಪೂರ್ಣ ಆಯುರ್ವೇದಿಕ

#VocalforLocal